
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

18 ಜೂನ್ 2014 ಪುಟ 20 ರೂ. 15/-




ಕುಂಡಲಿ ಶಕ್ತಿಯ ಬಗ್ಗೆ ಗೀಳು



ಕಾಂಗ್ರೆಸ್ ಎಂಬ ಮುಳ್ಳಿನ ಗಿಡದಲ್ಲಿ ಕೆಪ್ಪು ಗುಲಾಬಿ

ರಿಸರ ಮಂಡಳಿಯಲ್ಲೇ ಅಧಿಕಾರ ಮಾಲಿನ್ಯ





ಅವಿವೇಕಿ ಯತ್ನಾಳ್‌ನ ಕೋಮು ಪ್ರಯತ್ನ

ರವೀಂದ್ರನಾಥ್ ಪಜೀತಿಯ ನಿಜ ಮರ್ಮ






ಇನ್ನೆಷ್ಟು ದಲಿತ ಯುವತಿಯರು ಬಲಿಯಾಗಬೇಕು?

ಬಂದಿದೆ ಮೋದಿ ಸರ್ಕಾರ: ಎಲ್ಲಕ್ಕೂ ಇದೆಯಾ ಪರಿಹಾರ?

ಅಂಚಿನಿಂದ....



ಡಾ.ವಾಸು ಎಚ್.ವಿ.

ನರೇಂದ್ರ ಮೋದಿಯ ಸಿದ್ಧಾಂತದ ಬಗ್ಗೆ ಗುಜರಾತ್‌ನಲ್ಲಿ ನಡೆಸಿದ ನರಮೇಧ ಮತ್ತು ಅಭಿವೃದ್ಧಿಯ ಮಾದರಿಯ ಬಗ್ಗೆ ನಮ್ಮಂಥ ಹಲವರಿಗೆ ತೀವ್ರ ವಿರೋಧವಿತ್ತು. ಆದರೆ ಇವತ್ತು ಈ ದೇಶದಲ್ಲಿ ಇರುವ ಚುನಾವಣಾ ಪದ್ಧತಿಯ ಪ್ರಕಾರ, ಮುಂದಿನ ಐದು ವರ್ಷಗಳು ಆಳಲು ಮೋದಿಗೆ ಈ ದೇಶದ ಜನರು ಅವಕಾಶ ನೀಡಿರುವುದು ವಾಸ್ತವ. ಆ ವಾಸ್ತವವನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕು. ಅದೇ ಸಂದರ್ಭದಲ್ಲಿ ಬಿಜೆಪಿ ಮತ್ತದರ ಪರಿವಾರ ಹಾಗೂ ಸ್ವತಃ ಮೋದಿಯ ಜೊತೆಗೆ ಮೋದಿಯ ತುತ್ತೂರಿಗಳೆಲ್ಲರೂ ಒಪ್ಪಿಕೊಳ್ಳಲೇಬೇಕಾದ ಇನ್ನೊಂದು ಸಂಗತಿಯೂ ಇದೆ. ದೇಶಾದ್ಯಂತ ಇಂದು ಮೋದಿ ಹವಾ ಇದೆ ಎಂದಾದರೆ, ಆ ಹವಾದ ಹಿಂದೆ ಜನರ ಆಶೋತ್ತರಗಳಿವೆ. ಜನರ ಆ ಬಯಕೆಗಳೂ ಕೇವಲ ಅವರವರ ಮನೋಭಿಲಾಷೆಗೆ ತಕ್ಕಂತೆ ರೂಪುಗೊಂಡಿರುವವಲ್ಲ, ಬದಲಿಗೆ ಬಿಜೆಪಿಯು ಬಹಳ ವ್ಯವಸ್ಥಿತವಾಗಿ ದೇಶಾದ್ಯಂತ ತಾನೇ ಹಬ್ಬಿಸಿದ 'ಮೋದಿ ಪ್ರಧಾನಿಯಾದರೆ ಏನೇನಾಗುತ್ತದೆ?' ಎಂಬ ಭರವಸೆಗಳ ಮೇಲೆ ಈ ಹವಾ ರೂಪುಗೊಂಡಿತ್ತು; ಹಾಗೂ ಇನ್ನೂ ಜನರು ಆ ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ.

ಆ ನಂಬಿಕೆಗಳನ್ನು ಮೋದಿ ಹುಸಿಗೊಳಿಸಬಾರದು ಅಲ್ಲವೇ? ಹುಸಿಗೊಳಿಸಬಾರದು. ಏಕೆಂದರೆ ಅವೇ ಭರವಸೆಗಳು ಮತ್ತು ಅವುಗಳ ಮೇಲೆ (ಯಾವ ಕಾರಣಕ್ಕೇ ಇರಲಿ) ಜನರಿಟ್ಟ ನಂಬಿಕೆಯೇ ಈ ದೇಶದ ಮತದಾರರ ತೀರ್ಪು ನಿಂತಿರುವುದು. ಈ ಮಾತುಗಳನ್ನು ಸುಖಾಸುಮ್ಮನೆ ಹೇಳುತ್ತಿಲ್ಲ. ಉದಾಹರಣೆಗೆ ಚುನಾವಣೆಗೆ ಮುಂಚೆ ಇಂಟರ್‌ನೆಟ್‌ನಲ್ಲಿ ಮೋದಿ ಪ್ರಚಾರ ಯಂತ್ರಾಂಗದಿಂದ ಬಿಡುಗಡೆಯಾದ ಒಂದು ವಿಡಿಯೋ ಹೀಗಿತ್ತು, ಒಬ್ಬ ಯುವತಿ ಬೀದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಳೆ. ಆಕೆಯನ್ನು ಕಾಡಲು ಇಬ್ಬರು ಪುಂಡ ಯುವಕರು ಹತ್ತಿರ ಹೋಗುತ್ತಾರೆ. ಅವರ ದೇಹಭಾಷೆಯು ಅವರು ಪುಂಡರು ಮತ್ತು ಯುವತಿಯ ಮೇಲೆ ದಾಳಿ ಮಾಡಲಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಧ್ವನಿಸುತ್ತದೆ. ಆದರೆ ಹತ್ತಿರ ಹೋದಕೂಡಲೇ ಯುವಕರು ಬೆಚ್ಚಿ ಬಿದ್ದು ದೂರ ಸರಿಯುತ್ತಾರೆ. ಏಕೆಂದರೆ ಆ ಹುಡುಗಿ ನರೇಂದ್ರ ಮೋದಿ ಭಾವಚಿತ್ರವಿರುವ ಟೀ ಶರ್ಟ್ ಹಾಕಿಕೊಂಡಿರುತ್ತಾಳೆ! ದೆಹಲಿಯ ಅತ್ಯಾಚಾರ ಪ್ರಕರಣದ ನಂತರ ಹಾಗೂ ಚುನಾವಣೆಗೆ ಮುಂಚೆ ಇಂತಹ ಹಲವು ಭರವಸೆಗಳನ್ನು ಬೇರೆ ಬೇರೆ ರೀತಿಯಲ್ಲಿ ಸಚಿತ್ರವಾಗಿ ಜನರ ಮನಸ್ಸಿನಲ್ಲಿ ಬಿಜೆಪಿಯು ತುಂಬಿದೆ.

ಈಗ ಉತ್ತರ ಪ್ರದೇಶದ ಬದಾಂವ್ ಜಿಲ್ಲೆಯಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಗೀಡಾದ ಇಬ್ಬರು ಸೋದರಿಯರ ದುರಂತ ಅಂತ್ಯವನ್ನು ಮೋದಿ ತಡೆಯಲಾಗಲಿಲ್ಲ ಎಂದು ನಾವು ದೂರುವುದು ಬೇಡ. ಅವರು ನರೇಂದ್ರ ಮೋದಿಯ ಭಾವಚಿತ್ರವಿರುವ ಟೀ ಶರ್ಟನ್ನು ಹಾಕಿಕೊಂಡಿರಲಿಲ್ಲ ಎನ್ನುವ ಕಾರಣಕ್ಕಲ್ಲ; ಆ ರೀತಿ ವ್ಯಂಗ್ಯವೇನೂ ಬೇಡ. ಉತ್ತರ ಪ್ರದೇಶದ ರಾಜ್ಯಭಾರವನ್ನು ಸಂವೇದನಾರಹಿತ ಯಾದವ್ ಅಪ್ಪ ಮಕ್ಕಳು ನಡೆಸುತ್ತಿದ್ದಾರೆ ಹಾಗೂ ಕಾನೂನು ಸುವ್ಯವಸ್ಥೆಯ ಹೊಣೆ ರಾಜ್ಯ ಸರ್ಕಾರದ್ದು ಎನ್ನುವ ಕಾರಣಕ್ಕೂ ಅಲ್ಲ, ಮೋದಿಯೆಂಬ ಸೂಪರ್‌ಮ್ಯಾನ್ ಇಡೀ ದೇಶದ ಹೊಣೆಯನ್ನು ಹೊತ್ತುಕೊಳ್ಳುತ್ತಾರೆ; ಅದರ ಬಗ್ಗೆ ಸಂದೇಹ ಬೇಡ. ಆದರೆ ಇನ್ನೂ ಅಧಿಕಾರಕ್ಕೇರಿ ತಿಂಗಳೂ ಆಗಿಲ್ಲ, ಕಾಂಗ್ರೆಸ್ ಪಕ್ಷವು 60 ವರ್ಷ ದೇಶವಾಳಿ ಹಾಳು ಮಾಡಿರುವದನ್ನು ಸರಿ ಮಾಡಲು ಮೋದಿಗೆ ಆರು ತಿಂಗಳು ಬೇಕೇ ಬೇಕು. ವಾಸ್ತವದಲ್ಲಿ ಮೋದಿ 'ನಬ್ಬೇ ದಿನ್' (ತೊಂಭತ್ತು ದಿನ)ದ ಬಗ್ಗೆ ಹೇಳುತ್ತಿದ್ದಾರೆ. ಬೇಡ, ನಾವು 180 ದಿನವನ್ನೇ ಕೊಡೋಣ. ಮಹಿಳೆಯ ಮೇಲಿನ ಲೈಂಗಿಕ ಹಲ್ಲೆಗಳನ್ನು ತಡೆಯುವಲ್ಲಿ ಮುಖ್ಯವಾದ ಅಗತ್ಯವಾಗಿರುವ ಅಶ್ಲೀಲ ಸೈಟ್ ಹಾಗೂ ಮಾಧ್ಯಮಗಳ ಉದ್ದಿಮೆಗೆ ಮೋದಿ ಸದ್ಯದಲ್ಲೇ ಕಡಿವಾಣ ಹಾಕುತ್ತಾರೆ. ಅದಕ್ಕೆ ಸಂದೇಹವಿಲ್ಲ.

ಅಷ್ಟರಲ್ಲೂ ಮೋದಿ ಸರ್ಕಾರವು ಎಲ್ಲಾ ರೀತಿಯ ಜಾದೂ ಮಾಡಿಬಿಡುತ್ತದೆಂದು ನಾವು ನಿರೀಕ್ಷಿಸಬಾರದು. ಆದರೆ ಒಂದಂತೂ ಗ್ಯಾರಂಟಿಯಿರಬೇಕು; ಅವರು ನೀಡಿದ ಭರವಸೆಯನ್ನು ಜಾರಿ ಮಾಡುವ ವಿರುದ್ಧದ ದಿಕ್ಕಿನಲ್ಲಿಯಂತೂ ಹೋಗಬಾರದು. ಆ ರೀತಿ ಮೋದಿ ಸರ್ಕಾರ ವಿರುದ್ಧ ದಿಕ್ಕಿನಲ್ಲಿ ಹೋಗುವುದಾದರೆ ಮೋದಿಗೆ ಮತ ನೀಡಿರುವ ದೇಶದ ಮತದಾರರು ಮತ್ತು ಜನರ ಪರವಾಗಿ ಇಡೀ ದೇಶದ ಎಲ್ಲಾ ಜನರು ಪ್ರತಿಭಟಿಸಲೇಬೇಕು. ಮೋದಿಯ ಮೇಲೆ ಎಷ್ಟು ನಂಬಿಕೆಯಿಟ್ಟಿದ್ದರೂ, ಅವರೂ ರಾಜಕಾರಣಿಯೇ ಅಲ್ಲವೇ? ರಾಜಕೀಯ ಪಕ್ಷಗಳನ್ನು ನಂಬಬಾರದು ಎಂಬುದು ಭಾರತದ ಜನರ ಸಾಮಾನ್ಯ ಜ್ಞಾನವಾಗಿದೆ. ಆ ಸಾಮಾನ್ಯ ಜ್ಞಾನದ ಆಧಾರದ ಮೇಲೆ, ಮೋದಿ ಹಾಗೂ ಬಿಜೆಪಿಯ ಭರವಸೆಗಳನ್ನು ಮುಂದಿಟ್ಟು ಪ್ರಜಾಪ್ರಭುತ್ವದ ಜನಾದೇಶದ ರಕ್ಷಣೆಗೆ ನಾವು ನೀವೆಲ್ಲಾ ಹೋರಾಟ ಮಾಡಬೇಕಿದೆ.



ಈಗ 'ಮೋದಿ ಬಂದರೆ ಏನೇನಾಗುತ್ತೆ' ಎಂದು ಶೇ.31.26+ ಶೇ.5 (ಬಿಜೆಪಿಯ ಮಿತ್ರ ಪಕ್ಷಗಳು ಇತ್ಯಾದಿ) ಜನರು ನಂಬಿಕೊಂಡಿರುವುದು ಏನೇನನ್ನು ಎಂಬ ಪಟ್ಟಿಯನ್ನು ನೋಡೋಣ.

ಬೆಂಗಳೂರಿನ ವಿಜಯನಗರದ ಕಿರಾಣಿ ಅಂಗಡಿ ವ್ಯಾಪಾರಿಯೊಬ್ಬ ಈ ಅಂಕಣಕಾರನಿಗೆ ಹೇಳಿದ್ದು 'ಮೋದಿ ಅಧಿಕಾರಕ್ಕೆ ಬಂದಿದ್ದಾರೆ. ಇನ್ನು ಇವೆಲ್ಲಾ ದೊಡ್ಡ ಅಂಗಡಿಗಳನ್ನು (ರಿಲೆಯನ್ಸ್ ಮಾರ್ಟ್, ಮೋರ್, ಫುಡ್‌ವರ್ಲ್ಡ್ ಇತ್ಯಾದಿ) ಮುಚ್ಚಿಸುತ್ತಾರೆ. ನನ್ನ ವ್ಯಾಪಾರ ಜೋರಾಗುತ್ತೆ' ಎಂದು. ಇದಕ್ಕೆ ಕಾರಣವೂ ಇದೆ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ (ವಿದೇಶೀ ನೇರ ಬಂಡವಾಳ)ವನ್ನು ಬಿಜೆಪಿಯು ವಿರೋಧಿಸಿತ್ತು. ಈಗಲೂ ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಹೇಳಿಕೇಳಿ ಬಹಳ ವರ್ಷಗಳ ಕಾಲ ಬಿಜೆಪಿಯನ್ನು ವ್ಯಾಪಾರಿಗಳ ಪಕ್ಷ ಎಂದೇ ಕರೆಯಲಾಗುತ್ತಿತ್ತು, ಹಾಗಾಗಿ ಆ ವ್ಯಾಪಾರಿ ನಂಬಿಕೊಂಡಿರುವುದರಲ್ಲಿ ತಪ್ಪಿಲ್ಲ. ವಿದೇಶೀ ಬಂಡವಾಳದ ಕಥೆ ನಂತರ ನೋಡೋಣ. ಇನ್ನು ಮುಂದೆ ಚಿಲ್ಲರೆ ವ್ಯಾಪಾರದಲ್ಲಿ ದೊಡ್ಡ ಬಂಡವಾಳಕ್ಕೆ ಮೋದಿ ಅವಕಾಶ ನೀಡುವುದಿಲ್ಲ.

ಮೂರನೆಯ ಮುಖ್ಯ ನಂಬಿಕೆಗೆ ಏನು ಆಧಾರ ಗೊತ್ತಿಲ್ಲ, ಏಕೆಂದರೆ, ಸ್ವತಃ ಮೋದಿ ಅಥವಾ ಬಿಜೆಪಿ ಈ ಸಂಖ್ಯೆಯನ್ನು ಹೇಳಿರುವುದು ನಮ್ಮ ಗಮನಕ್ಕಂತೂ ಬಂದಿಲ್ಲ. ಆದರೆ ಬಹಳ ವ್ಯಾಪಕವಾಗಿ ಪ್ರಚಾರದಲ್ಲಿರುವ ಸಂಗತಿ ಏನೆಂದರೆ, ಮೋದಿ ರಾಜ್‌ನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಲೀಟರ್‌ಗೆ 10 ರೂ. ಮಾತ್ರ ಆಗುತ್ತದೆಂದು. ಮೋದಿಗೆ ರಿಲೆಯನ್ಸ್‌ನ ಅಂಬಾನಿ ಬಹಳ ಬಹಳ ಹತ್ತಿರದವರು. ಎಷ್ಟೆಂದರೆ, ಪ್ರಮಾಣ ವಚನ ಸ್ವೀಕಾರ ಸಂದರ್ಭದಲ್ಲಿ ಅಂಬಾನಿಯ ತಾಯಿ, ಹೆಂಡತಿ ಮತ್ತು ಮಕ್ಕಳಿಬ್ಬರೂ ಹಾಜರಿದ್ದರು. ಕೃಷ್ಣಾ-ಗೋದಾವರಿ ಕಣಿವೆಯಲ್ಲಿ ಅಪಾರ ಪ್ರಮಾಣದಲ್ಲಿ ಲಭ್ಯವಿರುವ ನೈಸರ್ಗಿಕ ಅನಿಲವನ್ನು ಅಂಬಾನಿಗೆ ಬಹಳ ಕಡಿಮೆ ಹಣಕ್ಕೆ ಯುಪಿಎ ಸರ್ಕಾರ ಮಾರಿತ್ತು, ಆಗ ಮೋದಿ ಮತ್ತು ಬಿಜೆಪಿ ಅಭ್ಯಂತರವೇನೂ ತೋರ್ಪಡಿಸಿರಲಿಲ್ಲ. ಬಹುಶಃ, ಅದನ್ನು ಕಡಿಮೆ ಬೆಲೆಗೆ ಅಂಬಾನಿಗೆ ಕೊಟ್ಟರೆ, ಅವರಿಂದ ಲೀಟರ್‌ಗೆ 10 ರೂ.ನಂತೆ ದೇಶದ ಜನತೆಗೆ ಕೊಡಲೆಂದೇ ಆ ಪ್ರೋತ್ಸಾಹವನ್ನು ನೀಡಿರಬಹುದು. ಮೊನ್ನೆ ಡೀಸೆಲ್ ಬೆಲೆ ಸಣ್ಣದಾಗಿ ಏರಿದ್ದಕ್ಕೆ ಯುಪಿಎ ಸರ್ಕಾರದ ಕೊನೆಗಳಿಗೆಯ ತೀರ್ಮಾನವೇ ಕಾರಣವಿರಬಹುದು. ಇನ್ನು ಮುಂದೆ ಹಾಗೆ ಆಗುವುದಿಲ್ಲ, ಸಬ್ಸಿಡಿ ರಹಿತ ಅಡಿಗೆ ಅನಿಲ ಒಂದೆರಡು ರೂ. ಕಡಿಮೆ ಮಾಡುವ ಆದೇಶ ಹೊರಬಿದ್ದಿರುವುದನ್ನು ಗಮನಿಸಿ ನೋಡಿ. ನಿಮಗೇ ಗೊತ್ತಾಗುತ್ತದೆ.

ಇನ್ನು ಭ್ರಷ್ಟಾಚಾರದ ವಿಷಯ. ಇದರಲ್ಲಿ ಆಮ್ ಆದ್ಮಿ ಪಕ್ಷಕ್ಕಿಂತ ಮೋದಿಯೇ ಪರವಾಗಿಲ್ಲ ಎಂಬುದು ದೇಶದ ಜನರ ಆಶಯವಾಗಿದೆ. ಹಾಗಾಗಿಯೇ ದೆಹಲಿಯಲ್ಲೂ ಎಲ್ಲಾ ಕ್ಷೇತ್ರಗಳಲ್ಲೂ ಬಿಜೆಪಿಯೇ ಗೆದ್ದಿದೆ. ಜನಪರವಾದ ಬಲಿಷ್ಠ ಜನ ಲೋಕಪಾಲ್ ಕಾಯ್ದೆಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಮತ್ತು ಈಗ ರಾಜ್ಯ ಮಟ್ಟದಲ್ಲಿ ಇರುವ ಲೋಕಾಯುಕ್ತ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸುವ ಬಗ್ಗೆ ಅವರು ಹಿಂಜರಿಯುವುದಿಲ್ಲ. ಗುಜರಾತ್‌ನಲ್ಲಿ ಲೋಕಾಯುಕ್ತರನ್ನೇ ನೇಮಕ ಮಾಡದೆ ದಶಕಗಟ್ಟಲೆ ಮೂಲೆಗುಂಪು ಮಾಡಿದ್ದರು ಮತ್ತು ಸದರಿ ಕೇಸು ಹೈಕೋರ್ಟ್ ಮೆಟ್ಟಲೇರಿದ್ದು ನಿಜ. ಆದರೆ ಕಾಂಗ್ರೆಸ್ ಪಕ್ಷದ ಕುಟಿಲ ನೀತಿ ದೇಶವನ್ನಾಳುತ್ತಿದ್ದ ಸಂದರ್ಭದಲ್ಲಿ ಆ ರೀತಿ ಮಾಡಿದ್ದರು ಅಷ್ಟೆ.

ಇನ್ನು ಬೆಲೆಯೇರಿಕೆಯ ವಿಚಾರ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಲೀಟರ್‌ಗೆ 10 ರೂ. ಆದರೆ ಬೆಲೆಗಳು ಇಳಿಯಲೇಬೇಕು ತಾನೇ? ಅದಲ್ಲದೇ ಹಣದುಬ್ಬರಕ್ಕೆ ಕಾರಣವಾಗಿರುವ ಇನ್ನೂ ಹಲವು ಸಂಗತಿಗಳನ್ನು ಮೋದಿ ಗಮನಿಸಿ, ಸಂಬಂಧಪಟ್ಟವರನ್ನು ಮಟ್ಟ ಹಾಕುತ್ತಾರೆ. ಅದಕ್ಕೆ ನಬ್ಬೇ ದಿನ್ ಸಾಕು. ಏಕೆಂದರೆ ಬಡವರ ಕಷ್ಟ ಮೋದಿಗೆ ಗೊತ್ತು.

ಈಗಾಗಲೇ ಸ್ವಿಸ್‌ಬ್ಯಾಂಕ್ ಖಾತೆಗಳಲ್ಲಿರುವ ಕಪ್ಪು ಹಣದ ಬಗ್ಗೆ ಮೋದಿ ವಿಶೇಷ ತಂಡ ರಚಿಸಿದ್ದಾರೆ. ಚುನಾವಣೆ ಸಂದರ್ಭದಲ್ಲೇ ಅವರು ಸ್ಪಷ್ಟಪಡಿಸಿರುವಂತೆ ಬಿಜೆಪಿಯವರನ್ನೂ ಅವರು ಬಿಡುವುದಿಲ್ಲ, ಮೊದಲ ಕಂತಿನಲ್ಲೇ ಬಿಜೆಪಿ ನಾಯಕರ ಕಪ್ಪು ಹಣದ ಖಾತೆಗಳು ಬಹಿರಂಗವಾಗಲಿದೆ. ಹಾಗೆಯೇ 2 ಜಿ ಹಗ... ಸಿಕ್ಕಿ ಹಾಕಿಕೊಂಡಿರುವವರಲ್ಲಿ ಅನಿಲ್ ಅಂಬಾ... ಸೇರಿ ಯಾರೇ ಇದ್ದರೂ ಅವರನ್ನು ಹಿಡಿದು ಹಾ... ಏಕೆಂದರೆ ಬಿಜೆಪಿಯು ಅಬ್ಬರಿಸಿ ಬೊಬ್ಬಿರಿದ... ಹಗರಣವೆಂದರೆ 2 ಜಿ ಹಗರಣವೇ ತಾನೇ?

ಇನ್ನು ಆಧಾರ್ ಕಾರ್ಡ್ ಹಗರಣ. ಬೆಂ... ದಕ್ಷಿಣದಲ್ಲಿ ಸ್ಪರ್ಧಿಸಿದ್ದ ನಂದನ್ ನಿಲೇಕಣಿಯ... ಪ್ರಚಾರ ಮಾಡುವಾಗಲೇ ಅದನ್ನು ಬಿಜೆಪಿ ಸ್ಪಷ್ಟ... ಬಿಜೆಪಿಯ ತುತ್ತೂರಿ ಚಾನೆಲ್‌ಗಳಲ್ಲಿ 4-5 ದಿನ... ಅಕ್ರಮದ ಬಗ್ಗೆ ಪ್ರಚಾರವಾಗಿದೆ. ಹಾಗಾಗಿ ಈ ಆಧಾ... ಸಂಪೂರ್ಣ ಕಿತ್ತು ಹಾಕುವುದರಲ್ಲಿ ಸಂಶಯವಿಲ್ಲ...

ಅದೇರೀತಿ ನಿತಿನ್ ಗಡ್ಕರಿ, ಸುಷ್ಮಾ ಸ್ವರಾಜ್, ... ಕುಮಾರ್ ಸೇರಿದಂತೆ ಹಲವು ಭ್ರಷ್ಟರನ್ನು ಈಗ... ಮಂಡಲದಲ್ಲಿ ತೆಗೆದುಕೊಂಡಿರುವುದು ನಿಜವೇ. ಸ... ಅವರೆಲ್ಲರನ್ನೂ ಕೈಬಿಡುತ್ತಾರೆ. ಆರಂಭದಲ್ಲೇ... ನಾಯಕರನ್ನು ವಿರೋಧ ಮಾಡಿಕೊಳ್ಳಬಾರದು... ಚಾಣಕ್ಯ ತಂತ್ರದ ಕಾರಣಕ್ಕೆ ಈಗ ತೆಗೆದುಕೊ... ಅಷ್ಟೇ. ಜಯಲಲಿತಾ ಜೊತೆ ಸಂಧಾನಕ್ಕೆ... ಮುಂದಾಗಿರುವುದು ಯಾತಕ್ಕಾಗಿ ಎಂದುಕೊಂಡ... ಒಂದು ವೇಳೆ ಬಿಜೆಪಿಯಲ್ಲೇ ಬಿಕ್ಕಟ್ಟು ತಲೆದೋ... ಅಂತಹವರನ್ನು ಹೊರಹಾಕಿ, ತನ್ನಷ್ಟೇ ಬಲಿಷ್ಠ ನಾ... 30 ಚಿಲ್ಲರೆ ಸೀಟುಗಳ ಅಖಂಡ ಬೆಂಬಲದ... ಸರ್ಕಾರವನ್ನು ಅಬಾಧಿತವಾಗಿ ನಡೆಸುತ್ತೇನೆ ಎಂಬ... ಸಾರಲು!

ಇನ್ನು ಮಾಹಿತಿ ಹಕ್ಕು ಕಾಯ್ದೆ 2005ಅನ್ನು... ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲಾಗು... ರೈತರಿಗೆ ತಮ್ಮ ಜಮೀನುಗಳ ಮೇಲಿನ ಹಕ್ಕ... ಮಟ್ಟಿಗಾದರೂ ಗೌರವಿಸಿ, ಬೇಕಾಬಿಟ್ಟಿ ಭೂಸ್ವಾ... ಕಡಿವಾಣ ಹಾಕಿರುವ ಇತ್ತೀಚಿನ ಭೂಸ... ಕಾಯಿದೆಯನ್ನು ಕಟ್ಟುನಿಟ್ಟಿನ ಜಾರಿ ಮಾಡಲಾ...

ಕಳೆದ ಹತ್ತಾರು ವರ್ಷಗಳಿಂದ ಬಿಜೆಪಿ... "ಸ್ವದೇಶಿ" ಮಂತ್ರಕ್ಕೆ ನಿಜಾರ್ಥದಲ್ಲಿ ಬದ್ಧತೆ ತೋ... ರಕ್ಷಣಾ ಕ್ಷೇತ್ರವನ್ನೂ ಒಳಗೊಂಡಂತೆ 100% ಎಫ... ಅವಕಾಶ ಮಾಡಿಕೊಡುವ ಪ್ರಯತ್ನಗಳನ್ನು ಕ... ನಿಲ್ಲಿಸಲಾಗುತ್ತದೆ ಮತ್ತು ಸಾರ್ವಜನಿಕ... ಉದ್ದಿಮೆಗಳನ್ನು ಮತ್ತಷ್ಟು ಬಲ ಪಡಿಸಲಾ... ದೇಶಾದ್ಯಂತ ಮಿತಿಮೀರಿ ಹೋಗಿರುವ ಮ... ಮಾಫಿಯಾದೊಂದಿಗಿನ ತಮ್ಮ ಪಕ್ಷದ ಸಖ್ಯವನ್ನು... ಮಾಡುತ್ತಾರೆ.

ರೈತರಿಗೆ ಕಡಿಮೆ ದರದಲ್ಲಿ ಬೀಜ ಗೊಬ್ಬರ... ಪೂರೈಕೆ ಮಾಡುವ ಕುರಿತು ಬಿಜೆಪಿಯ ಪ್ರಣಾಳಿ... ಹೇಳಲಾಗಿತ್ತು. ಅದೇರೀತಿ ಗುಜರಾತ್‌ನಲ್ಲಿ ಮಾ... ಹಾಗೆ (ಅದು ಸುಳ್ಳು ಎಂದು ಎಷ್ಟೇ ಅವ... ಹೇಳಿದ್ದರೂ) 24 ಗಂಟೆಗಳ ವಿದ್ಯುತ್ ಸರಬ... ಮಾಡಲಾಗುತ್ತದೆ, ದೇಶಾದ್ಯಂತ. ಕಾರ್ಮಿಕರ ... ಕಾನೂನುಗಳನ್ನು ಬಲಪಡಿಸಲಾಗುತ್ತದೆಯೇ ಹ... ಬಂಡವಾಳಿಗರ ಪರವಾಗಿ ನಿಲ್ಲುವುದಿಲ್ಲ, ಕೋಮು... ನಡೆಯುವುದಿಲ್ಲ ಇತ್ಯಾದಿ ಸಂಗತಿಗಳನ್ನು ಪ್ರತ್ಯೆ... ಹೇಳಬೇಕಿಲ್ಲ ಅಲ್ಲವೇ?

ಇವ್ಯಾವುವೂ ಕನಸಲ್ಲ, ಸದ್ಯದಲ್ಲೇ ನನಸಾ... ಇಲ್ಲದಿದ್ದರೆ ಅದು 60 ವರ್ಷ ಆಡಳಿತ ನಡೆಸಿದ... ಮಾಡಿರುವ ದ್ರೋಹಕ್ಕಿಂತ ದೊಡ್ಡ ದ್ರೋಹವನ್ನು... ಎಸಗಿದಂತಾಗುತ್ತದೆ. ಆದರೆ ಒಂದು ಕೆಲಸ ಆಗಲಿ... ಸಂವಿಧಾನದ 370ನೇ ಕಲಂ, ಕೋಮು ಗಲಭೆ, ಪಾ... ಜೊತೆ ಯುದ್ಧ ಏನೇ ನಡೆಯುತ್ತಿದ್ದರೂ, ಇವನ್ನು ನೆ... ಕೆಲಸವನ್ನಂತೂ ನಾವೆಲ್ಲರೂ ಮಾಡುತ್ತಿರಬೇಕು.

ಇನ್ನೆಷ್ಟು ದಲಿತ ಯುವತಿಯರು ಬಲಿಯಾಗಬೇಕು?

ಕಂಡಹಾಗೆ




• ಗೌರಿ ಲಂಕೇಶ್
editorlankesh@gmail.com

ಆ ಚಿತ್ರ ಎಂತಹವರನ್ನೂ ನಡುಗಿಸುವಂತಿದೆ. ...ಕೆಂದರೆ ಅದು ನಮ್ಮ ಭಾರತದಲ್ಲಿ ಈಗಲೂ ...ಯಲ್ಲಿರುವ ದಲಿತರ ಮೇಲೆ ನಡೆಯುವ ದೌರ್ಜನ್ಯವನ್ನು ...ಡಿದಿದೆ. ಆ ಮಾವಿನಮರದ ರೆಂಬೆಗಳಿಂದ ಇಬ್ಬರು ...ವತಿಯರ ಶವಗಳು ನಿರ್ಜೀವವಾಗಿ ನೇತಾಡುತ್ತಿದ್ದರೆ ...ರದಡಿ ನಿಂತಿರುವ, ಕೂತಿರುವ ದಲಿತರ ಮುಖಗಳನ್ನು ...ು, ದಿಗ್ಭ್ರಮೆ, ಹತಾಶೆ, ದಿಕ್ಕು ತೋಚದ ಸ್ಥಿತಿ ಆವರಿಸಿವೆ. ...ು ನಮ್ಮ ದೇಶದ ಹೆಚ್ಚಿನ ದಲಿತರ ದಿನನಿತ್ಯದ ಬದುಕಿನ ...ಷ್ಟಾಂಶವಲ್ಲದೆ ಇನ್ನೇನು?

...ಆದರೆ ಹಲವು ಜನ ಈ ಚಿತ್ರವನ್ನು ಪ್ರಕಟಿಸಬೇಡಿ, ...ವರಿಗೆ ಇಂಟರ್‌ನೆಟ್‌ನಲ್ಲಿ ಕಳುಹಿಸಬೇಡಿ ಎಂದು ...ಳುತ್ತಿದ್ದಾರೆ. ಅದಕ್ಕೆ ಅವರು ಕೊಡುತ್ತಿರುವ ಕಾರಣ ...ು ತುಂಬಾ ಬರ್ಬರವಾಗಿದೆ, ಅದಕ್ಕೆ" ಆದರೆ ಇಂತಹ ... ನಡೆಯುತ್ತಿರುವ ನಮ್ಮ ಸಮಾಜ ಅದೆಷ್ಟು ...ರವಾಗಿದೆ, ನಮ್ಮಲ್ಲಿನ ಜಾತಿವ್ಯವಸ್ಥೆ ಅದೆಷ್ಟು ...ದವಾಗಿದೆ ಎಂದು ತೋರಿಸಲಾದರೂ ಇದನ್ನು ...ವಾದಿಗಳ ಮುಖಕ್ಕೆ ಮತ್ತೆಮತ್ತೆ ಹಿಡಿಯಬೇಕಿದೆ. ...ಕೆಂದರೆ ಅವರು ಈ ಚಿತ್ರದಲ್ಲಿರುವ ದೌರ್ಜನ್ಯವನ್ನು ...ಸುತ್ತಾರೆಯೇ ಹೊರತು ಇದಕ್ಕೆ ಕಾರಣವಾಗಿರುವ ... ಸಾಮಾಜಿಕ ವ್ಯವಸ್ಥೆಯನ್ನು ಖಂಡಿಸುವುದಿಲ್ಲ, ಅದರ ...ಲಾವಣೆಗೆ ಪ್ರಯತ್ನಿಸುವುದಿಲ್ಲ.

...ನ್ನು ಆ ಅಮಾಯಕ ದಲಿತ ಯುವತಿಯರ ಮೇಲಿನ ...ಚಾರ ಮತ್ತು ಕೊಲೆ ಪ್ರಕರಣದ ಹಿಂದಿನ ಅಂಶಗಳೂ ...ವಂತರಲ್ಲಿ ಆಕ್ರೋಶವನ್ನು ಉಕ್ಕೇರಿಸುತ್ತದೆ.

...ಈಗ ಎಲ್ಲರಿಗೂ ಗೊತ್ತಿರುವಂತೆ ಈ ಪ್ರಕರಣ ನಡೆದದ್ದು





ಭಾಗಾನದಲ್ಲಿ ಬಣಗುಡುತ್ತಿರುವ ದಲಿತರ ಕೇರಿ



...ರ ಪ್ರದೇಶದ ಬದಾಂವ್ ಜಿಲ್ಲೆಯ ಕಟಾರ ಎಂಬ ...ಯಲ್ಲಿ ಕಳೆದ ಮಂಗಳವಾರ ರಾತ್ರಿ ಈ ಇಬ್ಬರು ...ವತಿಯರು ಮೂತ್ರ ವಿಸರ್ಜನೆಗೆಂದು ಮನೆಯಿಂದ ...ನಡೆದಿದ್ದಾರೆ. ಆಗ ಅವರನ್ನು ಪಪ್ಪು ಯಾದವ್ ... ಬಲಿಷ್ಠ ಜಾತಿಯ ಯುವಕ ಮಾತನಾಡಿಸಲು ...ದ್ದಾನೆ. ಅವನೊಬ್ಬ ಪುಂಡ ಎಂದು ಗೊತ್ತಿದ್ದ ...ವತಿಯ ಸಂಬಂಧಿಯೊಬ್ಬ ಯಾಕೆ ಆ ಯುವತಿಯರನ್ನು ...ತನಾಡಿಸುತ್ತಿದ್ದೀಯಾ ಎಂದು ಪಪ್ಪು ಯಾದವ್‌ನನ್ನು ...ದ್ದಾನೆ. ಅದಕ್ಕೆ ಪ್ರತಿಕ್ರಿಯೆಯಾಗಿ ಪಪ್ಪು ಜೊತೆಗಿದ್ದ ... ಸ್ನೇಹಿತನೊಬ್ಬ ಬಂದೂಕು ತೋರಿಸಿ "ನೀನು ...ದ ತೊಲಗು" ಎಂದು ಬೆದರಿಸಿದ್ದಾನೆ. ಆ ಸ್ನೇಹಿತನೂ ...ವ್ ಜಾತಿಗೆ ಸೇರಿದವನೇ.

...ನ್ನ ಪ್ರಾಣಕ್ಕೆ ಹೆದರಿ ಸಂಬಂಧಿ ಅಲ್ಲಿಂದ ...ಹೋದನಾದರೂ ಕೂಡಲೇ ಆ ಯುವತಿಯರ ...ಷಕರಿಗೆ ವಿಚಾರ ತಿಳಿಸಿದ್ದಾನೆ. ಆಗ ಎಲ್ಲರೂ ಆ ...ವತಿಯರಿಗಾಗಿ ಹುಡುಕಾಡಿದ್ದಾರೆ. ಅವರು ಎಲ್ಲೂ ...ಸಿದ್ದ ಕಾರಣ ಹತ್ತಿರದ ಪೊಲೀಸ್ ಠಾಣೆಗೆ ಹೋಗಿ ...ಕೊಡಲು ಪ್ರಯತ್ನಿಸಿದ್ದಾರೆ. ಆದರೆ ಆ ಠಾಣೆಯಲ್ಲಿ ... ಪೊಲೀಸ್ ಅಧಿಕಾರಿಯೂ ಪಪ್ಪು ಯಾದವ್‌ನ ...ವ್ ಸಮುದಾಯದವನೇ. ನಾಪತ್ತೆಯಾಗಿದ್ದ ಒಬ್ಬ ...ವತಿಯ ತಂದೆ ದೂರು ಕೊಡಲು ಮುಂದಾದಾಗ ...ಪೊಲೀಸ್ ಅಧಿಕಾರಿ ಮೊದಲು ಆತನ ಜಾತಿಯನ್ನು ...ದ್ದಾನೆ. ಆತ ದಲಿತ ಜಾತಿಗೆ ಸೇರಿದವನು ಎಂದು ...ಗುತ್ತಿದ್ದಂತೆ ದೂರು ಆತ ದಾಖಲಿಸಿಕೊಳ್ಳಲು ...ನಿರಾಕರಿಸಿದನಲ್ಲದೆ ಅವರನ್ನೆಲ್ಲ ಠಾಣೆಯಿಂದಲೇ ...ದಿಸಿದ್ದಾನೆ.

...ತಾಶರಾದ ಯುವತಿಯರ ಸಂಬಂಧಿಕರು ರಾತ್ರಿ ... ಅವರಿಗಾಗಿ ಹುಡುಕಾಡಿದ್ದಾರೆ. ಪಪ್ಪು ಯಾದವ್‌ನ ...ೂ ಹೋಗಿ ತಮ್ಮ ಹುಡುಗಿಯರನ್ನು ಬಿಟ್ಟುಬಿಡಿ ... ಬೇಡಿಕೊಂಡಿದ್ದಾರೆ. ಆದರೆ ಅವರ ಬೇಡಿಕೆಗಳೆಲ್ಲ ...ರೋದನವಾಗಿತ್ತಷ್ಟೇ.

...ಾರನೆ ಬೆಳಗ್ಗೆ ಎದ್ದು ನೋಡಿದರೆ ಆ ...ವತಿಯರಿಬ್ಬರ ಶವಗಳು ಮಾವಿನ ಮರದಿಂದ ಜೋತಾಡುತ್ತಿದ್ದವು. ಅವರಿಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿತ್ತಲ್ಲದೆ ಅವರ ದೇಹಗಳ ಮೇಲೆಲ್ಲ ಗಾಯಗಳಿದ್ದವು. ಅವರ ಅಂಗಾಂಗಗಳು ರಕ್ತಸಿಕ್ತವಾಗಿದ್ದವು. ಅವರಿಬ್ಬರು ಇನ್ನೂ ಜೀವಂತ ಇದ್ದಾಗಲೇ ಅವರನ್ನು ಅಮಾನುಷವಾಗಿ ನೇತುಹಾಕಲಾಗಿತ್ತು...

ಈ ಅತ್ಯಾಚಾರ ಮತ್ತು ಕೊಲೆ ಮಾಧ್ಯಮಗಳಲ್ಲಿ ಬಿತ್ತರಗೊಳ್ಳಲಾರಂಭಿಸಿದ ಕೂಡಲೇ ಹಲವರು ಇಂತಹ ಪ್ರಕರಣ ಮತ್ತೆ ಮರುಕಳಿಸಬಾರದೆಂದರೆ ಎಲ್ಲ ಕಡೆ ಶೌಚಾಲಯಗಳನ್ನು ನಿರ್ಮಿಸಬೇಕು, ಹೆಚ್ಚಿನ ಅತ್ಯಾಚಾರ ಪ್ರಕರಣಗಳು ನಡೆಯುತ್ತಿರುವುದು ಮಹಿಳೆಯರು ನೈಸರ್ಗಿಕ ಅವಶ್ಯಗಳನ್ನು ತೀರಿಸಿಕೊಳ್ಳಲು ಹೊರಗೆ ಹೋದಾಗ ಎಂದೆಲ್ಲ ಸಲಹೆಗಳನ್ನು ನೀಡಲಾರಂಭಿಸಿದ್ದಾರೆ.

ಹೌದು, ಆರೋಗ್ಯ ದೃಷ್ಟಿಯಿಂದ ಶೌಚಾಲಯಗಳು ಅತ್ಯಗತ್ಯ. ಆದರೆ ಜಾತಿ ಎಂಬ ವ್ಯವಸ್ಥೆಯೇ ನಮ್ಮ ಜನರ ಮನಸ್ಸಿನಲ್ಲಿ ಹೇಸಿಗೆಯನ್ನು ತುಂಬಿರುವಾಗ, ದಲಿತರು ಇರುವುದೇ 'ದಬ್ಬಾಳಿಕೆ ನಡೆಸಲು; ಅವರ ಯುವತಿಯರಿರುವುದೇ ತಮ್ಮ ಲೈಂಗಿಕ ತೃಷೆಯನ್ನು ತೀರಿಸಿಕೊಳ್ಳಲು ಎಂಬಂತಹ ಧೋರಣೆ ಮೇಲು ಜಾತಿಯವರಲ್ಲಿ ತುಂಬಿರುವಾಗ... ಅಂತಹ ಹೇಸಿಗೆಯನ್ನು ಯಾವ ಶೌಚಾಲಯದಲ್ಲಿ ಸ್ವಚ್ಛಗೊಳಿಸುವುದು?

******

ಉತ್ತರ ಪ್ರದೇಶದ ಬದಾಂವ್‌ನಲ್ಲಿ ನಡೆದಿರುವ ದಲಿತ ಯುವತಿಯರ ಮೇಲಿನ ಅತ್ಯಾಚಾರ ಮೊದಲನೆಯದೂ ಅಲ್ಲ, ಕೊನೆಯದೂ ಅಲ್ಲ. ಇಂತಹದ್ದೇ ಪ್ರಕರಣ ಮೂರು ತಿಂಗಳುಗಳ ಹಿಂದೆ ಹರಿಯಾಣ ರಾಜ್ಯದ ಭಗಾನ ಎಂಬ ಹಳ್ಳಿಯಲ್ಲಿ ನಡೆದಿತ್ತು. ಅಲ್ಲೂ 13 ವರ್ಷದಿಂದ 18 ವರ್ಷ ವಯಸ್ಸಿನ ನಾಲ್ವರು ದಲಿತ ಯುವತಿಯರು ರಾತ್ರಿ ಹೊತ್ತು ಹೊಲಕ್ಕೆ ಹೋಗಿದ್ದಾಗ ಅವರ ಮೇಲೆ ಪ್ರಭಾವಿ ಜಾಟ್ ಜಾತಿಯ ಗ್ಯಾಂಗೊಂದು ದಾಳಿ ಮಾಡಿತ್ತು. ಯುವತಿಯರನ್ನು ವ್ಯಾನ್ ಒಂದಕ್ಕೆ ಎಳೆದುಕೊಂಡ ನಂತರ ಅವರ ಮೂಗಿಗೆ ಅದೆಂತಹದ್ದೋ ರಸಾಯನ ಇಟ್ಟಿದ್ದರಿಂದ ಅವರೆಲ್ಲ ಮೂರ್ಛೆ ಹೋಗಿದ್ದರು. ಆನಂತರ ತಮಗೆ ಏನಾಯಿತು ಎಂಬುದು ಆ ಯುವತಿಯರಿಗೆ ಗೊತ್ತಾಗಲಿಲ್ಲ.

ಮಾರನೆ ದಿನ ಬೆಳಗ್ಗೆ ಅವರಿಗೆ ಪ್ರಜ್ಞೆ ಬಂದಾಗ ಅವರೆಲ್ಲ ಅರೆ ಬೆತ್ತಲಾಗಿ ಪಂಜಾಬ್ ರಾಜ್ಯದಲ್ಲಿರುವ ಭಟಿಂಡಾ ಎಂಬ ಊರಿನ ರೈಲ್ವೆ ಸ್ಟೇಷನ್ ಹತ್ತಿರ ಬಿದ್ದಿದ್ದರು. ಆಮೇಲೆ ನಡೆಸಿದ ಪರೀಕ್ಷೆಗಳಲ್ಲಿ ಅವರೆಲ್ಲರ ಮೇಲೆ ಸಾಮೂಹಿಕ ಅತ್ಯಾಚಾರ ನಡೆದದ್ದು ಗೊತ್ತಾಗಿತ್ತು. ಅಷ್ಟೇ ಅಲ್ಲ ಅವರ ಮೇಲೆ ಇಂತಹ ದಾಳಿ ಮಾಡಿದ್ದು ಯಾರ್ಯಾರು ಎಂಬುದೂ ಊರಿನ ಎಲ್ಲರಿಗೂ ಗೊತ್ತಾಯಿತು. ಆದರೆ ಭಗಾನದ ದಲಿತರು ಅದೆಷ್ಟೇ ನ್ಯಾಯಕ್ಕಾಗಿ ಬೇಡಿಕೊಂಡರೂ, ರಕ್ಷಣೆಗಾಗಿ ಕಣ್ಣೀರಿಟ್ಟರೂ ಹರಿಯಾಣ ಸರ್ಕಾರ ಅದ್ಯಾವುದಕ್ಕೂ ಕಿವಿಗೊಡಲಿಲ್ಲ. ಇದಕ್ಕೆ ಸರಿಯಾಗಿ ಭಗಾನದ ಜಾಟರು ದಲಿತರ ವಿರುದ್ಧ ಸಾಮೂಹಿಕ ಬಹಿಷ್ಕಾರ ಹಾಕಿದ್ದರಿಂದ ಆ ಹಳ್ಳಿಯ 80ಕ್ಕೂ ಹೆಚ್ಚು ದಲಿತರ ಸಂಸಾರಗಳು ಊರನ್ನೇ ಭಯಭೀತರಾಗಿ ಬಿಡಬೇಕಾಯಿತು.

ಅಂದಿನಿಂದ, ಅಂದರೆ ಕಳೆದ ಎರಡು ತಿಂಗಳುಗಳಿಂದ, ಅತ್ಯಾಚಾರಕ್ಕೆ ಬಲಿಯಾದ ನಾಲ್ವರು ಯುವತಿಯರು ಮತ್ತು ಅವರ ಕುಟುಂಬದವರಲ್ಲದೆ ಭಗಾನದ ಹತ್ತಾರು ಸಂಸಾರಗಳು ರಾಜಧಾನಿ ದೆಹಲಿಯ ಜಂತರ್‌ಮಂತರ್‌ನಲ್ಲಿ ನ್ಯಾಯಕ್ಕೆ ಯಾಚಿಸುತ್ತಾ ನಿರಶನ ಹೂಡಿವೆ. ಆದರೆ ಯಾವ ಪಕ್ಷದ ರಾಜಕೀಯ ನಾಯಕರಿರಲಿ, ಒಂದೇ ಒಂದು ಮಾಧ್ಯಮವೂ ಅವರತ್ತ ಕಣ್ಣುಹಾಯಿಸಿಲ್ಲ. 'ನಿರ್ಭಯ' ಎಂಬ ದಲಿತೇತರ ಯುವತಿಯ ಮೇಲಾದ ಗ್ಯಾಂಗ್ ರೇಪ್ ಬಗ್ಗೆ ಸ್ಫೋಟಗೊಂಡಿದ್ದ ದೆಹಲಿಯ ಜನತೆಗೆ ಭಗಾನದ ಯುವತಿಯರೂ 'ನಿರ್ಭಯ'ಳಷ್ಟೇ ಅಮಾಯಕರು ಎಂದು ಅರಿವಾಗುತ್ತಿಲ್ಲದಿರುವುದು ದುರಂತವಲ್ಲದೆ ಇನ್ನೇನು.

ದಲಿತರ ಅದರಲ್ಲೂ ದಲಿತ ಮಹಿಳೆಯರ ಸ್ಥಿತಿ ಇವತ್ತಿಗೂ ಅದೆಷ್ಟು ಕರುಣಾಜನಕವಾಗಿದೆ ಎಂದರೆ ಬದಾಂವ್ ಗ್ರಾಮದಲ್ಲಾದ ದುರ್ಘಟನೆಯ ಬಗ್ಗೆ ಭಗಾನದಲ್ಲಿ ಅತ್ಯಾಚಾರಕ್ಕೀಡಾದ ಯುವತಿಯ ತಾಯಿಯೊಬ್ಬರು ದೆಹಲಿಯಲ್ಲಿ ಪ್ರತಿಕ್ರಿಯಿಸಿರುವುದು ಹೀಗೆ: "ನನ್ನ ಮಗಳನ್ನೂ ಆಕೆಯ ಮೇಲೆ ಅತ್ಯಾಚಾರವೆಸಗಿದ ಪಿಶಾಚಿಗಳು ಕೊಂದುಹಾಕಬೇಕಿತ್ತು."

ಮುಂದುವರೆದು ಆಕೆ ಹೀಗೂ ಹೇಳಿದ್ದಳು: "ನಾವು ಜಾಟರ ಹೊಲಗಳಲ್ಲಿ ಜೀತ ಮಾಡುತ್ತಿದ್ದವರು. ನಮ್ಮ ಬಳಿ ಏನೂ ಇಲ್ಲ, ನಮ್ಮ ಮಗಳಲ್ಲಿ ಇದ್ದದ್ದು ಆಕೆಯ ಘನತೆ ಒಂದೇ. ಈಗ ಅದನ್ನೂ ಕಸಿದುಕೊಂಡಿದ್ದಾರೆ. ಮುಂದೆ ಆಕೆಗಾಗಲಿ ಆಕೆಯ ತಂಗಿಗಾಗಲಿ ಗಂಡ ಸಿಗುವುದಿಲ್ಲ. ಯಾವ ತಪ್ಪೂ ಮಾಡದ ನಮ್ಮ ಹೆಣ್ಣುಮಕ್ಕಳು ತನ್ನ ಇಡೀ ಜೀವನವನ್ನು ಕಣ್ಣೀರಿನಲ್ಲಿ ಕಳೆಯುವುದನ್ನು ನಾನು ನೋಡಬೇಕಿದೆ. ಆದ್ದರಿಂದ ಆಕೆಯನ್ನು ಅವರು ಕೊಂದುಹಾಕಿದ್ದರೆ ವಾಸಿ ಇರುತ್ತಿತ್ತು."

ಇದನ್ನು ಓದಿದ ನಂತರವೂ ಯಾರದ್ದಾದರೂ ಹೃದಯ ಹಿಂಡಿದಂತಾಗದಿದ್ದರೆ, ಅವರ ಹೃದಯದಲ್ಲಿ ಆಕ್ರೋಶ ಉಕ್ಕೇರದಿದ್ದರೆ ಅವರು ಮನುಷ್ಯರೇ ಅಲ್ಲ, ಅಲ್ಲವೇ?

* * *


ಬದಾಂವ್ ಪ್ರಕರಣದ ನಂತರ ಖ್ಯಾತ ಚಿಂತಕ ಮತ್ತು ಮಾನವ ಹಕ್ಕುಗಳ ಹೋರಾಟಗಾರ ಆನಂದ್ ತೇಲ್ತುಂಬ್ಡೆಯವರು 'ದಿ ಹಿಂದೂ' ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದರು. ಈ ಕುರಿತು ನನಗಿಂತ ತೇಲ್ತುಂಬ್ಡೆಯವರು ಹೇಳಿರುವುದು ಹೆಚ್ಚು ತೂಕವನ್ನು ಹೊಂದಿರುವುದರಿಂದ ಅವರ ಲೇಖನದ ಆಯ್ದ ಭಾಗವನ್ನು ಇಲ್ಲಿ ನಮ್ಮ ಓದುಗರಿಗೆ ನೀಡುತ್ತೇನೆ:

"'ಪ್ರತಿ ಗಂಟೆಗೆ ಇಬ್ಬರು ದಲಿತರ ಮೇಲೆ ದಾಳಿ ನಡೆಯುತ್ತದೆ; ಪ್ರತಿದಿನ ಮೂವರು ದಲಿತ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯುತ್ತವೆ, ಇಬ್ಬರು ದಲಿತರ ಕೊಲೆಯಾಗುತ್ತದೆ ಮತ್ತು ಎರಡು ದಲಿತರ ಮನೆಗಳು ಧ್ವಂಸಗೊಳ್ಳುತ್ತವೆ' ಎಂದು ಹಿಲರಿ ಮೇಯೆಲ್ ಎಂಬುವವರು ಹನ್ನೊಂದು ವರ್ಷಗಳ ಹಿಂದೆ ನ್ಯಾಷನಲ್ ಜಿಯಾಗ್ರಫಿಕ್ ಪತ್ರಿಕೆಯಲ್ಲಿ ಬರೆದಿದ್ದರು. ಆದರೀಗ ಆ ಅಂಕಿಸಂಖ್ಯೆಗಳನ್ನು ಹೆಚ್ಚಿಸಬೇಕಿದೆ. ಯಾಕೆಂದರೆ ದಲಿತ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ಈಗ ಶೇ. 43ಕ್ಕೆ ಏರಿದೆ. ಸೆನ್‌ಸೆಕ್ಸ್‌ನಲ್ಲೂ ಏರುಪೇರುಗಳು ಆಗುತ್ತಿರುತ್ತವೆ. ಆದರೆ ದಲಿತರ ಮೇಲಿನ ದೌರ್ಜನ್ಯದಲ್ಲಿ ಇಳಿಕೆ ಎಂಬುದು ಎಂದೂ ಆಗಿಲ್ಲ. ಆದರೂ ಇದ್ಯಾವುದರ ಬಗ್ಗೆಯೂ ನಮಗೆ ನಾಚಿಕೆ ಆಗುವುದಿಲ್ಲ.

ದಲಿತರ ರಕ್ಷಣೆಗೆಂದು ಜಾರಿಗೆ ಬಂದಿರುವ ಜಾತಿನಿಂದನೆ ಕಾನೂನನ್ನೂ ಜಾತಿವಾದಿಗಳು ವಿರೋಧಿಸುತ್ತಾರೆ. (ಮಹಾರಾಷ್ಟ್ರದ) ಖೈರ್ಲಾಂಜಿಯಲ್ಲಿ ನಡೆದ ಕೊಲೆಗಳೂ ಜಾತಿಯ ಕಾರಣಕ್ಕೆ ಎಂಬುದು ಎಂಥವರಿಗೂ ಅರ್ಥವಾಗುವಂತಿತ್ತು. ಅಂದು ಇಡೀ ಹಳ್ಳಿಯೇ ದಲಿತ ಕುಟುಂಬದ ವಿರುದ್ಧ ದಂಗೆ ಎದ್ದು ತಾಯಿ, ಮಗಳು ಮತ್ತು ಇಬ್ಬರು ಪುತ್ರರನ್ನು ಹಿಂಸಿಸಿದ್ದರೂ, ಅತ್ಯಾಚಾರವೆಸಗಿದ್ದರೂ, ಅಮಾನುಷವಾಗಿ ಕೊಂದು ಹಾಕಿದ್ದರೂ, ಆ ಇಬ್ಬರು ಮಹಿಳೆಯರ ಶವಗಳು ಬೆತ್ತಲಾಗಿದ್ದರೂ, ಹೈಕೋರ್ಟಿಗೆ ಇದೊಂದು ಜಾತಿಪ್ರೇರಿತ ಕೃತ್ಯ ಎನಿಸಲಿಲ್ಲ. ಪೊಲೀಸರಿಂದ ಹಿಡಿದು ನ್ಯಾಯಾಲಯದ ತನಕ ನಮ್ಮ ಇಡೀ ಕಾನೂನು ವ್ಯವಸ್ಥೆ ದಲಿತರ ವಿರುದ್ಧದ ಧೋರಣೆಯನ್ನು ಹೊಂದಿದೆ. ತಮಿಳುನಾಡಿನಲ್ಲಿ 42 ದಲಿತ ಕೂಲಿಗಳನ್ನು ಜೀವಂತ ದಹಿಸಿದ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪಿನಲ್ಲಿ ಮದ್ರಾಸ್ ಹೈಕೋರ್ಟ್ 'ಭೂಮಾಲಿಕರು ಕಾರ್‌ಗಳನ್ನು ಹೊಂದಿರುವಷ್ಟು ಶ್ರೀಮಂತರಾಗಿದ್ದು ಅವರು ಇಂತಹ ಕೃತ್ಯವನ್ನು ಎಸಗುವವರಲ್ಲ' ಎಂದಿತ್ತೇ ವಿನಹ ಇದರ ಹಿಂದಿದ್ದದ್ದು ದಲಿತರ ವಿರುದ್ಧದ ದ್ವೇಷ ಎಂದು ಭಾವಿಸಿರಲಿಲ್ಲ. ಸಮವಸ್ತ್ರ ಧರಿಸಿರುವ ಪೊಲೀಸರಲ್ಲಿ ಹೆಚ್ಚಿನವರು ಕ್ರಿಮಿನಲ್‌ಗಳ ಎಂದಷ್ಟೇ ಹೇಳಿದರೆ ಸಾಕು. ಅವರು ಜಾತಿನಿಂದನೆ ಪ್ರಕರಣಗಳಲ್ಲಿ ದಲಿತ ವಿರೋಧಿ ನಿಲುವನ್ನೇ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಅವರು ಇಂತಹ ಪ್ರಕರಣಗಳಲ್ಲಿ ಸರಿಯಾದ ತನಿಖೆಯನ್ನೇ ಮಾಡುವುದಿಲ್ಲ, ಆನಂತರ ನ್ಯಾಯಾಲಯದಲ್ಲೂ ಸೂಕ್ತ ಸಾಕ್ಷಿಗಳನ್ನು ಒದಗಿಸುವುದಿಲ್ಲ. ಈ ಕಾರಣಕ್ಕೇ ಹಲವಾರು ಪ್ರಕರಣಗಳಲ್ಲಿ ದಲಿತರಿಗೆ ನ್ಯಾಯ ಸಿಗುವುದಿಲ್ಲ. ಅದಕ್ಕೆ ಉದಾಹರಣೆ ಇತ್ತೀಚೆಗೆ ಪಟ್ನಾ ಹೈಕೋರ್ಟ್ ಹಲವಾರು ದಲಿತರ ಮೇಲಿನ ದಾಳಿಯ ಪ್ರಕರಣಗಳಲ್ಲಿ ಮೇಲು ಜಾತಿಯ ರಣವೀರ್ ಸೇನೆಯ ಸದಸ್ಯರನ್ನು ಎಲ್ಲಾ ಆರೋಪಗಳಿಂದ ಖುಲಾಸೆಗೊಳಿಸಿದ್ದು. ನಮ್ಮ ವ್ಯವಸ್ಥೆಯೇ ದಲಿತರ ವಿರುದ್ಧ ಇರುವುದರಿಂದ ಕ್ರಿಮಿನಲ್‌ಗಳಿಗೆ ಎಂತಹ ಕೃತ್ಯ ಎಸಗಿದರೂ ಅದನ್ನು ದಕ್ಕಿಸಿಕೊಳ್ಳಬಹುದು ಎಂಬ ಧೈರ್ಯಬರುತ್ತದೆ. ಭಗಾನದಲ್ಲಿ ನಾಲ್ವರು ದಲಿತ ಯುವತಿಯರ ಮೇಲೆ ಅತ್ಯಾಚಾರವೆಸಗಿದ ನಂತರ ಅವರನ್ನು ಪಕ್ಕದ ರಾಜ್ಯದಲ್ಲಿ ಬಿಸಾಡಿದ್ದು ಇಂತಹ ಧೈರ್ಯದಿಂದಾಗಿಯೇ. ಇವತ್ತಿಗೂ ಭಗಾನದ ದಲಿತರು ದೆಹಲಿಯಲ್ಲಿ ನಿರಶನ ಕೂತಿದ್ದರೂ ಅವರತ್ತ ಯಾರೂ ಗಮನಹರಿಸುತ್ತಿಲ್ಲ. ದಲಿತೇತರ 'ನಿರ್ಭಯ'ಳ ಅತ್ಯಾಚಾರ ಮತ್ತು ಕೊಲೆಯನ್ನು ಪ್ರತಿಭಟಿಸಿದ್ದ ಪ್ರಗತಿಪರರು ಭಗಾನದ ದಲಿತ ಯುವತಿಯರ ಬಗ್ಗೆ ಮೌನ ವಹಿಸಿರುವುದು ಅವರ ಜಾತೀವಾದಿ ಮನಸ್ಸನ್ನು ತೋರುತ್ತದೆ. ಮಹಾರಾಷ್ಟ್ರದ ಅಹಮದ್‌ನಗರ್ ಜಿಲ್ಲೆಯಲ್ಲಿ ಮೇಲುಜಾತಿಯ ಯುವತಿಯನ್ನು ಮಾತನಾಡಿಸಿದ ತಪ್ಪಿಗೆ ನಿತೀಶ್ ಎಂಬ ಶಾಲಾಬಾಲಕನನ್ನು ಹಾಡುಹಗಲೇ ಹೊಡೆದು ಕೊಲ್ಲಲಾಯಿತು. ಏಕೈಕ ಪುತ್ರನಾಗಿದ್ದ ನಿತೀಶನ ತಂದೆತಾಯಿಯ ನೋವನ್ನು ಅರ್ಥಮಾಡಿಕೊಳ್ಳುವವರು ಯಾರು? ಬದಾಂವ್ ಜಿಲ್ಲೆಯಲ್ಲಿ ರಾತ್ರಿ ಇಡೀ ಅತ್ಯಾಚಾರಕ್ಕೆ ತುತ್ತಾಗಿ ಕೊನೆಗೆ ನೇತು ಬಿದ್ದ ಇಬ್ಬರು ದಲಿತ ಯುವತಿಯರ ಯಾತನೆಯನ್ನು ನಮಗೆ ಕಲ್ಪಿಸಿಕೊಳ್ಳಲಿಕ್ಕೂ ಸಾಧ್ಯವೇ? ಇಂತಹ ಕೃತ್ಯಗಳನ್ನು ಎಸಗಿದವರಿಗೆ ರಾಜಕೀಯ ಪಕ್ಷಗಳ ಬೆಂಬಲ ಇರುವುದರಿಂದಲೇ ಇವು ಮುಂದುವರೆಯುತ್ತಿವೆ. ಹರ್ಯಾಣದಲ್ಲಿ ಕಾಂಗ್ರೆಸ್ ಪಕ್ಷ, ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಮತ್ತು ಮಹಾರಾಷ್ಟ್ರದಲ್ಲಿ ಎನ್‌ಸಿಪಿ ಕ್ರಿಮಿನಲ್‌ಗಳ ಬೆಂಬಲಕ್ಕೆ ನಿಂತಿವೆ.

ಅಮೆರಿಕದಲ್ಲಿ ಕಪ್ಪು ಬಣ್ಣದ ಜನರನ್ನು ಕತ್ತರಿಸಿ ಕೊಂದು ಹಾಕಿದಾಗ ಕಪ್ಪು ಯುವಕರನ್ನು ತಮ್ಮ ಕೈಗಳಿಗೆ ಬಂದೂಕುಗಳನ್ನು ಎತ್ತಿಕೊಂಡು ಬಿಳಿಯರಿಗೆ ಪಾಠ ಕಲಿಸಿದ್ದರು. ಭಾರತದಲ್ಲೂ ಜಾತಿವಾದಿ ಕ್ರಿಮಿನಲ್‌ಗಳ ವಿರುದ್ಧ ಇಂತಹದ್ದೇ ಪ್ರತಿಕ್ರಿಯೆ ವ್ಯಕ್ತವಾಗಬೇಕೇ?"

ಉತ್ತರ ಕನ್ನಡ: ನೌಕಾನೆಲೆ ನಿರಾಶ್ರಿತರಿಗೆ ಉದ್ಯೋಗ ವಂಚನೆ!



ಕಾರವಾರದ ಕಡಲಲ್ಲಿ ಸುಮಾರು ಮೂರು ದಶಕದ ಹಿಂದೆ ಸ್ಥಾಪಿಸಿರುವ ದೇಶ ಕಾಯುವ ನೌಕಾನೆಲೆ ಏಷಿಯಾ ಖಂಡದಲ್ಲೇ ಬಲು ದೊಡ್ಡದು! ಅದಕ್ಕಿಂತಲೂ ದೊಡ್ಡದು ಈ ನೌಕಾನೆಲೆಯ 'ಪ್ರಭುತ್ವ' ದೇಶಕ್ಕಾಗಿ ನೆಲ-ನೆಲೆ, ಬದುಕು-ಭವಿಷ್ಯ ತ್ಯಾಗ ಮಾಡಿದ ನಿರಾಶ್ರಿತರಿಗೆ ಮಾಡುತ್ತಿರುವ ಮಹಾಮೋಸ-ವಂಚನೆ!! ಅಂದಿನ ಪ್ರಧಾನಿ ರಾಜೀವ್ ಗಾಂಧಿ ಸದ್ರಿ ನೌಕಾನೆಲೆಯ ಶಿಲಾನ್ಯಾಸ ಮಾಡಲೆಂದು ಕಾರವಾರಕ್ಕೆ ಬಂದಾಗ- "ಯೋಜನಾ ಸಂತ್ರಸ್ತರ ಕಣ್ಣಲ್ಲಿ ಒಂದು ಹನಿ ನೀರು ಬರದಂತೆ ಸರ್ಕಾರ ಪುನರ್ವಸತಿ ಕಲ್ಪಿಸಲಿದೆ" ಎಂದಿದ್ದರು. ಆದರೆ ಆಗಿದ್ದು ಅಕ್ಷರಶಃ ಉಲ್ಟಾ-ಪಲ್ಟಾ. ಯೋಜನೆಗೆ ಭೂಸ್ವಾಧೀನ ಶುರುವಾದ ಸಮಯದಲ್ಲಿ ಅಳಲು ಆರಂಭಿಸಿದ್ದ ಅಂಕೋಲಾ-ಕಾರವಾರದ ನಿರಾಶ್ರಿತ ಕುಟುಂಬಗಳು ಇವತ್ತಿಗೂ ಕಣ್ಣೀರಲ್ಲೇ ಕೈತೊಳೆಯುತ್ತಿವೆ!!

ಅಂಕೋಲಾ-ಕಾರವಾರದ ನಡುವಿನ 18 ಕಿ.ಮೀ. ಭೂಮಿ ಕಳಕೊಂಡವರಿಗೆ ರಕ್ಷಣಾ ಇಲಾಖೆ ನಿಗದಿಸಿದ ಪರಿಹಾರ ಅತೀ ಕಡಿಮೆ!! ಒಂದು ತೆಂಗಿನಮರಕ್ಕೆ ಅಂದಿನ ನೂರು ತೆಂಗಿನ ಕಾಯಿಯ ರೇಟು ನಿಕ್ಕಿ ಮಾಡಿರಲಿಲ್ಲ, ಮೀನುಗಾರರಂತೂ ಬದುಕು ಅರಸಿ ಎಲ್ಲೆಲ್ಲಿಯೋ ಚದುರಿಹೋದರು. ಕೆಲವು ಕುಟುಂಬಗಳು ಹೊಸ ಪರಿಸರದಲ್ಲಿ ಬದುಕು ಕಟ್ಟಿಕೊಳ್ಳಲಾಗದೇ ಕಾಲಗರ್ಭದಲ್ಲಿ ಲೀನವಾಗಿ ಹೋದವು!

ಸೀ ಬರ್ಡ್ ನೌಕಾನೆಲೆ ನಿರಾಶ್ರಿತರ ಮನೆ-ಭೂಮಿ-ತೋಟ ಪಟ್ಟಿಗೆ ನಿಗದಿಸಿದ ಹಣದಲ್ಲಿ ಶೇ. 10ರಷ್ಟೂ ಈವರೆಗೆ ಬಟಾವಡೆ ಆಗಿಲ್ಲ. ಸುಪ್ರೀಂಕೋರ್ಟ್‌ವರೆಗೆ ಹೋರಾಡಿದ ನಿರಾಶ್ರಿತರಿಗೆ ಇವತ್ತಿಗೂ ನ್ಯಾಯ ಮಾತ್ರ ರಕ್ಷಣಾ ಇಲಾಖೆಯ ಹೃದಯ ಶೂನ್ಯ ಅಧಿಕಾರಿಗಳು ನೀಡಿಲ್ಲ. ಭೂಮಿ ಕಳಕೊಂಡವರಿಗೆ ಪ್ರತಿ ಗುಂಟೆಗೆ 11,500 ರೂ. ಪರಿಹಾರ ಕೊಡುವಂತೆ ಸುಪ್ರೀಂಕೋರ್ಟ್


ಕಾರವಾರ-ಅಂಕೋಲಾದ ಸೀಬರ್ಡ್ ನಿರಾಶ್ರಿತರ ಹೋರಾಟಕ್ಕೆ ಮೂರು ದಶಕಗಳ ಇತಿಹಾಸವಿದೆ. ಇಂದಿಗೂ ಪ್ರತಿಭಟನೆ, ಹಕ್ಕೊತ್ತಾಯದ ಗ್ರಹಚಾರ ಮುಗಿದಿಲ್ಲ. ಉರಿಬಿಸಿಲು-ಬಿರುಮಳೆಯಲ್ಲಿ ತಗಡಿನ ಶೆಡ್‌ಗಳಲ್ಲಿ ಒದ್ದಾಡಿದ ಸಂತ್ರಸ್ತರು ಸರ್ಕಾರ ಕೊಟ್ಟ ಬಂಜರು ಭೂಮಿಯಲ್ಲಿ ಬೆಳೆ ತೆಗೆಯಲಾಗದೆ, ಪುನರ್ವಸತಿ ಕೇಂದ್ರಗಳಲ್ಲಿ ಮರುಹುಟ್ಟು ಕಾಣಲಾಗದೆ ಕಂಬನಿಗರೆದ ದಿನಗಳಂತೂ ಕಾರವಾರದ ಇತಿಹಾಸ ಸೇರಿಹೋಗಿದೆ. ಮೀನುಗಾರರು ತಮ್ಮ ಬಲೆ-ದೋಣಿ-ಜೋಟು ಇಡಲು, ವಹಿವಾಟು ನಡೆಸಲು ಸರಿಯಾದ ಕಡಲ ತಡಿ ಸಿಗದೆ ಪರದಾಡಿದ್ದು ಎಂದಿಗೂ ಮರೆಯದ ಕತೆ. ಪ್ಯಾಕೇಜ್, ಪುನರ್ವಸತಿಗಾಗಿ ಹೋರಾಡಿದ ನಿರಾಶ್ರಿತರು ಈಗ ಪ್ರಮುಖ ಬೇಡಿಕೆಯಾದ ಉದ್ಯೋಗಕ್ಕಾಗಿ ಮತ್ತೆ ಬೀದಿಗಿಳಿದಿದ್ದಾರೆ.

ಉದ್ಯೋಗವನ್ನು ನೀಡುತ್ತಾ ಬಂದಿದೆ. ಆದರೆ ಕಾರವಾ ಅಂಕೋಲೆಯ ಹದಿಮೂರು ನೌಕಾನೆಲೆ ಯೋಜನಾ ಸಂ ಹಳ್ಳಿಗರ ಉದ್ಯೋಗ ಬೇಡಿಕೆ ಮಾತ್ರ ಈವರೆಗೆ ಈಡೇರಿ ನಿರಾಶ್ರಿತ ಕುಟುಂಬಕ್ಕೊಂದು ಉದ್ಯೋಗ ಬೇಕೆಂಬ ಕೂ 28 ವರ್ಷದಿಂದ ಮೊಳಗುತ್ತಿದೆ. ಈಗ ಈ ಹಕ್ಕೊತ್ತಾಯ ಹೋರಾಟದ ಕೆಚ್ಚು ಬಂದಿದೆ. ಆರಂಭದಲ್ಲಿದ್ದ 4 ನಿರಾಶ್ರಿತ ಕುಟುಂಬಗಳು ಈಗ 12 ಸಾವಿರಕ್ಕೇರಿದೆ. ಉದ್ಯೋಗ ವಂಚಿತ ಪರಿವಾರಗಳು ನೌಕಾಸೇನೆಯಲ್ಲಿ ಕೆ ಕೊಡಿ ಎಂದು ಆಗ್ರಹಿಸುತ್ತಿವೆ.

ನಿರಾಶ್ರಿತ ಕುಟುಂಬಕ್ಕೆ ನೌಕಾನೆಲೆಯಲ್ಲಿ ವಿ ಉದ್ಯೋಗ ಕೊಡುವ ಆಸೆ ಮೊದಲು ಬಿತ್ತಲಾಗಿ ರಕ್ಷಣಾ ಇಲಾಖೆ ಅನುದಾನದಲ್ಲಿ ನಿರಾಶ್ರಿತ ಕುಟುಂಬ ಯುವಕ-ಯುವತಿಯರಿಗೆ ಕೈಗಾರಿಕಾ ತರಬೇತಿ (ಐಟಿ ಶಿಕ್ಷಣವನ್ನೂ ಒದಗಿಸಲಾಗಿತ್ತು. ವರ್ಷಕ್ಕೆ 1000ದಂತೆ







ಉದ್ದದ ಕಡಲ ಕಿನಾರೆಯಲ್ಲಿ ಕದಂಬ ನೌಕಾನೆಲೆ ತನ್ನ ವಸಾಹತು ಸ್ಥಾಪಿಸಿದೆ. ಈ ಸರಹದ್ದಿನ 13 ಹಳ್ಳಿಗಳನ್ನು 'ಖಾಲಿ' ಮಾಡಿರುವ ರಕ್ಷಣಾ ಇಲಾಖೆ ಬರೋಬ್ಬರಿ 4111 ಅಮಾಯಕ ಕುಟುಂಬಗಳನ್ನು ಅಪೋಷನ ಪಡೆದುಬಿಟ್ಟಿದೆ. ರೈತ-ಮೀನುಗಾರರಿಗೆ ಜೀವನಾಧಾರವಾಗಿದ್ದ ಸಮೃದ್ಧ ಗದ್ದೆ-ತೋಟ ಪಟ್ಟಿ ಮತ್ತು ಅಪಾರ ಮೀನಿನ ಆಗರವಾಗಿದ್ದ ಸಮುದ್ರ ದಂಡೆಯನ್ನು ನೌಕಾನೆಲೆ ಕಬ್ಜಾ ಮಾಡಿಕೊಂಡಿದೆ. ಇದರಲ್ಲಿ ಬಡ ಜನರಿಗೆ ಸೇರಿದ 5421 ಎಕರೆ ಭೂಮಿಯಿದ್ದರೆ ಸರ್ಕಾರದ 6933 ಎಕರೆ ಜಾಗ ಸೇರಿದೆ. 1987ರಲ್ಲಿ ಅಮಾಯಕ ಮಂದಿಯನ್ನು ಒಕ್ಕಲೆಬ್ಬಿಸಿದ ಸರ್ಕಾರ ಆ ಬಳಿಕ ಈ ಜನರು ಇದ್ದಾರೋ? ಸತ್ತಿದ್ದಾರೋ ಎಂದು ಕಣ್ಣೆತ್ತಿಯೂ ನೋಡಲಿಲ್ಲ!!

ಉತ್ತರ ಕನ್ನಡವೆಂಬ ಸರ್ಕಾರಿ ಯೋಜನೆಗಳ ಪ್ರಯೋಗಾಲಯದ ನಿರಾಶ್ರಿತರ ಗೋಳು ಹೇಳತೀರದು. ಭೂಮಿ ಮತ್ತು ಸಾಗರದಲ್ಲಿ ಕೃಷಿ ಮಾಡಿ ಬದುಕಿದ ಮಂದಿಯ ಬವಣೆ ಒಂದು ರೀತಿಯಾದರೆ ನಿಂತ ನೆಲದಲ್ಲೇ ಕ್ಷೌರಿಕ, ಬಡಿಗ, ಕಮ್ಮಾರ, ಕುಂಬಾರ, ಕೃಷಿ-ಮೀನುಗಾರಿಕೆ ಕಾರ್ಮಿಕರ ಒದ್ದಾಟ ಇನ್ನೊಂದು ಕರುಣಾಜನಕ ಕತೆ!

ಆದೇಶಿಸಿದೆ. ನ್ಯಾಯಾಲಯದಿಂದ ನ್ಯಾಯಾಲಯಕ್ಕೆ ಅಲೆದಾಡುವ ತ್ರಾಣವಿಲ್ಲದ ನಿರಾಶ್ರಿತರ ಬೆನ್ನಿಗೆ ನಿಂತು ಶಾಸಕ ಸತೀಶ್ ಸೈಲ್ ಹಣಕಾಸಿನ ನೆರವು ನೀಡಿದ್ದ. ಎಮ್ಮೆಲ್ಲೆ ಆಗುವ ಚಮತ್ಕಾರ ಇದಾದರೂ ನಿರಾಶ್ರಿತರಿಗೆ ನಿಟ್ಟುಸಿರು ಬಿಡುವಂತಾಗಿದ್ದು ಸತೀಶ್ ಸೈಲ್ ಸಾಹುಕಾರನಿಂದೆಂಬುದು ಖರೆ.

ದುರಂತವೆಂದರೆ, ರಕ್ಷಣಾ ಇಲಾಖೆ ನ್ಯಾಯಾಲಯಗಳ ತೀರ್ಪನ್ನ ಕೇರ್ ಮಾಡದೆ ಅಂಧಾದರ್ಬಾರು ನಡೆಸುತ್ತಿದೆ; ನಿರಾಶ್ರಿತರ ಮೇಲೆ ದಬ್ಬಾಳಿಕೆ ಮಾಡುತ್ತಿದೆ. ಭೂಸ್ವಾಧೀನ ಸಮಯದಲ್ಲಿ ಮತ್ತು ಬೇರೆ ಬೇರೆ ಸಂದರ್ಭದಲ್ಲಿ ರಕ್ಷಣಾ ಇಲಾಖೆ ಪ್ರಭೃತಿಗಳು ಮತ್ತು ಆಳುವ ಖೂಳರು ನಿರಾಶ್ರಿತರಿಗೆ-ಸ್ಥಳೀಯರಿಗೆ ಉದ್ಯೋಗ ಕೊಡುವ ಭರವಸೆ ನೀಡಿದ್ದರು. ಆದರೆ ಉದ್ಯೋಗ-ಪರಿಹಾರ-ಪುನರ್ವಸತಿ ಎಂಬುದು ತ್ಯಾಗ ಮಾಡಿದವರ ಪಾಲಿಗೆ ಮರೀಚಿಕೆಯಂತಾಗಿದೆ. ಒಂದು ಕಡೆ ಮನೆ-ಜೀವನಾಧಾರ ಕಸುಬಿಲ್ಲ, ಮತ್ತೊಂದೆಡೆ ಪರಿಹಾರವಿಲ್ಲ, ಮಗದೊಂದೆಡೆ ದುಡಿದು ತಿನ್ನಲು ಉದ್ಯೋಗಾವಕಾಶವಿಲ್ಲ. ನಿರಾಶ್ರಿತರ ಬದುಕೆಂಬುದು ಬರ್ಬರ-ಭಯಾನಕವಾಗಿದೆ!

ಬೃಹತ್ ಯೋಜನೆಗಳು ಜಾರಿಯಾದಾಗ ಸಂತ್ರಸ್ತ ಕುಟುಂಬದವರಿಗೆ ಮತ್ತು ಸ್ಥಳೀಯರಿಗೆ ಆ ಯೋಜನೆಯಲ್ಲಿ ಉದ್ಯೋಗಾವಕಾಶ ನೀಡುವುದು ಸರ್ಕಾರದ ಕಡ್ಡಾಯ ಧೋರಣೆಯಲ್ಲಿ ಒಂದು. ಆದರೆ ಯಾರೂ ಪ್ರಶ್ನಿಸರು ರಕ್ಷಣಾ ಇಲಾಖೆ ಎಂಬ ಹುಸಿ ಗುಮ್ಮ ತೋರಿಸಿ ನೌಕಾಸೇನಾ ಅಧಿಕಾರಿಗಳು ಸ್ಥಳೀಯರಿಗೆ ಉದ್ಯೋಗ ವಂಚಿಸುತ್ತ ಬಂದಿದ್ದಾರೆ. ಕೇಂದ್ರ ಸರಕಾರದ ಯೋಜನೆಗಳ ನಿರಾಶ್ರಿತರಿಗೆ ಶೇ.35 ಉದ್ಯೋಗ ಮೀಸಲಿಡುವ ರೀತಿ-ನೀತಿ ಕಾರವಾರದ ನೌಕಾನೆಲೆಯಲ್ಲಿ ಮಾತ್ರ ಜಾರಿಗೆ ಬಂದಿಲ್ಲ! ಸಂವಿಧಾನದ 309ರ ಕಲಂನಲ್ಲಿ ನಿರಾಶ್ರಿತರಿಗೆ ನೆರವಾಗುವಂತೆ ಹೇಳಲಾಗಿದೆ. ಕರ್ನಾಟಕದ ಹೈಕೋರ್ಟ್ ಭೀಮ ಲಿಂಗಮ್ಮ v/s ಕೆಪಿಸಿ ಪ್ರಕರಣದಲ್ಲಿ ನಿರಾಶ್ರಿತರ ಬೇಡಿಕೆ ಪರಿಗಣಿಸುವಂತೆ ಆದೇಶಿಸಿದೆ. ಇದ್ಯಾವುದೂ ನೌಕಾಸೇನಾದ ಧಡಪ್‌ಶಾಹಿಗಳಿಗೆ ಲೆಕ್ಕಕ್ಕೇ ಇಲ್ಲದ ತೀರ್ಪು-ಆದೇಶ-ನಿಯಮ!!

ಕೊಂಕಣ ರೇಲ್ವೆ ಕೂಡ ನಿರಾಶ್ರಿತರಿಗೆ ಉದ್ಯೋಗ ಮೀಸಲಿಡುವ ಪಾಲಿಸಿ 11.7.1998ರಲ್ಲಿ ರೂಪಿಸಿಕೊಂಡಿದೆ. ಅದರಂತೆ ರೈಲು ಯೋಜನೆ ನಿರಾಶ್ರಿತ ಕುಟುಂಬಗಳಿಗೆ

ವರ್ಷ 6000 ಐಟಿಐ ತರಬೇತಿದಾರರ ಸೃಷ್ಟಿಸಲಾಗಿ ಆದರೆ ಇವರಲ್ಲಿ ಯಾವ ತರುಣ-ತರುಣಿಗೂ ಉದ್ ನೌಕಾನೆಲೆಯಲ್ಲಿ ನೀಡಲಾಗಲಿಲ್ಲ. ಸ್ಥಳೀಯರು ಕಾರ ನೌಕಾನೆಲೆಯಲ್ಲಿ ಉದ್ಯೋಗ ದೊರಕಿಸಿಕೊಳ್ಳದಂತೆ ಮಾ ಷಡ್ಯಂತ್ರ ರಕ್ಷಣಾ ಇಲಾಖೆಯ ಭ್ರಷ್ಟರು ತುಂಬ ನಾಜೂ ನಿರ್ವಹಿಸುತ್ತಿದ್ದಾರೆ. ಉದ್ಯೋಗದ ಪರೀಕ್ಷೆ-ಸಂದರ್ ಮುಂಬೈನಲ್ಲಿ ನಡೆಸಲಾಗುತ್ತಿದೆ. ಅಧಿಕಾರಿಗಳಿಗೆ ಕಾ ಕೊಡುವ ಹೊರ ರಾಜ್ಯದವರಿಗೆ ಉದ್ಯೋಗ ಕಬಳಿ ಅನುಕೂಲ ಮಾಡಿಕೊಡುವ ಹುನ್ನಾರ ಇದು; ಯೋ ಸಂತ್ರಸ್ತರಿಗೆ ಮಾಡಿದ ಘನ ಘೋರ ಅನ್ಯಾಯವಿದು

ರಕ್ಷಣೆಯಂಥ ಆಯಕಟ್ಟಿನ ಇಲಾಖೆಯಲ್ಲೇ ಅ ಭ್ರಷ್ಟತೆ ನಡೆಯುತ್ತಿದೆ ಎಂಬುದಕ್ಕೆ ಕಾರವಾರ ನೌಕಾನೆ ಉದ್ಯೋಗ ನೇಮಕಾತಿ ಕರ್ಮಕಾಂಡ ನಿ ನಿದರ್ಶನದಂತಿದೆ! ಈ ನೌಕಾನೆಲೆಯಲ್ಲೀಗ ನೇರ ನೇಮ ನಡೆಯುತ್ತಿಲ್ಲ. ಏನಿದ್ದರೂ ಕಮಿಷನ್-ಕಾಣಿಕೆ ಬ ಟೆಂಡರ್-ಗುತ್ತಿಗೆ ತಂತ್ರಗಾರಿಕೆ; ಮಧ್ಯವರ್ತಿಗಳ ಹಾ ನೌಕಾಸೇನೆಯ ಮಾಂಡಲೀಕರ ಏಜೆಂಟ ಉದ್ಯೋಗದಾತರು. ಈ ದಲ್ಲಾಳಿಗಳ ರೇಟಿಗೆ







ದವರಿಗೆ ನೌಕರಿ ಖಾತ್ರಿ!! ನೇವಿ ಅಧಿಕಾರಿಗಳು ಕ್ಟರ್‌ಗಳ ಅಡಿಯಾಳಿನಂತಾಗಿದ್ದಾರೆ; ನೇಮಕಾತಿಯಷ್ಟೇ ಕಾಮಗಾರಿ, ಖರೀದಿಯಲ್ಲಿ ಕಿಕ್‌ಬ್ಯಾಕ್-ಕಮಿಷನ್ ನಡೆಯುತ್ತಿದೆ. 5 ರೂ. ಬೋಲ್ಟ್ ನಟ್‌ಗೆ 15,000 ರ್ಜ್ ಬೀಳುತ್ತಿದೆ.

ಈ ಅನುಮಾನಕ್ಕೆ ಇಲ್ಲೊಂದು ಸಾಕ್ಷ್ಯಾಧಾರವೂ ಇದೆ. ಅಕ್ಟೋಬರ್ 19-25ರ Employment news ಯಲ್ಲಿ 177 ನಾನ್ ಇಂಡಸ್ಟ್ರಿಯಲ್ ಹುದ್ದೆಗಳಿಗೆ ಪ್ರಕಟಿಸಲಾಗಿತ್ತು. ಕಾರವಾರ-ಅಂಕೋಲೆಯ ನಿರಾಶ್ರಿತ ಟುಂಬದ ಹಲವು ಅರ್ಹರು ಅರ್ಜಿ ಗುಜರಾಯಿಸಿ ಪಕ್ಷಿಯಂತೆ ಗೋಣು ಉದ್ದ ಮಾಡಿಕೊಂಡು ಯುತ್ತಿದ್ದರು. ಆದರೆ ನೇಮಕಾತಿ ಪ್ರಕ್ರಿಯೆ ಮಾತ್ರ ಬಣ್ಣ ಸಮವಸ್ತ್ರದ ನೌಕಾಸೇನಾ ಅಧಿಕಾರಿಗಳು ಮಾಡಲೇ ಇಲ್ಲ. ಉಡುಗೆಯೊಳಗಿನ ಮನಸ್ಸು-ಗಳು ಧನದಾಹದಿಂದ ಕಪ್ಪಾಗಿತ್ತು. ಹೀಗಾಗಿ ರ್ಜ್‌ನಲ್ಲಿ ಇದ್ದಕ್ಕಿದ್ದಂತೆ ಈ ನೇಮಕಾತಿ ಪ್ರಕಟಣೆ ಮಾಡಿ ಏಜೆನ್ಸಿ ಮೂಲಕ ನೇಮಕಾತಿ ಮಾಡುವ ರ್ ಕರೆಯಾಗಿದೆ. ಗುತ್ತಿಗೆ ನೇಮಕಾತಿ ನಾಟಕವಾಡಿ ಯ ಅರ್ಹ ನಿರಾಶ್ರಿತ ಅಭ್ಯರ್ಥಿಗಳಿಗೆ ಪಂಗನಾಮ ವ ನಾಟಕವಿದು.

ಅವ್ಯವಹಾರದ ಗಬ್ಬುನಾತ ಕಾರವಾರ ನೌಕಾಸೇನಾ ನೆಯಿಂದ ಅದೆಷ್ಟು ಜೋರಾಗಿ ಬರುತ್ತಿದೆಯೆಂದರೆ, ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗಿರುವ 88 ಯಲ್ಲಿ ಕೇವಲ ಒಬ್ಬ ಮಾತ್ರ ಸ್ಥಳೀಯ ಅಭ್ಯರ್ಥಿ. ದವರೆಲ್ಲ ಬಂಗಾಳಿಗಳು. ಅವರಲ್ಲಿ ಹಲವರ ಪ್ರಮಾಣ ಗಳು- ದಾಖಲೆಗಳು ಖೊಟ್ಟಿ. ಸೀಮನ್‌ನಂಥ ಗಳಿಗೆ ಅನುಭವದ ಸರ್ಟಿಫಿಕೇಟ್ ಕೊಟ್ಟವರು ಯ ಮೀನುಗಾರಿಕಾ ಬೋಟ್ ಒಡೆಯರು. ಈ ಪ್ರಮಾಣಪತ್ರವನ್ನು ಕಳ್ಳ ಬಂದರು ಅಧಿಕಾರಿಗಳು ಕರಿಸಿದ್ದಾರೆ.

ಹಾಗೆಯೇ ಸ್ಥಳೀಯ ನಿರಾಶ್ರಿತ ತಾಂತ್ರಿಕ ತರಬೇತಿ , ಅಪ್ರೆಂಟಿಸ್ ಕೋರ್ಸ್ ಮಾಡಿದವರನ್ನೆಲ್ಲ ಕತ್ತಲಲ್ಲಿಟ್ಟು ಸೇನಾಧಿಪತಿಗಳು ಆಂಧ್ರವಾಳ್ಳುಗಳಿಗೆ ಉದ್ಯೋಗ ದ್ದಾರೆ. 140 ಆಂಧ್ರ ಮೂಲದ ಐಟಿಐ ಬೇತಿದಾರರಿಗೆ ನೌಕರಿ ನೀಡಿರುವ ನೌಕಾನೆಲೆ ಕಾರಿಗಳು ತಮ್ಮದೇ ಅನುದಾನದಲ್ಲಿ ಐಟಿಐ ಸಿರುವ ಸ್ಥಳೀಯ ನಿರಾಶ್ರಿತ ಕುಟುಂಬದ ರ್ಥಿಗಳಿಗೆ ಅನ್ಯಾಯ ಮಾಡಿದ್ದಾರೆ!

ನೌಕಾನೆಲೆಯ ನಾಲಾಯಕ್ ಅಧಿಕಾರಿಗಳ ಅಧಿಕ ಗ, ಅವ್ಯವಹಾರ, ಅವಾಂತರ ಮತ್ತು ದೌರ್ಜನ್ಯದಿಂದ ಲಾಗಿದ್ದ ಕಾರವಾರ-ಅಂಕೋಲೆಯ ಜನರ ಅಸಹನೆ ಆಸ್ಫೋಟಿಸಿದೆ! 16 ಬೇಡಿಕೆಗಳನ್ನು ಮುಂದಿಟ್ಟು ವವರ ವಿರುದ್ಧ ಬೀದಿಗಿಳಿದಿದ್ದಾರೆ. ಶೇ. 35ರಷ್ಟು ಯುರಿಗೆ ಉದ್ಯೋಗ ಮೀಸಲಿಡಬೇಕು, ಗುತ್ತಿಗೆ ಲ್‌ಮಾಲ್ ಮಾಡದೆ ನೇರ ನೇಮಕಾತಿ ನಡೆಸಬೇಕು, ಕೋರ್ಟ್ ಆದೇಶದಂತೆ ಹೆಚ್ಚುವರಿ ಭೂಪರಿಹಾರ ವಿತರಿಸಬೇಕು, ಉದ್ಯೋಗ ನೇಮಕಾತಿ ಪರೀಕ್ಷೆ ಕಾರ ನೌಕಾನೆಲೆಯಲ್ಲೇ ಮಾಡಬೇಕು, ಸಂದರ್ಶನ ದಲ್ಲಿರಬೇಕು, ಗುತ್ತಿಗೆ ಆಧಾರದಲ್ಲಿ ನೇಮಕವಾಗಿರುವ ಳಿಗಳ ಖೋಟಾ ಸರ್ಟಿಫಿಕೇಟ್ ಬಗ್ಗೆ ತನಿಖೆ ಬೇಕು, ನೌಕಾನೆಲೆ ಅನುದಾನದಲ್ಲಿ ಐಟಿಐ ಮಾಡಿರುವ ಶ್ರಿತ ಪರಿವಾರದ 6000 ಅಭ್ಯರ್ಥಿಗಳಿಗೆ ನೌಕರಿ ಬೇಕು ಮತ್ತು ನೇವಿಯವರ ಸ್ಥಳೀಯ 'ಪತಂಜಲಿ' ಸಾರ್ವಜನಿಕರಿಗೂ ಮುಕ್ತವಾಗಿಡಬೇಕು... ಮುಂತಾದ ಕೆಯ ಕೂಗೀಗ ಎದ್ದಿದೆ. ಅದು ಕಾರವಾರ ಜಿಲ್ಲಾಡಳಿತ ವಿಧಾನಸೌಧಕ್ಕೆ ಸಣ್ಣದಾಗಿ ಅಪ್ಪಳಿಸುತ್ತಲೂ ಇದೆ.

ದುರಂತ ಅಂದರೆ ಇತ್ತ ಜಿಲ್ಲಾ ಮಂತ್ರಿ ಆರ್.ವಿ. ಪಾಂಡೆ ಮತ್ತು ಸೋಗಲಾಡಿ ಸಂಸದ ಅನಂತ್ಕಾಣಿ ನ್ನೇ ಕೆಡಿಸಿಕೊಂಡಿಲ್ಲ. ದೇಶಪಾಂಡೆಗೆ ಲೋಕಸಭೆ ನ್ ಸೋಲಿನ ಆಘಾತದಿಂದ ಹೊರಬರಲಿಕ್ಕೇ ಲ್ಲಿ, ತನ್ನ ಕರುಳ ಕುಡಿಯ ಭವಿಷ್ಯ ಬರಡಾಯಿತೆಂದು ಮಮ್ಮಲ ಮರುಗುತ್ತಲೇ ಇದ್ದಾರೆ. ತನ್ನ ಹಣ ಮೋಸ ಮಾಡಿದವರನ್ನು ಹುಡುಕಿ-ಹುಡುಕಿ ಕೆನ್ನೆಗೆ ಸುತ್ತಿದ್ದಾರೆ.

ತ್ತ ಕರ್ಮಗೇಡಿ ಅನಂತ್ಕಾಣಿ ವಿಜಯೋತ್ಸವದ ಲ್ಲಿ 'ಕೇಸರಿ'ಬಾತ್ ತಿನ್ನುತ್ತಿದ್ದಾನೆ. ಯಾವ ಕೆಲಸ ದರೂ ಅದು ಎಂಪಿಯಂಥ ಘನಂದಾರಿ ಯದಲ್ಲ ಎಂದು ಮೂಗುಮುರಿವ ಮಾಣಿಗೆ ರದಲ್ಲಿ ನೌಕಾದಳದವರು ಮಾಡುತ್ತಿರುವ ಸಬಿರಾ ಸರ್ಕಾರದ ಪ್ಯಾಕ್ಟರಿಯುದೆಂದು ಅಂಕುಶ ಇಟ್ಟು ಹೇಳಬೇಕಾಗಿದೆ. ಒಂದೂವರೆ ದಶಕದಿಂದ ವಾಗಿರುವ ಮಾಣಿ ಎಂದೂ ನೌಕಾನೆಲೆ ನಿರಾಶ್ರಿತರಿಗೆ ಸ ಹೇಳಿದ್ದೇ ಇಲ್ಲ. ಈಗ ಮಾಣಿಯ ಬಿಜೆಪಿ ರವೇ ಕೇಂದ್ರದಲ್ಲಿದೆ. ಹೀಗಾಗಿ ಈ ಬಾರಿಯ ಶ್ರಿತರ ಹೋರಾಟ ಅನಂತ್ಕಾಣಿಯ ಎಂಪಿಗಿರಿಯ ಪ ಪರೀಕ್ಷೆಯೂ ಆಗಲಿದೆ.


● ನವುಸ

ಸರಳ ಮದುವೆ ವಿರೋಧಿಗಳೆಲ್ಲಾ ಪುರೋಹಿತರ ಪಿಂಡಗಳು ಸಾರ್

ಥೂತ್ತೇರಿ

► ಯಾಹೂ

ಸರ್ಕಾರ ಸತ್ತು ಮಲಗಿದೆ ಎಂದು ಸಾರ್ವಜನಿಕರು ದೂರುತ್ತಿದ್ದರೆ, ಸಿದ್ದರಾಮಯ್ಯ ಬಿಡುವಿಲ್ಲದ ಮೀಟಿಂಗ್ ಮಾಡುತ್ತಿದ್ದಾರಂತಲ್ಲಾ, ಈ ನಡುವೆ ಮೀಡಿಯಾಗಳು ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಹಿಗ್ಗಾಮುಗ್ಗ ಟೀಕಿಸುತ್ತಿವೆಯಲ್ಲಾ, ಹಠಾತ್ತನೆ ಸಂಭವಿಸಿದ ರಾಜಕೀಯ ಬದಲಾವಣೆಯ ಫಲವಾಗಿ ಈಗ ರಾಜ್ಯದ ಮೀಡಿಯಾಗಳೂ- ಮುಖ್ಯವಾಗಿ ಬೆಂಗಳೂರಿನ ಪ್ರಜಾಪ್ರಭ ಮತ್ತು ಕನ್ನಡ ವಾಣಿ ಪತ್ರಿಕೆಗಳು- "ಹೊಗಳಲು ಕೇಂದ್ರ ಸರ್ಕಾರ- ಟೀಕಿಸಲು ರಾಜ್ಯ ಸರ್ಕಾರ" ಎಂಬ ನಿರ್ಣಯವನ್ನು ಕೈಗೊಂಡಿವೆಯಲ್ಲಾ, ಈ ಪತ್ರಿಕೆಗಳು ತಮ್ಮ ಭಾಗಕ್ಕೆ ಯಾವ ಪ್ರಯೋಜನಕ್ಕೂ ಬಾರದ ಸಿದ್ದು ಸರ್ಕಾರದ ಯೋಜನೆಗಳನ್ನೆಲ್ಲಾ ಆಡಿಕೊಂಡು ಪ್ರತಿರೋಧದ ಜನಾಭಿಪ್ರಾಯವನ್ನೆ ರೂಪಿಸುತ್ತಿವೆಯಂತಲ್ಲಾ. ಈ ಪೈಕಿ ಪ್ರಜಾಪ್ರಭದ ಭಟ್ಟರು ಆದ್ದೂರಿ ಮದುವೆ ವಿಷಯದಲ್ಲಿ ಸರ್ಕಾರ ತರಲು ಹೊರಟ ನಿಯಂತ್ರಣದ ವಿರುದ್ಧ ತಿರುಗಿಬಿದ್ದು, ತಮ್ಮ ಜಾಲದಲ್ಲಿ ಸದಾ ಸಕ್ರಿಯವಾಗಿರುವ ಬಾಂಧವರಿಗೆಲ್ಲಾ ಸೂಚನೆ ಕೊಟ್ಟು, ಅವುಗಳೆಲ್ಲಾ ತಮ್ಮ ವಿಕೃತ ಆಲೋಚನೆಗಳನ್ನ ಹರಿಯಬಿಡುತ್ತಿದ್ದಾರಲ್ಲಾ. "ಸ್ವಾಮಿ, ಮದುವೆಗೆ ತೆರಿಗೆ ಹಾಕುವ ನೀವು ಮಾಡಲು ತೆರಿಗೆ ಹಾಕುವುದಿಲ್ಲ ಎಂಬುದಕ್ಕೆ



ಏನು ಗ್ಯಾರಂಟಿ? ನಂತರ ಹೆರಿಗೆಗೂ ತೆರಿಗೆ ವಿಧಿಸುವುದಿಲ್ಲ ಎಂಬ ಭರವಸೆ ಕೊಡುತ್ತೀರಾ?" ಎಂದು ಪ್ರೇಮಿಸಲು ತಾಕತ್ತಿಲ್ಲದ ಚೆಡ್ಡಿ ವೀರರು ಬೊಬ್ಬೆ ಹಾಕುತ್ತಿವೆಯಂತಲ್ಲಾ, ಥೂತ್ತೇರಿ!

****

ಆದ್ದೂರಿ ಮದುವೆ ಪರವಾಗಿ ಪುರೋಹಿತರನ್ನೆಲ್ಲಾ ಪ್ರಚೋದಿಸಿ ಲೇಖನ ಬರೆಸುತ್ತಿರುವ ಭಟ್ಟರಿಗೆ ಪ್ರತಿಯಾಗಿ ನಾವೂ ಏನಾದರೂ ಮಾಡಬೇಕೆನಿಸಿದಾಗ ವಾಟಿಸ್ನೆ ನೆನಪಾಯ್ತು. ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: ಟ್ರರ್‌ರ್... ಟರ್‌ರ್...

"ಹಲೋ ನಮಸ್ಕಾರ, ಹೇಳಿ ಸಾರ್."

"ಎಲ್ಲಿದ್ದಿ ವಾಟಿಸ್ನೆ?"

"ಊರಲ್ಲೆ ಇದ್ದೆ ಸಾರ್. ಉಗ್ರಿ ಮದುವೆ ಡಿಸ್‌ಕಸ್‌ನಲ್ಲಿದ್ದಿನಿ."

"ಅಂಗರೆ ಉಗ್ರಿ ಮದಿವಾಯ್ತಾಯಿದಾನ?"

"ಹೌದು ಸಾರ್. ತರ್ಟಿಯೈಟ್ ಈಯರ್ಸ್ ಈಗ. ಅಂತೂ ಮದಿವಾಯ್ತಾ ಅವ್ನೆ."

"ಹುಡುಗಿ ಎಲ್ಲಿದ್ದೂ?"

"ಹುಡುಗಿ ಹಳೇ ರಿಲೇಸನ್ನು ಸಾರ್. ಅದಕಾಗಲೆ 28 ಈಯರ್ಸ್. ವಳ್ಳೆ ಹುಡುಗಿ. ಅವ್ರಪ್ಪನಿಗೆ ಡವ್ರಿ ಕೊಡಕ್ಕಾಗದೆ ಮದುವೆ ಲೇಟಾಯ್ತು."

"ಉಗ್ರಿ ಡವ್ರಿ ತಗತಾಯಿಲವೆ?"

"ಅದ್ಯಂಗೆ ತಗತನೆ ಸಾರ್? ಅವ್ನು ಡವ್ರಿ ವಿರುದ್ಧ ಮಾತಾಡಿದಾನೆ. ಈಗ ತಗಳಕ್ಕಾಯ್ತದ?"

"ಮಾತಾಡಿ ಸಿಗಾಯ್ಕಂಡ ಅಂತಿಯಾ?"

"ಅಂಗೇನ ಇಲ್ಲ, ಅವ್ನು ಡವ್ರಿ ವಿರೋಧಿ. ಹೆಣ್ಣು ಕೊಡೋನು ಮದುವೆ ಮಾಡಿಕೊಡ್ತನೆ, ಇವ್ನು ಬೀಗರೂಟ ಮಾಡ್ತನೆ ಅಷ್ಟೆ."

"ಬೀಗರೂಟಕ್ಕೆ ಮಟನ್ನೆಷ್ಟು ತತ್ತನೇ?"

"ನಮ್ಮೂರಿಗೆ ನೂರು ಕೆ.ಜಿ. ಸಾಕು ಸಾರ್."

"ನೂರು ಕೆ.ಜಿ. ಮಟನ್ ಆದ್ದೂರಿ ಮದುವೆ ವ್ಯಾಪ್ತಿಗೆ ಬರಲ್ವ?"

"ಬರಲ್ಲಾ ಸಾರ್. ಬೀಗರ ಊಟ ಇರೋದು ಉಗ್ರಿ ಮನೇಲಿ. ಧಾರೆ ನಡಿಯದು ಹುಡುಗಿ ಮನೆ ಮುಂದೆ. ಊರಿನಲ್ಲೇ ಹೆಣ್ಣು ಅಥವಾ ಗಂಡಿನ ಮನೆ ಮುಂದೆ ನಡೆಯೊ ಮದುವೆ ಆದ್ದೂರಿ ವ್ಯಾಪ್ತಿಗೆ ಬರದಿಲ್ಲ."

"ಅಂಗರಿನ್ಯಾವ ಮದುವೆ ಬತ್ತವೆ?"

"ಕಲ್ಯಾಣ ಮಂಟಪದಲ್ಲಿ ನಡಿಯೊ ಮದುವೆ ಆದ್ದೂರಿ ಮದುವೆ ಪಟ್ಟಿಗೆ ಸಾರ ಸಗಟು ಜಮಾವ್ಣೋಟಾಯ್ತವೆ."

"ಅಂಗರೆ ಕಲ್ಯಾಣ ಮಂಟಪದಲ್ಲಿ ಸರಳ ಮದುವೆ ನಡಿಯದೇ ಇಲ್ಲವೆ?"

"ನೈನ್‌ಟಿ ಪರಸೆಂಟ್ ಇಲ್ಲ. ಅಷ್ಟಕ್ಕೂ ಆದ್ದೂರಿ ಮದುವೆ ಮಾಡೋರ್‍ಯಾರು ಅಂದ್ರೇ, ಮೊದಲ್ನೆದಾಗಿ ಅಧಿಕಾರಿಗಳು, ಎರಡ್ನೆದಾಗಿ ರಾಜಕಾರಣಿಗಳು, ಮೂರನೆದಾಗಿ ವ್ಯಾಪಾರಸ್ಥರು. ಈ ಪೈಕಿ ಇಬ್ಬರು ಸರಕಾರ ಕೊಳ್ಳೆ ಹೊಡದ್ರೆ ಒಬ್ಬ ದೇಶದ ಸಂಪತ್ತನ್ನೇ ಕೊಳ್ಳೆ ಹೊಡಿತನೆ. ಆದ್ರಿಂದ ಮೊದಲ್ನೆ ಹಂತದಲ್ಲಿ ಈ ಮೂರು ಜನರ ಮ್ಯಾಲೆ ಆದ್ದೂರಿ ಮದುವೆ ಟ್ಯಾಕ್ಸಾಕಬೇಕು."

"ಕೆಲವು ಸಾರಾಸಗಟು ಆದ್ದೂರಿ ಮದುವೆ ಕಡಿವಾಣನೆ ವಿರೋಧಿಸ್ತಾರಲ್ಲಾ, ಯಾಕೆ?"

"ಸಾಮಾನ್ಯವಾಗಿ ಪುರೋಹಿತರ ಪಿಂಡಗಳು ಸಾರಾಸಗಟು ವಿರೋಧುಸ್ತವೆ. ಹಿಂದೆ ಮೂಢನಂಬಿಕೆ ಕಾನೂನು ಜಾರಿ ಮಾಡ್ತಿವಿ ಅಂದಾಗ ಯಾರು ವಿರೋಧಿಸಿದ್ರೋ ಅದೇ ಜನ ಈಗಲೂ ವಿರೋದುಸ್ತಾಯಿರದು. ಇದು ವಂದ್ರುಪುಲ್ಲು. ಯಾಕಪ್ಪಾ ಅಂದ್ರೆ ಜನಸಮೂಹದ ಮ್ಯಾಲೆ ಮೂಢನಂಬಿಕೆ ಹೇರಿದೋರೂ ಅವ್ರೆ, ಮದುವೆ ಪುರೋಹಿತರಾಗಿದ್ದೋರೂ ಅವರೆ. ಈ ಸರ್ಕಾರ ಯಾವುದೇ ಕಾನೂನು ತರಕ್ಕೆ ಹೊಂಟ್ರೂ ವಿರೋಧ ಮಾಡ್ತಾಯಿರೋದ್ಯಾಕೆ ಅಂದ್ರೇ, ಇಂತ ಕಾನೂನ್ನಲ್ಲ ಅವ್ರ ಬುಡಕ್ಕೆ ನೀರು ಬುಡ್ತವೆ."

"ಅವ್ರಿಗೀಗ ಪುರೋಹಿತಗಿರಿಯಿಂದ್ಲೂ ಜೀವನ ಮಾಡಬೇಕಾಗಿಲ್ಲ, ಮೂಢನಂಬಿಕೆ ಆದಾಯನೂ ಬೇಕಾಗಿಲ್ಲ ಅಲ್ಲವೆ."

"ಫೂಲಿಸ್ ಫೆಲೊ ಕಂಡ್ರಿ ನೀವು. ಅಂಗರೆ ಈಗ ಹರಿಜನರ್‍ಯಲ್ಲ ಪುರೋಹಿತರಾಗಿದ್ದಾರಾ? ದೇವಸ್ಥಾನದ ಪೂಜಾರಿಕೆ ಬದ್ಲಾಗಿದ್ದತೆ? ಅದನ್ನಲ್ಲ ಗಟ್ಟಿ ಮಾಡೊ ಜಾಗಕ್ಕೆ ಬಂದು ಕುಂತವ್ರೆ. ಆ ವರ್ಕನ್ನ ಸರಿಯಾಗಿ ಮಾಡ್ತ ಅವ್ರೆ. ನನಿಗೆ ತಿಳಿಯೊದಷ್ಟು ನಿಮಗೆ ತಿಳಿಯದಿಲವಲ್ರೀ."

"ಸಾರಿ ವಾಟಿಸ್ನೆ!"

"ಏನ್ಸಾರಿ? ಕುವೆಂಪು ಯಾಕ್ರಿ ಮಂತ್ರ ಮಾಂಗಲ್ಯ ಬರುದ್ರು? ಅದರ ವಿರುದ್ಧನೆ ಇವತ್ತಿಗೂ ಪುರೋಹಿತರು ಹೋರಾಡ್ತಿಯಿರದು, ಭಿನ್ನಾಭಿಪ್ರಾಯ ರೂಪುಸ್ತಾಯಿರದು."

"ನೀವು ಕುವೆಂಪು ಮಂತ್ರ ಮಾಂಗಲ್ಯದಂಗೇ ಮದುವೆ ಆದ್ರಾ?"

"ಗೊತ್ತಿದ್ರೆ ಅಂಗೇ ಆಯ್ತಿದ್ದೆ."

"ತಾಳಿ ತಗಂಡ್ರಿ?"

"ಅವ್ರಾಗೆ ಒಂದುಂಗ ಕೊಟ್ಟು, ಒಂದೇ ತಿಂಗಳಿಗೆ ಮಾರಿಕಂಡೆ. ಅದೂ ವಂಕಿ ಉಂಗ್ರ ದತ್ತ ಶೆಟ್ಟಿ ಅನ್ನೋನು ಕೇವಲ ನಾನೂರೈವತ್ತು ರೂಪಾಯಿಗೆ ತಗಂಡ."

"ಹೆಂಡತಿ ಮಾಡಿಯುವರಾ ಕೊಟ್ಟ ಉಂಗ್ರ ಮಾರಿಕಬಾರದು."

"ನೀವಂಗಂತಿರಿ. ಮದುವೆ ಟೈಮಲ್ಲಿ ಮಾಡಿಕಂಡ ಕೈಸಾಲ ಯಾರು ತೀರಿಸಬೇಕು? ಅಷ್ಟಕ್ಕೂ ನಾನು ಚಿನ್ನದ ವಿರೋಧಿ. ಅಪಾಯಕಾರಿಯಾದ ಲೋಹ ಅದು. ಹೆಚ್ಚು ಕಮ್ಮಿಯಾದ್ರೆ ಜೀವಕ್ಕೇ ಅಪಾಯ ತತ್ತದೆ. ಅದಕ್ಕೆ ಮಾರಿದೆ ಸಾರ್. ಅವತ್ತು ಎಂತಹ ಸಮಾಧಾನ ಆಯ್ತು ಅಂತೀರಿ."

"ನಿನಿಗೆ ಸಮಾಧಾನ ಆಗಿರಬಹುದು ವಾಟಿಸ್ನೆ. ಆದ್ರೆ ಒಂದು ಮದುವೇಲಿ ಹಣದ ಜೊತೆಗೆ ಚಿನ್ನದ ಪಾತ್ರನೂ ಬಹಳ ಮುಖ್ಯ ಅಲ್ಲವೆ."

"ಅದು ನನಿಗೂ ಗೊತ್ತು ಸಾರ್. ದೇಶದ ಅರ್ಥ ವ್ಯವಸ್ಥೆಲಿ ಅವೆರಡೂ ಮುಖ್ಯ. ಆದ್ರೆ ನಮ್ಮ ಜೀವನದಲ್ಲಿ ಅವೇ ಮುಖ್ಯ ಆಗಬಾರ್ದು. ಮದುವೇತರ ಪರ್ಸನಲ್ ಮ್ಯಾಟ್ರು. ನಾನೂ ಒಂದೆರಡು ಆದ್ದೂರಿ ಮದುವೆಗೆ ಅಟೆಂಡ್ ಆಗಿದ್ದೆ. ಈಗ ಅವು ಮುರುದು ಬಿದ್ದವೆ. ಅಲ್ಯಾಕೋಗಿದ್ದೆ ಅಂತ ನನಿಗೇ ಅನುಮಾನ ಅದೆ."

"ನೀನು ಮದುವೆಗೆ ಬಂದಿದ್ದೆ ಅಂತ ಅವ್ರುರಿಗಿಷ್ಟ ಇಲ್ದೆಯಿದ್ರು ಜೊತೆಲಿರಬೇಕಿತ್ತೆ?"

"ಅಂಗಲ್ಲ ಸಾರ್. ಆದ್ದೂರಿ ಮದುವೆ ಮಾನ ಮರ್ಯಾದೆಯಾಗಿ ಬದುಕೊ ನಮ್ಮಂತವ್ರುರಿಗೆ ಅನುಮಾನ ಮಾಡ್ತ ಅವೆ. ಈಗ ಕಟ್ಟುತಾಯಿರೊ ಕಲ್ಯಾಣ ಮಂಟಪ್ಪ ನಮ್ಮಂಥವರ ಅಣಕುಸ್ತ ಅವೆ. ಅಲ್ಲಿ ನಡಿಯೋ ಮದುವೆ, ಕ್ಯಟ್ಟ ಕ್ಯಟ್ಟ ಆರ್ಕೆಸ್ಟ್ರಾ, ವೇಸ್ಟಾಗೋ ಊಟ. ನೋಡಿ ಸಾರ್ ನಾನೊಂದು ಮಾತೇಳ್ತಿನಿ. ಮನುಷ್ಯ ಏನ್ನಾರ ತಯಾರು ಮಾಡಬಹುದು. ಆದ್ರೆ ತಿನ್ನೋ ಅನ್ನ ಭೂಮಿಯಿಂದ್ಲೇ ಬೆಳೆದು ಬರಬೇಕು. ಈ ಪಡಪೋಸಿ ಜನಗಳು ಊಟ ಇಕ್ಕಿಸಿಕೊಂಡು ಯಾವುದೂ ಸರಿಯಾಗಿ ತಿನ್ನದಿಲ್ಲ. ಲಾಡು, ಬರ್ಫಿ, ಜಿಲೇಬಿ, ಜಾಂಗಿರನ್ನೆಲ್ಲ ಕಸದ ತೊಟ್ಟಿಗೆ ತುಂಬದ ನೋಡಿದ್ದಿನಿ. ಶುಗರ್ರುದೆ ಬ್ಯಾಡ ಅನ್ನಕ್ಕೇನಾಗ್ಯದೆ. ಸಾರ್ ಈ ಬ್ಯಾಂಡಿಕೂಟ್‌ಗಳು ತಿನ್ನೋ ಪದಾರ್ಥ ವೇಸ್ಟ್ ಮಾಡದ ನಿಲ್ಲಿಸಕ್ಕಾದರೂ ಆದ್ದೂರಿ ಮದುವೆ ಕಂಟ್ರೋಲ್ ಮಾಡಬೇಕು ಸಾರ್."

"ಕಂಟ್ರೋಲ್ ಮಾಡದ್ಯಂಗೆ? ಆದ್ದೂರಿ ಮದುವೆಯಿಂದ ಜೀವನ ಮಾಡೋರ ಕತೆ ಏನೂ ಅಂತಾರಲ್ಲಾ?"

"ಅದೂ ಕೂಡ ಪುರೋಹಿತರ ಬೊಬ್ಬೆ ಸಾರ್. ಬೇಕಾದಷ್ಟು ಪ್ಯಾಗುಟ್ರಿ ಬಾಗಲಾಕಿದವಲ್ಲ ಆಗ ಎಲ್ಲೋಗಿದ್ರು ಇವರು? ದುಡುದು ಬದುಕೋ ಮನುಷ್ಯ ಯಂಗಾರ ಬದುಕ್ತನೆ. ಮಂತ್ರ ಹೇಳೋರು, ಮಾಟ ಮಾಡೋರು ಮತ್ತೆ ಮೈಗಳ್ರು ಮಾತಿಗೆ ಗಮನ ಕೊಡಬಾದ್ರು. ಆಕ್ಚುವಲಿ ಸರಳ ಮದುವೆಯಿಂದ ಅಡಿಗೆ ಬಟ್ರು ಕೆಲಸ ಕಳಕಳ್ಲ. ವಾಲಗದೋರು ಸುಮ್ಮನಾಗದಿಲ್ಲ, ಆರ್ಕೆಸ್ಟ್ರಾ ಅಂತ ಕ್ಯಟ್ಟ ಕ್ಯಟ್ಟ ಹಾಡೇಳೋರು ಸುಮ್ಮನಾಗಬಹುದು, ಅದೂ ಒಳ್ಳೆದೆ. ಮದುವೆ ಆವರಣದಲ್ಲಿ ಸೌಂಡ್ ಪಲ್ಯೂಷನ್ ಆಗದಿಲ್ಲ."

"ಅಂತೂ ಆದ್ದೂರಿ ಮದುವೆಗೆ ಕಡಿವಾಣ ಹಾಕಬೇಕು ಅಂತಿ."


"ಹಾಕಬೇಕು ಸರಿ. ಆದ್ರೆ ಬೀಗರೂಟ ಜೋರಾಯ್ತವೆ. ನೂರು ಕೆ.ಜಿ. ಮಟನ್ ತತ್ತಿದ್ದೋನು ಇನ್ನೂರ ಕೆ.ಜಿ. ತತ್ತನೆ. ಅಂತು ಯಂಗೂ ಮದುವೆಗೆ ಅಂತ ಇಟ್ಟ ಬಜೆಟ್ ಉಡಾಯಿಸ್ತಾರೆ ಸಾರ್. ಅದ್ಕೆ ನಾನೇಳದು, ಆದ್ದೂರಿ ಮದುವೆನ ಯಾರು ಮಾಡ್ತಯಿದಾರೆ ಅಂತ ಒಂದು ಸರ್ವೆ ಮಾಡಿ, ಮದುವೆ ಮಾಡೊ ಹಿಂದಿನ ವಾರ ಲೋಕಾಯುಕ್ತ ರೈಡ್ ಮಾಡಿದ್ರಾಯ್ತು, ಆಟೋಮೆಟಿಕ್ಕಾಗಿ ಸರಳ ಮದುವೆ ತಾನೇತಾನಾಗಿ ಶುರುವಾಯ್ತವೆ. ಮದುವೆ ಟೈಮಿಗೆ ಸಂಬಂಧ ಪಟ್ಟೋರು ಗ್ವಟಕ್ ಅಂದ್ರೂ ಕೂಡ ಸರಳ ಮದುವೆ ಆದದ್ದ ನೋಡಿದ್ದೀನಿ."

"ಯಾರು ಗೊಟಕ್ ಅಂದ್ರೆ?"

"ಗಂಡಿನ ತಂದೆ ಅಥವಾ ತಾಯಿ, ಹೆಣ್ಣಿನ ತಂದೆ ಅಥವಾ ತಾಯಿ ಸಾವಿಗೂ ಕೂಡ ಸರಳ ಮದುವೆ ಸೃಷ್ಟಿ ಮಾಡೋ ಶಕ್ತಿ ಇದೆ. ಎಲ್ಲಕ್ಕಿಂತ ಮೊದಲು ಆದ್ದೂರಿ ಮದುವೆಗೆ ಹೋಗದ ಸಿದ್ದರಾಮಯ್ಯ ಬದಬೇಕು."

ಥೂತ್ತೇರಿ!!! ●

ರಾಯಚೂರು : ಔಷಧವನ್ನು ಕಸವಾಗಿಸಿದ ಅಧಿಕಾರಿಗಳು


ಯು.ಟಿ.ಖಾದರ್

ಪ್ರತಿವರ್ಷ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಿಕ್ಕೆಂದು ಸಾವಿರಾರು ಕೋಟಿಯ ಔಷಧಿ ಖರೀದಿಸುತ್ತವೆ. ಆದರೆ ಹೀಗೆ ಖರೀದಿಸಿದ ಔಷಧಿ ಪ್ರಜೆಗಳಿಗೆ ತಲುಪುತ್ತಿದೆಯೆ ಎಂಬುದು ಪ್ರಶ್ನಾರ್ಥಕ ವಿಷಯ. ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಯೆನಿಸಿಕೊಂಡಿದ್ದ ರಾಯಚೂರು ಜಿಲ್ಲೆಯಲ್ಲಂತೂ ಈ ಔಷಧಿಗಳು ಬಡರೋಗಿಗಳಿಗೆ ತಲುಪದೇ ಜಿಲ್ಲಾ ಉಗ್ರಾಣದಲ್ಲೇ ಧೂಳು ಹಿಡಿದು ಎಕ್ಸ್‌ಪೈರಿ ಆಗಿಹೋಗಿರುವ ಪ್ರಕರಣ ಇದೀಗ ಬೆಳಕಿಗೆ ಬಂದಿದೆ.

ಆರೋಗ್ಯ ಇಲಾಖೆಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಆಸ್ಪತ್ರೆ, ತಾಲೂಕು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪ ಕೇಂದ್ರಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಕಾಲಕಾಲಕ್ಕೆ ಔಷಧಿ ಸರಬರಾಜು ಆಗುತ್ತದೆ. ಹೀಗೆ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಗೆ ಬಂದ ಔಷಧಿ ಹಾಗೂ ಇನ್ನಿತರ ಉಪಕರಣಗಳನ್ನು ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಅಥವಾ ಹೆಚ್ಚೆಂದರೆ ಎರಡು ತಿಂಗಳ ಒಳಗಾಗಿ ಸಂಬಂಧಿತ ಎಲ್ಲಾ ಆರೋಗ್ಯ ಕೇಂದ್ರಗಳಿಗೆ ಕಳುಹಿಸಿಕೊಡಬೇಕಾದ್ದು ಜಿಲ್ಲಾ ಆರೋಗ್ಯಾಧಿ ಕಾರಿಯ ಆದ್ಯ ಕರ್ತವ್ಯಗಳಲ್ಲಿ ಒಂದು. ಸಾಮಾನ್ಯ ವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಔಷಧಿ ಸರಬರಾಜಿಗಾಗಿ ಭಾರೀ ಬೇಡಿಕೆಯೇ ಇರುತ್ತದೆ. ತಮಗೆ ಬೇಕಾದ ಔಷಧಿಗಳಿಗಾಗಿ ಇಂಡೆಂಟ್ ಹಾಕಿ, ಪದೇ ಪದೇ ರಿಮೈಂಡರ್ ಕಳಿಸಿದರೂ ಸರ್ಕಾರ ಔಷಧ ಸರಬರಾಜು ಮಾಡುತ್ತಿಲ್ಲ ಎಂದು ಸ್ಥಳೀಯ ಮಟ್ಟದಲ್ಲಿ ದೂರುಗಳು ಕೇಳಿಬರುವುದು ಸರ್ವೇಸಾಮಾನ್ಯ. ಆದರೆ ರಾಯಚೂರು ಜಿಲ್ಲೆಯ ಪರಿಸ್ಥಿತಿ ಅದಕ್ಕಿಂತ ತೀರಾ ಭಿನ್ನ.

ಒಂದು ಅಂದಾಜಿನ ಪ್ರಕಾರ ಸುಮಾರು 75 ಲಕ್ಷದಿಂದ ಒಂದು ಕೋಟಿ ರೂಪಾಯಿ ಮೊತ್ತದವರೆಗಿನ ಔಷಧಿಗಳು ವಿತರಣೆಯಾಗದೆ ಗೋದಾಮಿನಲ್ಲೇ ತ್ಯಾಜ್ಯ ವಸ್ತುಗಳಾಗಿ ಮಾರ್ಪಟ್ಟವೆ!! ಅದರಲ್ಲಿ ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಮಲೇರಿಯಾ, ಅಸ್ತಮಾ, ಕ್ಷಯ ಮುಂತಾದ ರೋಗಗಳ ಔಷಧಿಗಳಿಂದ ಹಿಡಿದು ಮಾನಸಿಕ ಖಿನ್ನತೆ, ನರಗಳ ದೌರ್ಬಲ್ಯದಂಥಾ ಕಾಯಿಲೆಗಳವರೆಗೆ ಹತ್ತಾರು ಕಾಯಿಲೆಗಳಿಗೆ ಸಂಬಂಧಿಸಿದ ಔಷಧಿಗಳೂ ಒಳಗೊಂಡಿವೆ. ವಿಷಸೇವನೆಗೆ ಕೊಡುವ ಔಷಧಿಗಳು, ರೋಗ ನಿರೋಧಕ ಶಕ್ತಿ ವೃದ್ಧಿಸುವ ಇಂಜಕ್ಷನ್ ಹಾಗೂ ಮಾತ್ರೆಗಳು ಮಾತ್ರವಲ್ಲದೆ ಮೂರ್ಛೆ ರೋಗ, ಹೃದಯಾಘಾತದಂಥ ತುರ್ತು ಸಂದರ್ಭದಲ್ಲಿ ಬಳಸುವ ಔಷಧಿಗಳೂ ಇವೆ. ಅಲ್ಲದೆ ಮೂಳೆ ಮುರಿತ ಚಿಕಿತ್ಸೆಗೆ ಸಂಬಂಧಿಸಿದ ಪ್ಲಾಸ್ಟರ್ ಆಫ್ ಪ್ಯಾರಿಸ್, ಇಂಜಕ್ಷನ್ ಕೊಡುವ ಸಿರಿಂಜುಗಳು, ಗ್ಲೂಕೋಸ್ ಹಾಕುವ ಡ್ರಿಪ್ ಸೆಟ್‌ಗಳೂ ಮುಂತಾದ ನಾನಾ ರೀತಿಯ ವೈದ್ಯಕೀಯ ಉಪಕರಣಗಳೂ ಒಳಗೊಂಡಂತೆ ಒಟ್ಟು 76 ಐಟಂಗಳು ತ್ಯಾಜ್ಯಗಳಾಗಿ ಮಾರ್ಪಟ್ಟವೆ!

ಬರಪೀಡಿತ ರಾಯಚೂರು ಜಿಲ್ಲೆಯಲ್ಲಿ ಮತ್ತೆಲ್ಲ ಸಮಸ್ಯೆಗಳಿಗಿಂತಲೂ ಆರೋಗ್ಯದ ಸಮಸ್ಯೆ ಅತ್ಯಂತ ತೀವ್ರವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಪೌಷ್ಟಿಕಾಂಶದ ಕೊರತೆಯಿಂದ 6 ವರ್ಷ ವಯಸ್ಸಿನೊಳಗಿನ ಮಕ್ಕಳು ಸಾವಿರಾರು ಸಂಖ್ಯೆಯಲ್ಲಿ ಸಾವನ್ನಪ್ಪಿದ್ದು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿ ಮಾಡಿತ್ತು, 2010 ಮತ್ತು 2011 ಎರಡೇ ವರ್ಷಗಳಲ್ಲಿ 2,600 ಮಕ್ಕಳು ಪೌಷ್ಟಿಕಾಂಶದ ಕೊರತೆಯಿಂದ ಸಾವನ್ನಪ್ಪಿವೆಯೆಂದು, 4600 ಮಕ್ಕಳು ಸಾವಿನಂಚಿನಲ್ಲಿವೆಯೆಂದು ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಂಕಿಅಂಶಗಳಿಂದ ಹೊರಬಿದ್ದು ಇಡೀ ನಾಡಿಗೆ ನಾಡೇ ಬೆಚ್ಚಿಬಿದ್ದಿತ್ತು.

ಸಾರ್ವಜನಿಕರ ಹಾಗೂ/ ಮಾಧ್ಯಮಗಳ ಒತ್ತಡದ ಪರಿಣಾಮವಾಗಿ ಸರ್ಕಾರ ಕೆಲವು ಕ್ರಮಕ್ಕೆ ಮುಂದಾಯಿತು. ನಾನಾ ತನಿಖೆಗಳು- ಅಧ್ಯಯನಗಳು ನಡೆದವು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಮಾಧ್ಯಮಗಳು ರಾಯಚೂರಿನಲ್ಲಿ 6 ವರ್ಷ ಒಳಗಿನ ಮಕ್ಕಳ ಮತ್ತು ಹೆರಿಗೆ ಸಮಯದಲ್ಲಿ ತಾಯಂದಿರ ಸಾವುಗಳ ಪ್ರಕರಣವನ್ನು ಹಲವು ಬಾರಿ ಪ್ರಚುರಪಡಿಸಿದವು. ವಿಶ್ವಸಂಸ್ಥೆ ಕೂಡ ಈ ಸುದ್ದಿಯನ್ನು ಗಮನಿಸುವಂತಾಯ್ತು, ಕೇಂದ್ರ ಸರ್ಕಾರವೂ ನೆರವಿಗೆ ಧಾವಿಸಿತ್ತು, ಆದರೆ ರಾಯಚೂರು ಜಿಲ್ಲಾ ಕೇಂದ್ರದಲ್ಲಿ ದಾಸ್ತಾನಾಗಿದ್ದ ಔಷಧಿಗಳನ್ನು ಸ್ಥಳೀಯ ಆರೋಗ್ಯ ಕೇಂದ್ರಗಳಿಗೆ ಕಳಿಸುವ ಕೆಲಸವನ್ನು ಮಾತ್ರ ಅಲ್ಲಿನ ಆರೋಗ್ಯಾಧಿಕಾರಿಗಳು ಮಾಡಲೇ ಇಲ್ಲ. ಪೌಷ್ಟಿಕಾಂಶ ಕೊರತೆ, ವಿಟಮಿನ್ ಕೊರತೆಯಿಂದ ಸಾವಿರಾರು ಮಕ್ಕಳು ಪ್ರತಿನಿತ್ಯ ಸಾಯುತ್ತಿದ್ದರೆ, ಇತ್ತ ದಾಸ್ತಾನಿನಲ್ಲಿ ವಿಟಮಿನ್ ಮಾತ್ರೆಗಳು, ಪೌಷ್ಟಿಕ ಆಹಾರ ಪಾಕೆಟ್‌ಗಳು, ಧೂಳು ಹಿಡಿಯುತ್ತಾ ಕೊಳೆಯುತ್ತಿದ್ದವು. ಆರೋಗ್ಯಾಧಿಕಾರಿ ಹುದ್ದೆಯಲ್ಲಿ ಕುಳಿತಿದ್ದ ಅಧಿಕಾರಿಗಳಿಗೆ



ಈ ಔಷಧಿಯನ್ನು ಆ ಮಕ್ಕಳಿಗೆ ತಲುಪಿಸಬೇಕೆಂದು ಅನಿಸಲೇ ಇಲ್ಲ, ಹೆರಿಗೆ ಸಮಯದಲ್ಲಿ ತೀವ್ರ ರಕ್ತ ಸ್ರಾವದಿಂದ ತಾಯಂದಿರು ಸಾವನ್ನಪ್ಪುತ್ತಿದ್ದರೂ ರಕ್ತಸ್ರಾವ ತಡೆಯುವ ಔಷಧಿಗಳನ್ನು ಈ ಅಧಿಕಾರಿಗಳು ಕುಂಡಿ ಕೆಳಗೆ ಹಾಕಿ ಕುಳಿತುಬಿಟ್ಟಿದ್ದರು, ಇವರನ್ನು ನರರೂಪ ರಾಕ್ಷಸ ಎಂದು ಕರೆಯುವುದನ್ನು ಬಿಟ್ಟರೆ ಇವರಿಗೆ ಸರಿಹೊಂದುವಂಥ ಬೇರೆ ಯಾವುದಾದರೂ ಪರ್ಯಾಯ ಪದವಿದೆಯೆ?


ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಆರೋಗ್ಯ ಸಚಿವ ಯು.ಟಿ.ಖಾದರ್ ಅವರನ್ನು ಫೋನ್ ಮೂಲಕ ಸಂಪರ್ಕಿಸಿದಾಗ ಮತ್ತೊಂದು ರೀತಿಯ ಆಶ್ಚರ್ಯ ಕಾದಿತ್ತು. ಆರೋಗ್ಯ ಸಚಿವರಿಗೆ ಔಷಧಿಗಳು ಹೀಗೆ ಗೋದಾಮಿನಲ್ಲೇ ಕೊಳೆತು ಹಾಳಾಗಿದ್ದರ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ! ಪ್ರಕರಣದ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ ಸಚಿವರು ಈ ಬಗ್ಗೆ ವಿಚಾರಣೆ ನಡೆಸುವ ಮಾಮೂಲಿ ಆಶ್ವಾಸನೆ ಕೊಟ್ಟರು.

ಇನ್ನು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಡಾಕ್ಟರ್ ಶರಣ್ ಪ್ರಕಾಶ್ ಪಾಟೀಲ್‌ರನ್ನು ಸಂಪರ್ಕಿಸಿ ಈ ಬಗ್ಗೆ ಪ್ರಶ್ನಿಸಿದಾಗ "ಇಲ್ಲಿಗೆ ಒಂದು ವಾರದ ಹಿಂದೆ ರಿವ್ಯೂ ಮೀಟಿಂಗ್‌ನಲ್ಲಿ ಈ ಪ್ರಕರಣ ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಇಲಾಖಾ ತನಿಖೆಗೆ ಸೂಚಿಸಿದ್ದೇನೆ. ವರದಿ ಬಂದನಂತರ ಇಂಥಾ ನಿರ್ಲಕ್ಷ್ಯಕ್ಕೆ ಯಾರು ಜವಾಬ್ದಾರಿ ಎಂಬುದು ಗೊತ್ತಾಗುತ್ತೆ, ನಂತರ ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ" ಎಂದು ನಿರ್ಭಾವುಕವಾಗಿ ನುಡಿಯುತ್ತಾರೆ. ಸ್ವತಃ ವೈದ್ಯರಾಗಿರುವ ಇವರು ವೈದ್ಯಕೀಯ ಶಿಕ್ಷಣ ಸಚಿವರೂ ಹೌದು. ಒಂದು ವಾರದ ಹಿಂದೆ ಇಂಥಾ ಘನಘೋರ ಸಂಗತಿ ಗಮನಕ್ಕೆ ಬಂದರೂ ಅದನ್ನು ಸಂಬಂಧಿತ ಆರೋಗ್ಯ ಇಲಾಖೆಯ ಮಂತ್ರಿಗಳಿಗೆ ತಿಳಿಸುವುದಿಲ್ಲವೆಂದರೆ ಈ ಇಲಾಖೆಗಳ ನಡುವೆ ಹಾಗೂ ಜಿಲ್ಲಾ ಉಸ್ತುವಾರಿ ಮತ್ತು ಇಲಾಖಾ ಮಂತ್ರಿಗಳ ನಡುವೆ ಎಂಥಾ ಸಮನ್ವಯ ಸಂಬಂಧವಿರಬಹುದು ಎಂಬುದನ್ನು ಯಾರಾದರೂ ಊಹಿಸಬಹುದು.

ಈ ಸಂದರ್ಭದಲ್ಲಿ ಕಳೆದ ಆಗಸ್ಟ್ 14-15ರ ಮಧ್ಯ ರಾತ್ರಿ ನಡೆದ ಒಂದು ಘಟನೆಯನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. ಆ ದಿನ ರಾತ್ರಿ ಜನಾರೋಗ್ಯ ಆಂದೋಲನ ಕರ್ನಾಟಕ- ಸಂಘಟನೆ ಹಾಗೂ ಇನ್ನಿತರ ಸಂಘಟನೆಗಳ ನೂರಾರು ಕಾರ್ಯಕರ್ತರು ಜಿಲ್ಲೆಯ ಆರೋಗ್ಯ ಕೇಂದ್ರಗಳ ಪರಿಸ್ಥಿತಿ ಸುಧಾರಿಸುವಂತೆ ಒತ್ತಾಯಿಸಿ ರಾತ್ರಿಯಿಡೀ ಪ್ರತಿಭಟನೆ ನಡೆಸಿದ್ದರು. ರಾತ್ರಿಯಿಡೀ ಮಳೆ ಸುರಿಯುತ್ತಿದ್ದರೂ ಲೆಕ್ಕಿಸದೆ ಪ್ರತಿಭಟನೆ ನಡೆದದ್ದು ಅಂದಿನ ವಿಶೇಷ.

ಎಂದಿನಂತೆ ಮರುದಿನ ಬೆಳಗ್ಗೆ ಜಿಲ್ಲಾ ಉಸ್ತುವಾರಿ ಹಾಗೂ ವೈದ್ಯಕೀಯ ಸಚಿವ ಶರಣ್ ಪ್ರಕಾಶ್ ಪಾಟೀಲರು ಪ್ರತಿಭಟನಾಕಾರರನ್ನು ಭೇಟಿಯಾಗಿ ಆದ್ಯತೆಯ ಮೇರೆಗೆ ಸಮಸ್ಯೆ ಬಗೆಹರಿಸುವುದಾಗಿ ಹೇಳಿದ್ದರು. ಆದರೆ ಇಂದಿನ ವಸ್ತುಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆ ಕಂಡುಬಂದಿಲ್ಲ.

ಅಂದಿನ ಪ್ರಮುಖ ಬೇಡಿಕೆಗಳೆಂದರೆ ಖಾಲಿಯಿರುವ ಡಾಕ್ಟರ್ ಹುದ್ದೆಗಳ ನೇಮಕಾತಿ, ಮಹಿಳಾ ವೈದ್ಯೆಯರ ಹಾಗೂ ದಾದಿಯರ ನೇಮಕಾತಿ, ಹೆರಿಗೆಯ ಅವಧಿಯಲ್ಲಿ ತಾಯಿ ಮತ್ತು ಮಕ್ಕಳ ಸಾವುಗಳ ನಿಯಂತ್ರಣಕ್ಕೆ ಕ್ರಮ, ಔಷಧಗಳು ಹಾಗೂ ಉಪಕರಣಗಳ ಸರಬರಾಜು ಮುಂತಾದವು. ಜೊತೆಗೆ ರಾಯಚೂರಿನಲ್ಲಿ ಹದ್ದು ಮೀರಿರುವ ಖಾಸಗಿ ಆಸ್ಪತ್ರೆ ಮತ್ತು ಸರ್ಕಾರಿ ವೈದ್ಯರ ನಡುವಿನ ನೆಕ್ಸಸ್ ಅನ್ನು ತಹಬಂದಿಗೆ ತರಬೇಕೆಂಬುದು ಪ್ರಮುಖ ಬೇಡಿಕೆಯಾಗಿತ್ತು, ರಾಯಚೂರಿನ ಸರ್ಕಾರಿ ಆಸ್ಪತ್ರೆಗಳ ಅಧ್ವಾನದ ಸ್ಥಿತಿಗೆ ಅಲ್ಲಿನ ಖಾಸಗಿ ಆಸ್ಪತ್ರೆಗಳು ಹಾಗೂ ಖಾಸಗಿ ವೈದ್ಯರ ಲಾಬಿಯೇ ಪ್ರಮುಖ ಕಾರಣ ಎಂದು ಇಂದಿಗೂ ಹಲವು ಸಂಘ-ಸಂಸ್ಥೆಗಳು ಆರೋಪಿಸುತ್ತಿವೆ. ಈ ಜಿಲ್ಲೆಯ ಸರ್ಕಾರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿದ್ದ ಒಪೆಕ್ ಆಸ್ಪತ್ರೆಯನ್ನು ಮುಚ್ಚಿಸುವಲ್ಲಿಯೂ ಇದೇ ಲಾಬಿ ಕೆಲಸ ಮಾಡಿತ್ತು, ಈಗಲೂ ಒಪೆಕ್ ಅನ್ನು ಮರುಚಾಲನೆ ಮಾಡಿಸದೆ ತಡೆ ಹಿಡಿಯುತ್ತಿರುವ ಶಕ್ತಿಗಳೂ


ಶರಣಪ್ರಕಾಶ್ ಪಾಟೀಲ್

ಕೂಡ ಇದೇ ಖಾಸಗಿ ಲಾಬಿಯೇ!

ಈ ಹಿಂದೆ ರಾಜ್ಯ ಹೈಕೋರ್ಟ್‌ನಲ್ಲಿ ಪಿಐಎಲ್ ದಾಖಲಾದ ಹಿನ್ನೆಲೆಯಲ್ಲಿ ಹೈಕೋರ್ಟ್‌ನಿಂದ ನೇಮಕಗೊಂಡ ಜಸ್ಟೀಸ್ ಎನ್.ಕೆ. ಪಾಟೀಲ್ ಸಮಿತಿ ಕೂಡ ಹಲವಾರು ಶಿಫಾರಸ್ಸುಗಳನ್ನು ಮಾಡಿತ್ತು, ಎಂ.ಎಸ್.ರಾಮಯ್ಯ ಆಸ್ಪತ್ರೆಯ ಹಿರಿಯ ವೈದ್ಯ ಡಾ.ಬಿ.ಎಸ್. ನಂದಕುಮಾರ್ ನೇತೃತ್ವದ ಸಮಿತಿಯೂ ಸಾಕಷ್ಟು ಶಿಫಾರಸ್ಸುಗಳನ್ನು ಮಾಡಿತ್ತು, ಆದರೆ ಬರಗಾಲ ಪೀಡಿತ ರಾಯಚೂರಿನಲ್ಲಿ ಗಟ್ಟಿಯಾಗಿ ತಳವೂರಿರುವ ಹೆಗ್ಗಣಗಳನ್ನು ತಹಬಂದಿಗೆ ತರುವುದು ಇಂದಿಗೂ ಕನಸಾಗಿಯೇ ಉಳಿದಿದೆ.

ಇದೆಲ್ಲದರ ನಡುವೆ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂವಿಧಾನದ 371(ಜೆ) ಯಡಿಯಲ್ಲಿ ವಿಶೇಷ ಸ್ಥಾನಮಾನ ಕೊಟ್ಟು ಕೇಂದ್ರ ಸರ್ಕಾರ ಆದೇಶ ಹೊರಡಿಸಿದ್ದೂ ಆಯ್ತು, ವಿಶೇಷ ಸ್ಥಾನಮಾನ ಸಿಕ್ಕ ಸಂಭ್ರಮದಲ್ಲಿ ನಾನಾ ರಾಜಕಾರಣಿಗಳು-ಪುಢಾರಿಗಳು ಸಿಹಿ ಹಂಚಿ ಸಂಭ್ರಮಿಸಿದ್ದೂ ಆಯ್ತು, ಆದರೆ ಪರಿಸ್ಥಿತಿಯಲ್ಲಿ ಗಮನಾರ್ಹ ಬದಲಾವಣೆ ಬರುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ.

ಮಾಧ್ಯಮಗಳು ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳು ಕ್ರಿಯಾಶೀಲವಾಗಿರುವ ಇಂದಿನ ಕಾಲದಲ್ಲೂ ಇಂಥಾ ಪ್ರಕರಣ ನಡೆದದ್ದು ರಾಯಚೂರು ಜಿಲ್ಲೆಯ ಆಡಳಿತದ ವೈಖರಿಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಮುಂದೆ ತಂದಿದೆ. ಅದರಲ್ಲೂ ಈ ಔಷಧ ದಾಸ್ತಾನು ರಾಯಚೂರು ಜಿಲ್ಲಾ ಕೇಂದ್ರದ ಆರೋಗ್ಯಾಧಿಕಾರಿ ಕಚೇರಿಯ ದಾಸ್ತಾನಿನಲ್ಲಿ ಕಳೆದ 5-6 ವರ್ಷಗಳಿಂದ ಕೊಳೆತು ಬಿದ್ದಿರುವುದನ್ನು ಕಂಡರೆ ಇಲ್ಲಿನ ಆಡಳಿತ ಇನ್ನೆಷ್ಟು ರಿಪೇರಿಯಾಗಲಾರದ ಹಂತ ತಲುಪಿದೆ ಎಂಬುದನ್ನು ನಾವು ಊಹಿಸಬಹುದು.

ಇನ್ನೂ ಆತಂಕಕಾರಿ ಸಂಗತಿಯೆಂದರೆ ಇಂಥಾ ಅಮಾನುಷ ಪ್ರಕರಣವನ್ನು ಹೊರಗೆ ತಂದ ಹಾ[...] ವೈದ್ಯಾಧಿಕಾರಿ ಡಾ. ನಾರಾಯಣ್ ವಿರುದ್ಧ ರಾಯಚೂರಿನ[...] ನಾನಾ ಮಸಲತ್ತುಗಳು ತಲೆ ಎತ್ತಿರುವುದು. "ಇದು[...] ರಾಯಚೂರು ಜಿಲ್ಲೆಯಲ್ಲಿ ಮಾಮೂಲು; ಇದನ್ನೇನು ದೊ[...] ವಿಷಯವೆಂಬಂತೆ ಪ್ರಚಾರಕ್ಕೆ ತರುತ್ತಿದ್ದೀಯೆ" ಎಂದು[...] ಅವರನ್ನು ಮೂದಲಿಸಿದ ಅಧಿಕಾರಿಗಳಿಗೆ ಲೆಕ್ಕವಿಲ್ಲ. ಅಷ್ಟು ಮಾತ್ರವಲ್ಲ; ಹೊರಗಿನಿಂದ ಬಂದಿರುವ ಡಾ. ನಾರಾಯಣ್ ಇದೇ ಹಾದಿಯಲ್ಲಿ ಮುಂದುವರೆದರೆ ಇದರ ಪರಿಣಾಮ[...] ನೆಟ್ಟಗಿರುವುದಿಲ್ಲ ಎಂದು ಜೀವ ಬೆದರಿಕೆಯೊಡ್ಡುವ ಮಟ್ಟ[...] ಇಲ್ಲಿನ ದುಷ್ಟಕೂಟ ಬೆಳೆದಿದೆಯೆಂದರೆ, ಈ ದುಷ್ಟಕೂಟವ[...] ಕೂಡಲೆ ಆದ್ಯತೆಯ ಮೇರೆಗೆ ಮಟ್ಟಹಾಕದೆ ಹೋದ[...] ಮುಂದಿನ ದಿನಗಳಲ್ಲಿ ಅನಾಹುತ ಕಟ್ಟಿಟ್ಟ ಬುತ್ತಿ.

ಮುಖ್ಯಮಂತ್ರಿ ಸಿದ್ದರಾಮಯ್ಯನವರಾದರೂ ಇತ್ತ ತ[...] ಹಾಕಿ ನತದೃಷ್ಟ ರಾಯಚೂರು ಜನರತ್ತ ಗಮನಹರಿಸುವ[...]

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಯಾರು ಹೊಣೆಗಾರರು ?

ಹೀಗೆ ಔಷಧಿಗಳನ್ನು ತ್ಯಾಜ್ಯವಾಗಿಸಿದವರು ಯಾರು ಎಂಬುದು ಎಲ್ಲರಿಗೂ ಗೊತ್ತಿದ್ದರೂ ಈ ಬಗ್ಗೆ ಬಹಿರಂಗವಾಗಿ ಬಾಯಿಬಿಚ್ಚಲು ಯಾರೂ ಸಿದ್ಧರಿಲ್ಲ. ಹೆಸರು ಹೇಳಲು ಇಚ್ಛಿಸದ ಇಲಾಖೆಯ ಗುಮಾಸ್ತರೊಬ್ಬರು ಹೇಳುವ ಪ್ರಕಾರ, ಸ್ಥಳೀಯ ಆರೋಗ್ಯ ಕೇಂದ್ರಗಳಿಂದ ಔಷಧಿ ಪಟ್ಟಿ ತೆಗೆದುಕೊಂಡು ವೈದ್ಯರು ಬಂದರೆ ಇಲ್ಲಿ ಅಧಿಕಾರಿಗಳು "ಮೊದಲು ಹಣ(ಲಂಚ) ಕೊಟ್ಟು ಔಷಧಿ ತೆಗೆದುಕೊಂಡು ಹೋಗು; ಇಲ್ಲದಿದ್ದರೆ ಔಷಧಿ ಇಲ್ಲೇ ಬಿದ್ದಿರಲಿ" ಎಂದು ಬಹಿರಂಗವಾಗಿಯೇ ಹೇಳುತ್ತಿದ್ದರು ಎಂಬ ಕಠೋರ ಸತ್ಯವನ್ನು ವಿವರಿಸುತ್ತಾರೆ. ಅಂದರೆ ಡಾಕ್ಟರ್‌ಗಳು ಮೊದಲೇ ಹಣ ಪಾವತಿಸಿ ಸರ್ಕಾರಿ ಔಷಧಿ ಪಡೆದು, ಆಸ್ಪತ್ರೆಗಳಿಗೆ ಬರುವ ಬಡಪಾಯಿ ರೋಗಿಗಳಿಂದ ಹಣ ಸುಲಿದು ಲಾಭ ಮಾಡಿಕೊಳ್ಳಬೇಕೆಂಬುದು ಮೇಲಧಿಕಾರಿಗಳ ಅಪೇಕ್ಷೆ ಎಂಬುದು ಸ್ಪಷ್ಟ.

ಈ ಸಮಸ್ಯೆಗೆ ಮತ್ತೊಂದು ಆಯಾಮವೂ ಇದೆ. ಇಲ್ಲಿಗೆ ರವಾನೆಯಾಗುವ ಔಷಧಿಗಳ ಸಿಂಹಪಾಲು ಖಾಸಗಿ ಆಸ್ಪತ್ರೆಗಳಿಗೆ, ಔಷಧ ಅಂಗಡಿಗಳಿಗೆ ಕಾಳಸಂತೆಯಲ್ಲಿ ಪೂರೈಕೆಯಾಗುತ್ತವೆಯಂತೆ. ಒಂದು ವೇಳೆ ಅದ್ಯಾವುದೂ ಸಾಧ್ಯವಾಗದಿದ್ದ ಪಕ್ಷದಲ್ಲಿ, ಔಷಧಿಗಳು ಎಕ್ಸ್‌ಪೈರಿ ಅವಧಿ ಮುಗಿದು ತ್ಯಾಜ್ಯಗಳಾಗಿ ಪರಿವರ್ತನೆಯಾದರೂ ಸರಿಯೇ. ಆದರೆ ನತದೃಷ್ಟ ರೋಗಿಗಳಿಗೆ ಮಾತ್ರ ತಲುಪಬಾರದು ಎಂಬುದು ಇಲ್ಲಿನ ಭ್ರಷ್ಟಾತಿಭ್ರಷ್ಟ ಅಧಿಕಾರಿಗಳ ಖಡಕ್ ನಿರ್ಣಯ!

ಈಗ ತ್ಯಾಜ್ಯವಸ್ತುಗಳಾಗಿ ಪರಿವರ್ತಿತವಾಗಿರುವ ಔಷಧಿಗಳೆಲ್ಲವೂ 2007ರಿಂದ 2012ರ ಅವಧಿಗೆ ಸೇರಿದಂಥವು. ಅಂದಹಾಗೆ ಈ ಅವಧಿಯಲ್ಲಿ ರಾಯಚೂರು ವೈದ್ಯಾಧಿಕಾರಿ ಸ್ಥಾನದಲ್ಲಿ ಆಸೀನರಾಗಿದ್ದ ಅಧಿಕಾರಿಗಳು ಯಾರು ಯಾರು ಎಂಬುದನ್ನು ನೋಡೋಣ.

ಆಗಸ್ಟ್ 2005 - ಏಪ್ರಿಲ್ 2008	ಡಾ. ಹಿರೇಗೌಡ
ಏಪ್ರಿಲ್ 2008 - ಜುಲೈ 2009	ಡಾ.ಸೂರ್ಯವಂಶಿ
ಜುಲೈ 2009 - ಜೂನ್ 2013	ಡಾ. ವೆಂಕಟೇಶನಾಯಕ್
ಜೂನ್ 2013ರಿಂದ ಸುಮಾರು 6 ತಿಂಗಳ ಕಾಲ (ತಾತ್ಕಾಲಿಕ)	ಡಾ. ನಾರಾಯಣಪ್ಪ
ಜನವರಿ 2014ರ ನಂತರ	ಡಾ.ನಾರಾಯಣ್

ಈ ಚಿಕ್ಕದಾದ/ ಚೊಕ್ಕದಾದ ಪಟ್ಟಿಯಲ್ಲಿ ಕ್ರಿಮಿನಲ್ ನಿರ್ಲಕ್ಷ್ಯ ತೋರಿದ ದುಷ್ಟ ಅಧಿಕಾರಿಯನ್ನು ಪತ್ತೆ ಮಾಡುವುದು ಘನತೆವೆತ್ತ ಸರ್ಕಾರಕ್ಕೆ ಭಾರೀ ದೊಡ್ಡ ಸವಾಲು ಎಂದು ನಿಮಗೆ ಅನಿಸುತ್ತಿದೆಯೆ?


ಈ ಹಗರಣ ಹೊರಬಿದ್ದಿದ್ದು ಹೇಗೆ?

ಇಲ್ಲಿಗೆ ಸುಮಾರು ನಾಲ್ಕೈದು ತಿಂಗಳ ಹಿಂದೆ ರಾಯಚೂರು ಜಿಲ್ಲಾ ಆರೋಗ್ಯಾಧಿಕಾರಿ(ಡಿಎಚ್‌ಒ)ಯಾ[...] ಡಾ.ನಾರಾಯಣ್ ಎಂಬುವವರು ಇನ್‌ಚಾರ್ಜ್ ತೆಗೆದುಕೊಂಡಿದ್ದಾರೆ. ಇದಕ್ಕೂ ಮುಂಚೆ ಅವರು ಇಲಾಖೆ[...] ಡೆಪ್ಯೂಟಿ ಡೈರೆಕ್ಟರ್ ಹುದ್ದೆಯಲ್ಲಿದ್ದವರು. ಸೇವಾ ನಿಯಮಾವಳಿಯಂತೆ ಅಧಿಕಾರಿ ಇನ್‌ಚಾರ್ಜ್ ತೆಗೆದುಕೊಂಡ[...] ತನ್ನ ಅಧಿಕಾರ ವ್ಯಾಪ್ತಿಯಡಿ ಬರುವ ಎಲ್ಲಾ ದಾಸ್ತಾನುಗಳನ್ನು ಪರಿಶೀಲಿಸಿ, ಅವುಗಳ ಜವಾಬ್ದಾರಿ ಹೊರಬೇ[...] ಅದರಂತೆ ಡಾ. ನಾರಾಯಣ್ ಅವರು ತಮ್ಮ ಕಚೇರಿಯಲ್ಲಿರುವ ಎಲ್ಲಾ ಔಷಧಿಗಳ ದಾಸ್ತಾನುಗಳ ಲೆಕ್ಕ ತೆಗೆದುಕೊಳ್ಳು[...] ಸಂದರ್ಭದಲ್ಲಿ ಅಪಾರ ಪ್ರಮಾಣದ ಈ ಔಷಧಿ ತ್ಯಾಜ್ಯ ಅವರ ಗಮನಕ್ಕೆ ಬಂದಿದೆ. ಕೂಡಲೇ ಇಂಥಾ ಘೋ[...] ಕೃತ್ಯವನ್ನು ಅವರು ಇಲಾಖೆಯ ಮೇಲಧಿಕಾರಿಗಳಿಗೆ ಹಾಗೂ ಜಿಲ್ಲಾ ಸಚಿವರ ಗಮನಕ್ಕೆ ತಂದಿದ್ದಾರೆ. ಸಚಿ[...] ಅಣತಿಯಂತೆ ಪ್ರಾಥಮಿಕ ವರದಿಯನ್ನೂ ಸಲ್ಲಿಸಿದ್ದಾರೆ.

ಆದರೆ ಅಲ್ಲಿಂದಾಚೆಗೆ ಮತ್ತೇನೂ ನಡೆದಿಲ್ಲ ಎಂಬುದು ಬಹಳ ನಿರಾಶೆಯ ಸಂಗತಿ ಮಾತ್ರವಲ್ಲ; ಈ ಸರ್ಕಾ[...] ನಾಚಿಕೆಗೇಡಿನ ಸಂಗತಿಯೂ ಹೌದು. ಹೀಗೆ ಬಡಜನರಿಗೆ ಸೇರಬೇಕಾದ ಔಷಧಿಯೇನೂ ಪುಕ್ಕಟೆಯಾಗಿ ಎಲ್ಲಿಂದಲೋ ಬಂದದ್ದಲ್ಲ; ಬದಲಿಗೆ ಔಷಧ ತಯಾರಿಕಾ ಕಂಪನಿಗಳಿಗೆ ಕೋಟ್ಯಂತರ ಹಣ ಸುರಿದು ಸರ್ಕಾರ ಕೊಂಡುಕೊ[...] ಔಷಧಗಳಿವು. ಇದಕ್ಕೆ ವೆಚ್ಚವಾಗಿದ್ದು ತೆರಿಗೆದಾರರ ಹಣ. ಆದ್ದರಿಂದ ಸರ್ಕಾರ ಕಾಲಹರಣ ಮಾಡಿ, ವಿಷ[...] ಮರೆತುಹೋಗುವಂತೆ ಮಾಡುವ ನೀತಿಯನ್ನು ಅನುಸರಿಸುವ ಬದಲು ಕೂಡಲೇ ತಪ್ಪಿತಸ್ಥ ಅಧಿಕಾರಿಗಳ ಮೇ[...] ಕ್ರಮ ಕೈಗೊಂಡು ಉಳಿದ ಭ್ರಷ್ಟರಿಗೂ ಸ್ಪಷ್ಟ ಎಚ್ಚರಿಕೆ ಕೊಡಲಿ ಎಂಬುದು ಇಲ್ಲಿನ ಜನರ ನಿರೀಕ್ಷೆ.

ಹೊಳಲ್ಕೆರೆ: ದಲಿತನ ಸಾವಿಗೆ ಬೆಲೆ ಇಲ್ಲವೇ?





ಮಾಜ ಕಲ್ಯಾಣ ಸಚಿವ ಎಚ್.ಆಂಜನೇಯರ ಸ್ವಕ್ಷೇತ್ರ ಳಲ್ಕೆರೆಯಿಂದ ಕೂಗಳತೆ ದೂರದಲ್ಲಿರೋ ಗೊಂಡನಹಳ್ಳಿ ಅಲಿಯಾಸ್ ಬಂಜ್ಗೆನಳ್ಳಿಯಲ್ಲಿ ನೊಬ್ಬನ ದಾರುಣ ಹತ್ಯೆ ನಡೆದಿದೆ. ಹೆಣದ ಚಹರೆಯೇ ಅದೊಂದು ಮರ್ಡರ್ ಎನ್ನುವುದನ್ನು ಹೇಳುವಂತಿದ್ದರೂ ಕೊಲೆಗಡುಕ ನೆಂಟನನ್ನು ರಕ್ಷಿಸಲು ಎಸ್ಪಿ ಕವಳಪ್ಪ ಇಡೀ ಪ್ರಕರಣಕ್ಕೆ ಕರೆಂಟ್ ಶಾಕ್ ುವ ಹುನ್ನಾರದಲ್ಲಿದ್ದಾನೆ. ಅಂದರೆ ಆ ವ್ಯಕ್ತಿ ಕರೆಂಟ್ ಡೆದು ಸತ್ತಿದ್ದಾನೆ ಅಂತ ಷರಾ ಬರೆದು ಕೇಸನ್ನೇ ಾಸ್ ಮಾಡುವ ಆತುರದಲ್ಲಿ ಪೊಲೀಸರಿದ್ದಾರೆ.

ಕೊಲೆಯಾದವನ ಹೆಸರು ರಾಮಪ್ಪ. ಶೋಷಿತ ದಾಯವಾದ ಪರಿಶಿಷ್ಟ ಪಂಗಡದ ನಾಯಕ ಜನಾಂಗಕ್ಕೆ ವವ. ಲಿಂಗಾಯತರೇ ಹೆಚ್ಚಾಗಿರುವ ಆ ಊರಿನಲ್ಲಿ ರ ಮನೆಗಳು ಅಂತ ಇರೋದೆ ಎರಡು. ಅದರಲ್ಲಿ ಾಮಪ್ಪನದೂ ಒಂದು. ತರಗಾರ ಕಸುಬಿನಲ್ಲೆ ಹಂಡತಿ ು ಮಕ್ಕಳನ್ನು ಸಾಕುತ್ತಿದ್ದ. ಮೇ 14ರ ಬೆಳ್ಳಂಬೆಳಗ್ಗೆ ಪ್ಪನ ಮನೆ ಬಳಿ ಬಂದ ಅದೇ ಊರಿನ ಲಿಂಗಾಯತ ಂಗದ ಸುರೇಶ, ತನ್ನ ದಾಳಿಂಬೆ ತೋಟದ ಮನೆಯ ಿ ಕೆಲಸ ಇದೆಯೆಂದು ಹೇಳಿ ರಾಮಪ್ಪನನ್ನು ತನ್ನ ನಲ್ಲೇ ಕರೆದುಕೊಂಡು ಹೋಗಿದ್ದ. ಅಲ್ಲೇ ಇದ್ದ ಅತ್ತೆ ಮ್ಮನಿಗೆ ವಿಷಯ ತಿಳಿಸಿ ಆಕೆಯ ಮೊಬೈಲ್ ಪಡೆದೇ ಪ್ಪ ಬೈಕನ್ನೇರಿದ್ದ. ಅದೇ ಕೊನೆ, ಮತ್ತೆ ರಾಮಪ್ಪನ ಂತ ಮುಖ ಕಂಡವರಿಲ್ಲ.

ಾಗೆಹೋದ ರಾಮಪ್ಪ ಎರಡು ದಿನವಾದರೂ ಮನೆಗೆ ದ್ದು ಮನೆಯವರಲ್ಲಿ ಆತಂಕವನ್ನುಂಟುಮಾಡಿತ್ತು. ಆತ ಶನ ಜೊತೆ ಹೋಗಿದ್ದನ್ನು ಕಂಡಿದ್ದ ಅತ್ತೆ ಓಬವ್ವ ಟಕ್ಕೇ ಹೋಗಿ ವಿಚಾರಿಸೋಣ ಎಂದುಕೊಂಡು ಅಲ್ಲಿಗೆ ದಾಗ ತೋಟದ ಮನೆಯ ಬಾಗಿಲು ಹಾಕಿತ್ತು. ಟ್ಟಿದಾಗ ಒಳಗಿದ್ದ ಸುರೇಶ ಬಾಗಿಲು ತೆರೆಯುವುದು ಕಿಟಕಿಯಲ್ಲೇ ಇಣುಕಿ ಮಾತಾಡಿಸಿದ್ದಾನೆ. ಅಳಿಯನ ಓಬವ್ವ ವಿಚಾರಿಸಿದಾಗ, ರಾಮಪ್ಪ ಇಲ್ಲೇ ಮಲಗಿಕೊಂಡಿದ್ದಾನೆ ಎಂಬ ಉತ್ತರ ಸುರೇಶನಿಂದ ಬಂದಿತ್ತು. ಕೊಂಚ ಸಮಾಧಾನಗೊಂಡ ಆಕೆ 'ಹೋಗಲಿ ಅವನ ಬಳಿ ನನ್ನ ಮೊಬೈಲ್ ಇದೆ ಅದನ್ನಾದರು ಕೊಡಿ' ಅಂತ ಕೇಳಿದ್ದಾಳೆ. ತಕ್ಷಣವೇ ಆಕೆಯ ಮೊಬೈಲ್ ಕೊಟ್ಟ ಸುರೇಶ ಅವಳನ್ನು ಅಲ್ಲಿಂದ ಸಾಗಹಾಕಿದ್ದ.

ಅಸಲಿಗೆ ಓಬವ್ವ ತೋಟದ ಮನೆಗೆ ಹೋಗುವುದಕ್ಕೂ ಮುನ್ನವೇ ರಾಮಪ್ಪ ಹೆಣವಾಗಿ ಬಿದ್ದಿದ್ದ. ಆ ಹೆಣವನ್ನೇ ತೋರಿಸಿ 'ಮಲಗಿಕೊಂಡಿದ್ದಾನೆ' ಅಂತ ಸುರೇಶ ಕತೆ ಕಟ್ಟಿದ್ದ. ಸುರೇಶನ ಹೊರತಾಗಿ ರಾಮಪ್ಪನನ್ನು ಕೊಲ್ಲುವ ಜರೂರತ್ತಾಗಲಿ, ದ್ವೇಷವಾಗಲಿ ಅಥವಾ ಅವಕಾಶವಾಗಲಿ ಬೇರೆ ಯಾರಿಗೂ ಇರಲಿಲ್ಲ. ಅಷ್ಟಕ್ಕೂ ಸುರೇಶ ಆ ಕೊಲೆ ಮಾಡಲು ಪ್ರಚೋದನೆ ನೀಡಿದ್ದು ರಾಮಪ್ಪನ ಜೇಬಿನಲ್ಲಿದ್ದ ಹತ್ತು ಸಾವಿರ ರೂಪಾಯಿ!

ತೋಟದ ಮನೆಗೆ ಹೋಗುವುದಕ್ಕೂ ಮುನ್ನ, ಅಂದರೆ ಮೇ 13ರ ರಾತ್ರಿ ರಾಮಪ್ಪ ತಾನು ಹಾಕಿದ್ದ ಚೀಟಿ ಎತ್ತಿಕೊಂಡು ಹತ್ತು ಸಾವಿರ ತನ್ನ ಬಳಿಯೇ ಇಟ್ಟುಕೊಂಡಿದ್ದ ಇದು ಸುರೇಶನಿಗೆ ತಿಳಿದಿತ್ತು. ಹಾಗಾಗಿಯೇ ಮಾರನೇ ದಿನದ ಬೆಳಗಿನ ಜಾವವೇ ಬಂದು ಅವನನ್ನು ಕೆಲಸದ ನೆಪದಲ್ಲಿ ತೋಟಕ್ಕೆ ಕರೆದೊಯ್ದಿದ್ದ. ಅದೇ ಹಣದ ವಿಚಾರವಾಗಿ ಇಬ್ಬರ ನಡುವೆ ಚಕಮಕಿ ನಡೆದು ಕೊಲೆ ನಡೆದಿರಬಹುದಾದ ಸಂಭವವೇ ಹೆಚ್ಚು. ಅದರ ಹೊರತಾಗಿ ರಾಮಪ್ಪ ಹೆಣವಾಗುವುದಕ್ಕೆ ಮತ್ತಾವ ಮಹತ್ತರ ಕಾರಣಗಳೂ ಇಲ್ಲ.

ಈ ಸುರೇಶ ಮೂಲತಃ ಜೂಜು-ಮೋಜಿನ ಆಸಾಮಿ. ತನ್ನ ತೋಟದ ಮನೆಯನ್ನೇ ಇಸ್ಪೀಟ್ ಅಡ್ಡೆ ಮಾಡಿಕೊಂಡಿದ್ದ ಒಂದಷ್ಟು ಸಾಲಗಳನ್ನೂ ತಲೆಗೆ ಕಟ್ಟಿಕೊಂಡಿದ್ದಾನೆ. ಅಂತವ ರಾಮಪ್ಪನ ಚಡ್ಡಿ ಜೇಬಿನಲ್ಲಿದ್ದ ರೊಕ್ಕದ ಮೇಲೆ ಕಣ್ಣಿಟ್ಟು ಈ ಕೃತ್ಯ ಮಾಡಿರುವುದರಲ್ಲಿ ಹೆಚ್ಚೇನು ಅನುಮಾನವಿಲ್ಲ. ಸೋಜಿಗದ ವಿಷಯವೆಂದರೆ ಹಾಗೆ ತಾನೆ ಕೊಲೆ ಮಾಡಿರಬಹುದಾದ ರಾಮಪ್ಪನ ಹೆಣದ ಜೊತೆಗೇ ಬರೋಬ್ಬರಿ ಮೂರು ದಿನ ತೋಟದ ಮನೆಯಲ್ಲೇ ಕಳೆದಿದ್ದಾನೆ. ವಾಸನೆಗಿಟ್ಟುಕೊಂಡ ನಂತರವೇ 17.05.2014ರಂದು ಪಕ್ಕದ ತನ್ನದ ಇನ್ನೊಂದು ಹೊಲದಲ್ಲಿ ಹೆಣ ಎಸೆದು ಕರೆಂಟ್ ಹೊಡೆದು ಸತ್ತಿದ್ದಾನೆ ಅಂತ ಕಥೆ ಕಟ್ಟಿದ್ದ.

ರಾಮಪ್ಪ ಕೊಲೆಯಾಗಿರುವುದು ತಿಳಿಯುತ್ತಿದ್ದಂತೆಯೇ ಅವನ ಮನೆಯವರು ಸುರೇಶನ ಮೇಲೆ ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಹೋಗಿದ್ದರು. ಅಷ್ಟರಲ್ಲಾಗಲೆ ಸುರೇಶ ತನ್ನ ದೂರದ ಸಂಬಂಧಿ ಡಿವೈಎಸ್ಪಿ ಕವಳಪ್ಪನ ಜೊತೆ ಡೀಲ್ ಕುದುರಿಸಿಕೊಂಡಿದ್ದ. ಹಾಗಾಗಿ ರಾಮಪ್ಪನ ಮನೆಯವರು ಕೊಟ್ಟ ಕಂಪ್ಲೆಂಟನ್ನು ಕಸದಬುಟ್ಟಿಗೆಸೆದ ಪೊಲೀಸರು ಕರೆಂಟ್ ಹೊಡೆದು ರಾಮಪ್ಪ ಸತ್ತಿದ್ದಾನೆ ಅಂತ ದೂರು ಬರೆದುಕೊಂಡಿದ್ದರು!


ರಾಮಪ್ಪನ ಹೆಣ ನೋಡಿದ ಎಂತವರಿಗೇ ಆದರೂ ಹಲವಾರು ಅನುಮಾನಗಳು ಮೂಡುವಂತಿತ್ತು. ಒಂದೊಮ್ಮೆ ಸುರೇಶ ಹೇಳುವಂತೆ ರಾಮಪ್ಪ 14.05.2014ರಂದೇ ಕರೆಂಟ್ ಹೊಡೆದು ಸತ್ತಿದ್ದರೆ ಅವತ್ತೇ ಯಾಕೆ ರಾಮಪ್ಪನ ಕುಟುಂಬದವರಿಗೆ ಸುದ್ದಿಮುಟ್ಟಿಸಲಿಲ್ಲ? ಅತ್ತೆ ಓಬವ್ವ ಬಂದಾಗ ಮಲಗಿದ್ದಾನೆ ಅಂತ ಸುಳ್ಳು ಹೇಳುವ ಅಗತ್ಯವೇನಿತ್ತು? ಕರೆಂಟ್ ಶಾಕ್‌ನಿಂದ ವ್ಯಕ್ತಿ ಮೃತನಾದರೆ ದೇಹ ಸುಟ್ಟು ಕರಕಲಾದಂತೆ ಕಾಣಬೇಕಿತ್ತು. ಆದರೆ ಅಂತಹ ಲಕ್ಷಣಗಳೇನು ಹೆಣದ ಮೇಲಿರಲಿಲ್ಲ. ಬದಲಾಗಿ ಮೂಗು, ಮುಖ, ತೋಳು, ಮೊಣಕಾಲುಗಳ ಮೇಲೆ ತಿವಿದ-ಜಜ್ಜಿದ ಗಾಯಗಳು, ರಕ್ತ ಹರಿದುಹೋದ ಗುರುತು ಸ್ಪಷ್ಟವಾಗಿ ಕಾಣುತ್ತಿದ್ದವು. ವ್ಯಕ್ತಿ ಕರೆಂಟ್ ಹೊಡೆದು ಸತ್ತರೆ ಹೀಗೆ ರಕ್ತ ಹೊರಹೊಮ್ಮುವಂತೆ ಗಾಯಗಳಾದರು ಏಕಾಗುತ್ತವೆ? ಹ್ಞೂಂ..ಹೂ.. ಸುರೇಶ ಹೇಳುತ್ತಿರುವ ಅಥವಾ ಪೊಲೀಸಿನವರು ಕಟ್ಟುತ್ತಿರುವ ಕಥೆ ಈ ಅನುಮಾನಗಳನ್ನು ಕಿಂಚಿತ್ತೂ ಸಮಾಧಾನಪಡಿಸುವಂತಿಲ್ಲ. ಅಚ್ಚರಿಯ ಮತ್ತೊಂದು ಸಂಗತಿಯೆಂದರೆ ರಾಮಪ್ಪನ ಮನೆಯವರು ಮೊದಲು ದೂರು ಕೊಟ್ಟಾಗ ಎಸ್‌ಐ ರಂಗಸ್ವಾಮಿ ಪೂರಕವಾಗೇ ಸ್ಪಂದಿಸಿದ್ದರು. ಕೊಲೆಗಡುಕ ಸುರೇಶನನ್ನು ತಂದು ಜೈಲಿಗೆ ಗದುಮಿದ್ದರು. ಆದರೆ ಒಂದೇ ದಿನಕ್ಕೆ ಅವರ ಆವೇಶವೆಲ್ಲಾ ತಣ್ಣಗಾಗಿ ಹೋಗಿ ತಾವೇ ಬಂಧಿಸಿದ ಸುರೇಶನನ್ನು ಬಿಟ್ಟು ಕಳಿಸಿದ್ದರು. 'ನಾನೇನು ಮಾಡಲಿ ರಾಮಪ್ಪನದು ಮರ್ಡರಂತಾ ಗೊತ್ತಿದ್ದರೂ ಏನೂ ಮಾಡದ ಅಸಹಾಯಕರು. ಕ್ರಮ ಜರುಗಿಸೋಣ ಎಂದರೆ ಮೇಲಿಂದ ಫೋನು ಬರ್ತವೆ' ಅಂತ ಕುಟುಂಬದವರ ಎದುರು ವೈಯಕ್ತಿಕವಾಗಿ ಅಸಹಾಯಕತೆ ತೋಡಿಕೊಂಡದ್ದು ಇಡೀ ಸಂಚಿನ ಹೊಂಚನ್ನು ಬಿಚ್ಚಿಡುತ್ತದೆ.

ಆರೋಪಿ ಸುರೇಶ ಸವರ್ಣೀಯನಾಗಿರೋದು ಮತ್ತು ತನಗೆ ಸಂಬಂಧಿಯಾಗಿರೋದು ಡಿವೈಎಸ್ಪಿ ಕವಳಪ್ಪನ ಎಂಟ್ರಿಗಿರುವ ಮುಖ್ಯ ಕಾರಣ. ಡೀಲಿಂಗ್ ಡಿ.ವೈ.ಎಸ್.ಪಿ ಅಂತಲೇ ಕುಖ್ಯಾತಿ ಹೊಂದಿರುವ ಕವಳಪ್ಪನ ಕೆರಿಯರ್ ರೆಕಾರ್ಡ್ ಇಂತಹ ಬ್ಲಾಕ್‌ಮಾರ್ಕ್‌ಗಳಿಂದಲೇ ತುಂಬಿಹೋಗಿದೆ. ಈತ ದಾವಣಗೆರೆ ಡಿವೈಎಸ್ಪಿಯಾಗಿದ್ದಾಗ ಬೇತೂರಿನ ಗೌಡರ ಮೊಮ್ಮಗ ಸೊಸೆಯನ್ನು ಕತ್ತು ಹಿಸುಕಿ ಕೊಲೆಮಾಡಿ ಚಾನಲ್ಲಿಗೆ ಎಸೆದಾಗಲೂ ಗೌಡರನ್ನು ರಕ್ಷಿಸಿದ್ದು ಇದೇ ಕವಳಪ್ಪ. ಹೊಳಲ್ಕೆರೆ ತಾಲ್ಲೂಕಿನ ಹಿರಿಯೂರು ಗ್ರಾಮದ ಆಕೆಯ ಅಣ್ಣ ಕವಳಪ್ಪನ ಬಳಿ ನ್ಯಾಯಕೊಡಿಸಿ ಎಂದು ವಿನಂತಿಸಿದರೂ ಡೀಲಿಂಗ್ ಕವಳಪ್ಪ ಕ್ಯಾರೆ ಅಂದಿರಲಿಲ್ಲ. ಬೇಸತ್ತ ಹುಡುಗಿಯ ಅಣ್ಣ ಅವತ್ತೆ ರಾತ್ರಿ ಊರಿಗೆ ಬಂದು ದ್ವಾರಬಾಗಿಲಿಗೆ ನೇಣಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ. ಹಾಗೆ ಸತ್ತವನ ಕೈಲಿ ಡಿ.ವೈ.ಎಸ್.ಪಿ. ಕವಳಪ್ಪನ ಜಾತಕವಿತ್ತು. ಇಂಥಾ ಮನೆಮುರುಕ ಡಿ.ವೈ.ಎಸ್.ಪಿ. ಕವಳಪ್ಪನಿಗೆ ದಲಿತ ರಾಮಪ್ಪನ ಕುಟುಂಬದ ಬಗ್ಗೆ ಇನ್ನೆಂಥಾ ಮಾನವೀಯ ಅನುಕಂಪವಿರಲು ಸಾಧ್ಯ?

ಒಟ್ಟಿನಲ್ಲಿ ಸ್ವತಂತ್ರ ಬಂದು 65 ವರ್ಷವಾದರೂ ದಲಿತರ ಜೀವಗಳಿಗೆ ಬೆಲೆಯಿಲ್ಲ, ಸವರ್ಣೀಯ ದೌರ್ಜನ್ಯಕ್ಕೆ ಕೊನೆ ಇಲ್ಲ ಎಂಬುದಕ್ಕೆ ರಾಮಪ್ಪನ ಹತ್ಯೆ ಒಂದು ಕನ್ನಡಿಯಷ್ಟೆ!

● ಟಿ.ಎನ್.ಷಣ್ಮುಖ

ಹೆಚ್ಚುತ್ತಿರುವ ದಲಿತರ ಮೇಲಿನ ದೌರ್ಜನ್ಯ!



ರಾಮಪ್ಪನ ಹತ್ಯೆಯೊಂದೇ ಪ್ರಕರಣವಲ್ಲ ಚಿತ್ರದುರ್ಗದಲ್ಲಿ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲಿನ ದೌರ್ಜನ್ಯ ವಿಪರೀತ ಹೆಚ್ಚಾಗುತ್ತಿದೆ. ಈಗ್ಗೆ ಕೆಲ ದಿನಗಳ ಮೊದಲು ಹೊಸದುರ್ಗ ತಾಲ್ಲೂಕಿನ ದೊಡ್ಡಘಟ್ಟ ಗ್ರಾಮದಲ್ಲಿ ದಲಿತರು ಆಂಜನೇಯನ ಗುಡಿ ಪ್ರವೇಶ ಮಾಡಿದರೆನ್ನುವ ಕಾರಣಕ್ಕೆ ಗ್ರಾಮದ ಸವರ್ಣೀಯರು ಅನಾಮತ್ತು ಆಂಜನೇಯನ ಮೂರ್ತಿಯನ್ನೇ ಹಾಸನದ ಹೊಳೆಯಲ್ಲಿ ಅದ್ದಿ ಪವಿತ್ರಗೊಳಿಸಿಕೊಂಡಿದ್ದಲ್ಲದೆ ದಲಿತರಿಗೆ ಊರ ಸವರ್ಣೀಯರು ಬಹಿಷ್ಕಾರ ಹಾಕಿದ್ದರು.

ಆ ಘಟನೆಯ ಬೆನ್ನಿಗೇ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ದೊಡ್ಡಬೀರೇನಹಳ್ಳಿಯ ದಲಿತ ಮಹಿಳೆ ರತ್ನಮ್ಮ ಎಂಬಾಕೆ ಸವರ್ಣೀಯರ ಹೊಲದಲ್ಲಿ ಕೂಲಿಗೆ ಹೋಗಲಿಲ್ಲ ಎನ್ನುವ ಕಾರಣಕ್ಕೆ ಬಹಿಷ್ಕಾರ ಹಾಕಲಾಗಿದೆ. ಈಗ ರಾಮಪ್ಪನ ಹತ್ಯೆ ಮತ್ತು ಅದನ್ನು ಮುಚ್ಚಿ ಹಾಕುವ ಹುನ್ನಾರ....

ಚಿತ್ರದುರ್ಗ ಜಿಲ್ಲಾ ಉಸ್ತುವಾರಿಯ ಜೊತೆಗೆ ಸಮಾಜ ಕಲ್ಯಾಣ ಖಾತೆಯನ್ನೂ ಹೆಗಲಿಗೇರಿಸಿಕೊಂಡಿರುವ ಸಚಿವ ಎಚ್.ಆಂಜನೇಯರ ತವರು ನೆಲದಲ್ಲೇ ದಲಿತರಿಗೆ ಈ ಪರಿ ಅನ್ಯಾಯವಾಗುತ್ತಿದೆ. ಶೋಷಿತ ಸಮುದಾಯದ ಮಂತ್ರಿ ಆಂಜನೇಯ ಈಗಲಾದರೂ ಎಚ್ಚೆತ್ತುಕೊಳ್ಳಬೇಕಿದೆ.

ರಾಮಪ್ಪನ ಕೊಲೆ ಪ್ರಕರಣವೀಗ ಜಿಲ್ಲೆಯಲ್ಲಿ ಭರ್ಜರಿ ಸದ್ದುಮಾಡುತ್ತಿದೆ. ಹತ್ಯೆಯಾದ ನಾಯಕ ಜನಾಂಗದ ರಾಮಪ್ಪನ ಕುಟುಂಬದ ಪರವಾಗಿ ಇಡೀ ಜಿಲ್ಲಾ ನಾಯಕ ಸಮಾಜವೇ ಬೀದಿಗಿಳಿಯುವ ಸಿದ್ಧತೆಯಲ್ಲಿದೆ. ಹಾಗೊಮ್ಮೆ ಶೋಷಿತ ನಾಯಕ ಸಮುದಾಯ ಬಹಿರಂಗವಾಗಿ ತಿರುಗಿ ಬಿದ್ದರೆ ಸರ್ಕಾರದ ಅಹಿಂದಾ ಅಜೆಂಡಾ ಬೆತ್ತಲಾಗಿ ಹೋಗುತ್ತದೆ.

ಅವಿವೇಕಿ ಯತ್ನಾಳ್‌ನ 'ಕೋಮು' ಪ್ರಯತ್ನ

ಯತ್ನಾಳ್ ಎಂಬ ಅವಿವೇಕಿ ಮಾಡಿದ ಯಡವಟ್ಟಿಗೆ ಬಿಜಾಪುರ ರಣರಂಗವಾಗಬೇಕಾಗಿ ಬಂದದ್ದು ವಿಪರ್ಯಾಸವೋ, ಕೇವಲ ವಿಜಯೋತ್ಸವದ ಹೆಸರಿನಲ್ಲಿ ನೆಮ್ಮದಿಗೆ ಬೆಂಕಿ ಇಡಲು ನೆಪವಾದ ಮೋದಿಯಂತವನನ್ನು ಪ್ರಧಾನಿ ಮಾಡಿಕೊಂಡದ್ದು ಭಾರತದ ವಿಪರ್ಯಾಸವೋ ಗೊತ್ತಿಲ್ಲ. ಒಟ್ಟಿನಲ್ಲಿ ಭಯಂಕರ ಭವಿಷ್ಯವೊಂದಕ್ಕೆ ಆದಿಲ್ ಷಾ ಆಳಿದ ನೆಲ ಮುನ್ನುಡಿಯಾದದ್ದು ಮಾತ್ರ ದೊಡ್ಡ ದುರಂತ!


ನೋ ಡೌಟ್, ಬಿಜಾಪುರದ ಗಾಂಧಿಚೌಕದಲ್ಲಿ ನಡೆದದ್ದು ಆಕಸ್ಮಿಕ ಉನ್ಮಾದವಲ್ಲ, ಅದೊಂದು ವ್ಯವಸ್ಥಿತ ಸಂಚು. ಆ ಸಂಚಿನಲ್ಲಿ ಕೇಸರಿ ಪುಂಡ ಬಸವನಗೌಡ ಪಾಟೀಲ್ ಯತ್ನಾಳ್‌ನ ರಾಜಕೀಯ ದುರುದ್ದೇಶ ಎದ್ದು ಕಾಣುವಷ್ಟೆ ಸಲೀಸಾಗಿ ಪೊಲೀಸ್ ಇಲಾಖೆಯ ಹೊಣೆಗೇಡಿತನವೂ ಕಣ್ಣಿಗೆ ರಾಚುತ್ತದೆ. ಅಸಲಿಗೆ ಯತ್ನಾಳ್ ಮೆರವಣಿಗೆ ಹೊರಟದ್ದೇ ಇಂತಹದ್ದೊಂದು ಅವಾಂತರ ಸೃಷ್ಟಿಸಿ ಬಿದ್ದುಹೋಗುತ್ತಿರುವ ತನ್ನ ಪೊಲಿಟಿಕಲ್ ಬೇಸ್ ಗಟ್ಟಿ ಮಾಡಿಕೊಳ್ಳುವುದಕ್ಕೋಸ್ಕರ. ಮೋದಿ ಉನ್ಮಾದವಾಗಲಿ, ಬಿಜೆಪಿ ರಣಕೇಕೆಯಾಗಲಿ ಅವನ ಮೆರವಣಿಗೆಯ ಉದ್ದೇಶ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜಾಪುರದ ಟಿಕೆಟ್ ಕೇಳಿದ್ದನಾದರು ಪಕ್ಷಾಂತರಿ ಯತ್ನಾಳ್‌ಗಿಂತ ಶಾಸಕನಾಗಿದ್ದ ಅಪ್ಪುಪಟ್ಟಣ ಶೆಟ್ಟಿಗೇ ನೀಡುವಂತೆ ಕಾರ್ಯಕರ್ತರು ಒತ್ತಾಯಿಸಿದ್ದರು. ಶೆಟ್ಟಿಯಿಂದಾಗಿ ಟಿಕೆಟ್ ಕೈತಪ್ಪಿತ್ತು. ಚುನಾವಣೆಯಲ್ಲಿ ಪಟ್ಟಣ ಶೆಟ್ಟಿಯೂ ಬರ್ಕತ್ತಾಗಲಿಲ್ಲ ಎನ್ನುವುದು ಬೇರೆ ಮಾತು, ಇಲ್ಲಿಂದ ಕಾಂಗ್ರೆಸ್‌ನ ಮಕ್ಬುಲ್ ಎಸ್ ಭಗವಾನ್ ಗೆದ್ದು ಎಮ್ಮೆಲ್ಲೆ ಆಗಿರೋದು ಹಳೇ ವಿಷಯ. ಆದರೆ ಕೊನೇಪಕ್ಷ ಮುಂಬರುವ ವಿಧಾನಸಭಾ ಚುನಾವಣೆ ವೇಳೆಗಾದರೂ ಟಿಕೆಟ್ ತನಗೇ ಸಿಕ್ಕುವಂತೆ ಈಗಿನಿಂದಲೇ ತಯಾರಿ ನಡೆಸಬೇಕೆನ್ನುವುದು ಯತ್ನಾಳ್ ಯತ್ನ. ಅದೇ ಕಾರಣಕ್ಕೆ ಮೊನ್ನೆ ಪಟ್ಟಣಶೆಟ್ಟಿ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಭಾಗವಹಿಸದೆ ತನ್ನದೇ ಪರ್ಯಾಯ ಮೆರವಣಿಗೆ ಹೊರಟು ಈ ರಾದ್ಧಾಂತ ಮಾಡಿರೋದು.

ಪಟ್ಟಣಶೆಟ್ಟಿ ನೇತೃತ್ವದ ವಿಜಯೋತ್ಸವದ ಮೆರವಣಿಗೆ ಅದೇ ರಸ್ತೆಯಲ್ಲಿ ಹಾದುಹೋದಾಗ ಕಿಂಚಿತ್ತೂ ಗಲಭೆಯಾಗಿರಲಿಲ್ಲ, ಇದು ಗಮನಿಸಬೇಕಾದ ಸಂಗತಿ. ಮೋದಿ ಹೆಸರಲ್ಲಿ ಯತ್ನಾಳ್ ಪುಂಡರ ಸಮೇತ

ವ್ಯಾಪಾರಿಗಳಲ್ಲಿ ಬಹುಪಾಲು ಜನ ಮುಸ್ಲಿಂ ಕೋಮಿಗೆ ಸೇರಿದವರು. ಇದು ಯತ್ನಾಳ್‌ಗೆ ಚೆನ್ನಾಗಿ ಗೊತ್ತಿತ್ತು. ಮಂದಿರ, ಮಸೀದಿಯ ಹೆಸರೆತ್ತಿದರೆ ಮುಸ್ಲಿಮರು ಉರಿದುಬೀಳುತ್ತಾರೆ ಆಗ ಗಲಭೆ ಭುಗಿಲೇಳುತ್ತದೆ ಎನ್ನುವುದು ಯತ್ನಾಳ್‌ನ ಲೆಕ್ಕಾಚಾರವಾಗಿತ್ತು. ಆದರೆ ಹಾಗಾಗಲಿಲ್ಲ, ಯತ್ನಾಳ್‌ನ ಹುಟ್ಟು ಬುದ್ಧಿ ಗೊತ್ತಿದ್ದ ಅಲ್ಲಿನ ಮುಸ್ಲಿಮರು ತಾಳ್ಮೆಯಿಂದಲೇ ಇದ್ದರು. ಘೋಷಣೆ ವರ್ಕೌಟ್ ಆಗುವುದಿಲ್ಲ ಎನ್ನುವುದು ಖಾತ್ರಿಯಾಗುತ್ತಿದ್ದಂತೆ ತಾನೊಬ್ಬ ಮಾಜಿ ಕೇಂದ್ರ ಸಚಿವ ಎನ್ನುವ ಘನತೆಯನ್ನೂ ಮರೆತು ತಾನಿದ್ದ ಕಾರಿನಿಂದಲೇ ಕೇಸರಿ ಗುಲಾಲನ್ನು ಸುತ್ತಲಿದ್ದ ಜನರ ಮೇಲೆ ಎರಚಿದ್ದ ನಾಯಕನೇ ಈ ಪರಿ ಹಾವಳಿಗಿಳಿದ ಮೇಲೆ ಕಪಿಸೇನೆ ಸುಮ್ಮನಿದ್ದೀತೆ? ಜೋರಾಗಿ ಮೈಕ್ ಹಾಕಿಕೊಂಡು ಬೇಕಾಬಿಟ್ಟಿಯಾಗಿ ಡ್ಯಾನ್ಸ್ ಮಾಡಿ ಬೇಕಂತಲೇ ಮುಸ್ಲಿಮರನ್ನು ಕೆರಳಿಸುವ ಕೆಲಸ ಮಾಡಿದ್ದರು.

ಅದೇ ಸಮಯಕ್ಕೆ ಬುರ್ಖಾ ಹಾಕಿಕೊಂಡ ಹೆಂಗಸೊಬ್ಬಾಕೆ ಅತ್ತ ಹಾದು ಹೋಗುತ್ತಿದ್ದಾಗ ದಾಂಗುಡಿಯಿಟ್ಟ ಯತ್ನಾಳ್‌ನ ಸೇನೆ ಬಲವಂತವಾಗಿ ಆಕೆಗೆ ಕೇಸರಿ ಗುಲಾಲ್ ಹಚ್ಚಿ ರೇಗಿಸಲು ಮುಂದಾಗಿದ್ದರು.




ಸಂಭಾವ್ಯತೆಯ ಅರಿವಿದ್ದೂ ಬೆರಳೆಣಿಕೆ ಸಿಬ್ಬಂದಿಗಳನ್ನ ಬಂದೋಬಸ್ತ್‌ಗೆ ಹಾಕಿದ್ದ ಪೊಲೀಸ್ ಇಲಾಖೆ ವಿಶೇಷವಾ ಮಾಡುವಂತದ್ದೇನೂ ಅಲ್ಲಿರಲಿಲ್ಲ. ಯತ್ನಾಳ್ ದೌರ್ಜನ್ಯ ಮೂಕಸಾಕ್ಷಿಯಾಗಿ ಅವರೆಲ್ಲಾ ನಿಂತಿದ್ದರು.

ಯತ್ನಾಳ್‌ಗೆ ಗಲಭೆಯ ಉದ್ದೇಶ ಇರದಿದ್ದರೆ ಆಗಲ ಗಲಾಟೆಯನ್ನು ಹತ್ತಿಕ್ಕಬಹುದಿತ್ತು, ತನ್ನ ಕಾರ್ಯಕರ್ತರಿ ತಿಳಿಹೇಳಿ ಪರಿಸ್ಥಿತಿ ಹತೋಟಿಗೆ ತರಬಹುದಿತ ಹ್ಞೂಂ...ಹೂ ಆತ ಆ ಕೆಲಸ ಮಾಡಲೇ ಇಲ್ಲ, ತ ಹುಡುಗರನ್ನು ರೊಚ್ಚಿಗೆಬ್ಬಿಸಿ ಅಲ್ಲಿಂದ ಕಾಲಿಗೆ ಬುದ್ಧಿ ಹೇಳಿ ಮಹಾನ್ 'ಲೀಡರ್'ನ ಸಾಧನೆ. ವಿಷಯ ತಿಳಿಯುತ್ತಿದ್ದಂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್, ಶಾಸ ಮಕ್ಬುಲ್ ಭಾಗವಾನ್ ಕೇಸು ದಾಖಲಾಗುವಂ ನೋಡಿಕೊಂಡಿದ್ದಲ್ಲದೆ ಇಡೀ ಪ್ರಕರಣದ ರೂವಾರಿಯಾ ಯತ್ನಾಳ್‌ನನ್ನು ಬಂಧಿಸುವಂತೆ ಪೊಲೀಸರ ಮೇಲೆ ಒತ್ತ ತಂದಿದ್ದರು.


ಗಲಭೆಯಿಂದ 'ಹಿಂದೂ ಹೀರೊ' ಆಗುತ್ತೇನೆಂ ಭ್ರಮಿಸಿದ್ದ ಯತ್ನಾಳ್ ಅದೆಂತಹ ಪುಕ್ಕಲ ಆಸಾಮಿಯೆಂ ರಾತ್ರೋರಾತ್ರಿ ಊರು ಬಿಟ್ಟು ಪರಾರಿಯಾಗಿ ದೂರ ಕೊಲ್ಲಾಪುರದ ಓರಿಯಂಟಲ್ ಕೌನ್ ಹೊಟೇಲ್‌ನ ಬಚ್ಚಿಟ್ಟುಕೊಂಡಿದ್ದ ಅದೂ ತನ್ನ ಡ್ರೈವರ್ ಹೆಸರಲ್ಲಿ ರೂ ಬುಕ್ ಮಾಡಿಸಿಕೊಂಡು!

ಪೊಲೀಸ್ ವ್ಯವಸ್ಥೆಯ ಸಪೋರ್ಟ್


ಪೊಲೀಸರು ಸ್ವಲ್ಪ ಮುನ್ನೆಚ್ಚರಿಕೆ ವಹಿಸಿದ್ದ ಬಿಜಾಪುರದ ಶಾಂತಿ ಈ ಮಟ್ಟಕ್ಕೆ ಹದಗೆಡುತ್ತಿರಲಿ ಯತ್ನಾಳ್ ಇಂಥದ್ದೊಂದು ಕಿಡಿಗೇಡಿ ಕೃತ್ಯ ನಡೆಸುತ್ತಾನೆ ವುದಕ್ಕೆ ಸಾಕಷ್ಟು ಸೂಚನೆಗಳು ಮೊದಲೇ ಸಿಕ್ಕಿದ್ದ ಹಾಗೆ ನೋಡಿದರೆ ಒಂದೇ ದಿನ ಅದೇ ಸ್ಥಳದಲ್ಲಿ ಅ ಕಾರಣಕ್ಕೆ ಎರಡೆರಡು ಮೆರವಣಿಗೆಗೆ (ಅವು ರಾಜಕೀ ಪ್ರೇರಿತ ಎಂಬುದು ಎಂತವರಿಗೂ ಅರ್ಥವಾಗುವಂತ ಅವಕಾಶ ನೀಡಿದ್ದೇ ಜಿಲ್ಲಾ ಎಸ್‌ಪಿ ರಾಮ್‌ನಿವಾಸ್ ಶ ಮಾಡಿದ ಮೊದಲ ಪ್ರಮಾದ. ಇನ್ನೂ ಹಾಗೆ ಅನುವ ನೀಡಿದ ಮೇಲಾದರು ಖುದ್ದು ತಾನೇ ಸ್ಥಳದಲ್ಲಿದ್ದು ಪರಿ ನಿಭಾಯಿಸಬೇಕಾದ್ದು ಎಸ್ಪಿಯಾದವರ ಕರ್ತವ್ಯ. ಆ ಅನಾಹುತದ ಅರಿವಿದ್ದೂ ಅವತ್ತು ಎಸ್‌ಪಿ ಊರ ಇರಲಿಲ್ಲ, ಉಸ್ತುವಾರಿಗೆ ಅಂತ ನಿಯೋಜನೆಯಾದ




ರಮೇಶ್ ಜಿಗಜಿಣಗಿ



ಎಂ.ಬಿ. ಪಾಟೀಲ್



ಬೆಳ್ಳುಬ್ಬಿ



ಮಕ್ಬುಲ್ ಭಾಗವಾನ್

ಖಂಡಿತ ಆಗಿರಲಿಲ್ಲ. ಹಾಗೊಮ್ಮೆ ಈ ಉದ್ದೇಶಗಳೇ ಇದ್ದಿದ್ದರೆ ಇವನ ರೋಡ್‌ಶೋಗೂ ಅರ್ಧಗಂಟೆ ಮುನ್ನ ಅದೇ ಬೀದಿಯಲ್ಲಿ ನಡೆದ ವಿಜಯೋತ್ಸವದ ಮೆರವಣಿಗೆ ಜೊತೆಯೇ ಯತ್ನಾಳನೂ ಕೈಬೀಸಿಕೊಂಡು ಹೋಗಬಹುದಿತ್ತು. ಅಂದಹಾಗೆ, ಆ ಮೆರವಣಿಗೆಯನ್ನು ಆಯೋಜಿಸಿದ್ದು ಬೇರಾರೂರೂ ಅಲ್ಲ, ಖುದ್ದು ಜಿಲ್ಲಾ ಬಿಜೆಪಿ ಘಟಕ. ಪಕ್ಷದ ಜಿಲ್ಲಾಧ್ಯಕ್ಷ ಎಸ್.ಕೆ. ಬೆಳ್ಳುಬ್ಬಿ ಮತ್ತು ಮಾಜಿ ಶಾಸಕ ಅಪ್ಪು ಪಟ್ಟಣಶೆಟ್ಟಿಯಂತವರೇ ಅದರೊಟ್ಟಿಗೆ ಹೆಜ್ಜೆ ಹಾಕಿದ್ದರು. ಅದನ್ನು ಬಿಟ್ಟು ಯತ್ನಾಳ್ ಪರ್ಯಾಯ ಮೆರವಣಿಗೆ ಹೊರಟದ್ದೇ 'ಲೀಡರ್'ಗಿರಿ ದಕ್ಕಿಸಿಕೊಳ್ಳಲು.

ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಅಪ್ಪುಪಟ್ಟಣ ಶೆಟ್ಟಿ ನಡುವಿನ ಸಂಬಂಧ ಮೊದಲಿನಿಂದಲೂ ಎಣ್ಣೆ ಸೀಗೆಕಾಯಿಯಂತದ್ದು. ಲಿಂಗಾಯತ 'ಪಟ್ಟ'ಕ್ಕೋಸ್ಕರ ಯಡ್ಡಿ ಜೊತೆಗಿನ ವೈಮನಸ್ಸು ಹಾಗೂ ಸ್ಥಳೀಯ ಶೆಟ್ಟಿಯ ಮೇಲುಗೈ ಕಾರಣಕ್ಕೇ ಹಿಂದೊಮ್ಮೆ ಇದೇ ಯತ್ನಾಳ್ ಬಿಜೆಪಿಗೆ ಟಾಟಾ ಹೇಳಿ ಜೆಡಿಎಸ್‌ನ ಹೊರೆ ಹೊತ್ತಿದ್ದ. ಆದರೆ ತನ್ನ ಬುಡದ ಬಳಿಯೇ ಕೋಮುದ್ವೇಷದ ಪಿಪಾಯಿ ತುಂಬಿಟ್ಟುಕೊಂಡಿರುವ ಯತ್ನಾಳ್‌ಗೆ 'ಗೌಡ'ರ ಹಟ್ಟಿಯ ಪಾಳೇಗಾರಿಕೆ ಬಲುಬೇಗನೆ ಉಸಿರುಕಟ್ಟಿಸಿತ್ತು. ಹಾಗಾಗಿ ವಾಪಾಸ್ ಬಿಜೆಪಿಗೇ ಬಂದು ಸೇರಿಕೊಂಡಿದ್ದ.

ಬೀದಿಗಿಳಿದಿದ್ದನಾದರು ಅದು 'ಶುದ್ಧಿ' ಮಾಡಬೇಕೆನ್ನುವ ಹಂಬಲ ಆತನಿಗಿತ್ತು. ಹಾಗಾಗಿಯೇ ಲಾಲ್ ಬಹದ್ದೂರ್ ಶಾಸ್ತ್ರಿ ಮಾರುಕಟ್ಟೆ ಬಳಿ ಬರುತ್ತಿದ್ದಂತೆಯೇ ಹುಚ್ಚುಚ್ಚಾಗಿ ಕೇಸರಿ ಗುಲಾಲ್ ಎರಚಿದ್ದಲ್ಲದೆ ಮೋದಿ ಜೈಕಾರದ ಬದಲು 'ಬನಾಯೇಂಗೆ..... ಬನಾಯೇಂಗೆ.... ಬಾಬರಿ ಮಸೀದಿ ತೋಡ್ಕೆ ರಾಮ್ ಮಂದಿರ್ ಬನಾಯೇಂಗೆ' ಎಂಬ ವಿವಾದಿತ ಘೋಷಣೆ ತನ್ನ ಚೇಲಾಗಳ ಬಾಯಿಂದ ಮೊಳಗುವಂತೆ ನೋಡಿಕೊಂಡಿದ್ದ.


ಗಾಂಧಿ ಚೌಕಕ್ಕೆ ಹೊಂದಿಕೊಂಡಂತಿರುವ ಅಲ್ಲಿನ ಬೀದಿ

ಅಪ್ಪುಹೊತ್ತೂ ತಾಳ್ಮೆಯಿಂದಿದ್ದ ಬೀದಿ ವ್ಯಾಪಾರಿಗಳು ಕೆರಳಿದ್ದೇ ಆಗ. ಕಪಿಸೇನೆಯ ಕೃತ್ಯಕ್ಕೆ ಪ್ರತಿರೋಧ ಒಡ್ಡಿದ್ದರು. ಅದೇ ಯತ್ನಾಳ್ ಪುಂಡರಿಗೆ ಮಹಾಪರಾಧವಾಗಿ ಕಂಡಿತ್ತು. ಕೂಡಲೇ ಅಂಗಡಿಗಳ ಮೇಲೆ ದಾಳಿ ಮಾಡಿ ಧ್ವಂಸ ಮಾಡಿ ಗಲಾಟೆಗೆ ನಾಂದಿ ಹಾಡಿದ್ದರು. ವಿಪರ್ಯಾಸವೆಂಧರೆ ಅಲ್ಲಿ ಮುಸ್ಲಿಂ ವ್ಯಾಪಾರಿಗಳಲ್ಲದೆ ಹಿಂದೂ ವ್ಯಾಪಾರಿಗಳೂ ಅಂಗಡಿ ತೆರೆದು ಕೂತಿದ್ದರು. ವ್ಯವಸ್ಥಿತ ಉನ್ಮಾದಕ್ಕೆದ್ದ ಕೇಸರಿ ಕಿರಾತಕರು ಯಾರನ್ನೂ ಲೆಕ್ಕಿಸದೆ ಎಲ್ಲಾ ಅಂಗಡಿಗಳನ್ನೂ ಚೆಲ್ಲಾಪಿಲ್ಲಿ ಮಾಡಿದ್ದರು. ಇನ್ನು ಅನಾಹುತದ

ಬಂದ್ ಕೂಡಾ ಠುಸ್ಸಾಯ್ತು

ಯತ್ನಾಳ್ ಬಂಧನ ಪ್ರತಿಭಟಿಸಿ ಜನ ಬೀದಿಗಿಳಿಯುವಂತ ವರ್ಚಸ್ಸು ಆತನದಲ್ಲ, ಬಿಜೆಪಿ ಕಾರ್ಯಕರ್ತರಿಗೇ ಈ ಕುರಿತು ಉತ್ಸಾಹವಿಲ್ಲ, ಆ ಮಟ್ಟಿಗೆ ಹೆಸರು ಕೆಡಿಸಿಕೊಂಡಿದ್ದಾನೆ ಯತ್ನಾಳ್. ಗಲಭೆಯ ದಿನ ಅವನ ಸುತ್ತ ಬಂದಿದ್ದವರೂ 'ಕಾಸು' ಕಾರ್ಯಕರ್ತರು. ಹಾಗಂತ ಪಕ್ಷದ ಮುಖಂಡನೊಬ್ಬನನ್ನು ಬಂಧಿಸಿದಾಗ ಸುಮ್ಮನೇ ಕೂಡುವುದು ಸರಿಯಲ್ಲ ಎನ್ನುವ ಉದ್ದೇಶದಿಂದ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಕೆ. ಬೆಳ್ಳುಬ್ಬಿ ಜೂನ್ 2ರಂದು ಬಿಜಾಪುರ ಬಂದ್ ಮಾಡುವುದಾಗಿ ಕರೆಕೊಟ್ಟಿದ್ದ. ಅಸಲಿಗೆ ಈ ಬೆಳ್ಳುಬ್ಬಿ ಹೇಳಿಕೇಳಿ ಪಟ್ಟಣಶೆಟ್ಟಿ ಗುಂಪಿನವ. ಯತ್ನಾಳ್ ಬಗ್ಗೆ ತೀರಾ ಮಮಕಾರವೇನೂ ಇಲ್ಲ, ಅಧ್ಯಕ್ಷನಾಗಿದ್ದುಕೊಂಡು ಜವಾಬ್ದಾರಿ ಕಳಚಿಕೊಳ್ಳುವುದಕ್ಕೋಸ್ಕರ ಬಂದ್ ಬಗ್ಗೆ ಮಾತಾಡಿದ್ದ. ಆದರೆ 144 ಕಲಂ ಜಾರಿಯಲ್ಲಿರೋದರಿಂದ ಬಂದ್ ಮಾಡಲು ಅವಕಾಶ ನೀಡುವುದಿಲ್ಲ ಅಂತ ಪೊಲೀಸರು ನಿರಾಕರಿಸಿದ್ದರು. ಬೆಳ್ಳುಬ್ಬಿಗೂ ಅದೇ ಬೇಕಾಗಿತ್ತು, ಬಂದ್‌ಗೋಸ್ಕರ ವಿಶೇಷ ಮುತುವರ್ಜಿ ವಹಿಸಲಿಲ್ಲ, ಅವತ್ತು ಶಾಲಾ ಕಾಲೇಜುಗಳು, ಅಂಗಡಿ ಮುಂಗಟ್ಟುಗಳು, ಬಸ್ ಸಂಚಾರ ಎಲ್ಲವೂ ಮಾಮೂಲಿನಂತೆಯೇ ಇತ್ತು. ಕಾಟಾಚಾರಕ್ಕೆಂಬಂತೆ ಹತ್ತಾರು ಜನ ಸೇರಿ ಜಿಲ್ಲಾಧಿಕಾರಿಗೆ ಯತ್ನಾಳ್ ಬಂಧನ ಖಂಡಿಸಿ ಪತ್ರ ಕೊಟ್ಟದ್ದಷ್ಟೇ ಬಂತು. ಆ ಮೂಲಕ ಬಂಧ್ ಠುಸ್ಸಾಗಿ, ಯತ್ನಾಳ್ 'ಜನಪ್ರಿಯತೆ' ಬಟಾಬೋರಲಾಗಿತ್ತು!





ತ್ರ ಡಿವೈಎಸ್ಪಿ ಜಿರಗಾಳರು ಮತ್ತವರ ಬೆರಳೆಣಿಕೆಯ
ಸು.

ೋಕಸಭೆಯ ಫಲಿತಾಂಶ ಬಂದಮೇಲೆ ಹಲವಾರು
ನಿಕ ಸಭೆಗಳಲ್ಲಿ 'ಮೋದಿ ಪ್ರಮಾಣವಚನದ ದಿನ
ಜಾಪುರದಲ್ಲಿ ಕೇಸರಿ ರಂಗು ಮುಗಿಲು ಮುಟ್ಟುತ್ತೆ,
ಯಾರೇ ಬಂದರು ಕೇಸರಿಮಯವಾಗೋದು ಖಾತ್ರಿ'
ಯತ್ನಾಳ್ ಭಾಷಣ ಬಿಗಿದಿದ್ದ. ಅಲ್ಲದೆ ಜಿಲ್ಲಾ
ರಿ ಮಂತ್ರಿ ಎಂ.ಬಿ.ಪಾಟೀಲ್ ಬಗ್ಗೆ ಕಾರಿಕೊಳ್ಳುತ್ತ
ಪಾಟೀಲ್‌ನ ಬಬಲೇಶ್ವರ ಕ್ಷೇತ್ರದಲ್ಲಿ ಪಂಚಮಸಾಲಿ
ಕೋಮಿನ ಅಭ್ಯರ್ಥಿಯನ್ನು ತಯಾರು ಮಾಡಿ
ಗೇಟ್‌ಪಾಸ್ ನೀಡೋವರೆಗೂ ತಾನು ವಿಶ್ರಮಿಸಲ್ಲ'
ಮುಸ್ಲಿಂ ಶಾಸಕ ಮಕ್ಬುಲ್ ಭಾಗವಾನ್‌ಗೂ
ಯತ್ನಾಳ್ ಅಂದು ನಡೆಸಿದ ಕುಕೃತ್ಯಕ್ಕೆ ಇದಕ್ಕಿಂತ
ಚನೆಗಳು ಬೇಕೆ. ಅಪಾಯವನ್ನು ಅರಿತ ಖಡಕ್
ಡಿವೈಎಸ್ಪಿ ಜಿರಗಾಳರು ಅವತ್ತೇ ಯತ್ನಾಳನನ್ನು
ಬಿಸಿ ಮುಟ್ಟಿಸಲು ಪ್ಲಾನ್ ಹಾಕಿಕೊಂಡಿದ್ದರು.
ಲಾಖೆ ಒಳಗಿಂದ ಸರಿಯಾದ ಸಪೋರ್ಟ್ ಸಿಗದೆ
ನಾಗಿದ್ದರು. ಡಿವೈಎಸ್ಪಿ ಜಿರಗಾಳ ತನಗೆ
ಬಹುದೆಂಬುದು ಅವನಿಗೆ ಅರ್ಥವಾಗಿತ್ತು. ಬಿಜೆಪಿ
ಕ್ಷ ಪ್ರಹ್ಲಾದ್ ಜೋಷಿ ಮೂಲಕ 'ಜಿರಗಾಳನನ್ನು
ತು ಮಾಡಿ' ಅಂತ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆ
ದ್ದು ಇದೇ ಕಾರಣಕ್ಕೆ.

ಗೆ ಸ್ಪಷ್ಟ ಮುನ್ಸೂಚನೆಗಳಿದ್ದರೂ ಎಸ್ಪಿ ಸಾಹೇಬರು
ವಹಿಸದ್ದು ಎದ್ದು ಕಾಣುವ ಕರ್ತವ್ಯಲೋಪ.
ಲೆ ತೆರಬೇಕಾದ್ದು ಅಮಾಯಕ ಜನ. ಇವತ್ತಿಗೂ
ರದ ಜೀವನ ಸಹಜ ಸ್ಥಿತಿಗೆ ಬರಲು
ುತ್ತಿದೆ. ಬೂದಿ ಮುಚ್ಚಿದ ಕೆಂಡದಂತೆ ದಳ್ಳುರಿ
ಉಳಿತಿದೆ.

ತ್ನಾಳ್‌ನ ಕೋಮುಗೇಡಿ ಕೃತ್ಯ ಬಯಲಾಗಿ, ಅವನೇ
ಆರೋಪಿಯಾಗಿರುವುದಕ್ಕೆ ವೀಡಿಯೋ
ಗಳು ಸಾಕ್ಷಿಯಾಗಿ ನಿಲ್ಲುತ್ತಿದ್ದಂತೆ ಅವನನ್ನು ಅರೆಸ್ಟ್
ಬೇಕಾದ ಅನಿವಾರ್ಯತೆ ಪೊಲೀಸ್ ಇಲಾಖೆಗೆ
ತ್ತು, ಅದಕ್ಕೋಸ್ಕರವೇ ಬೆಳಗಾಂವ್ ವಿಭಾಗದ
ಭಾಸ್ಕರ್ ರಾವ್ ಒಂದು ತಂಡ ರಚಿಸಿ
ಳಿಸಿದ್ದರು. ಯತ್ನಾಳ್‌ನ 'ಹೈಡ್ ಔಟ್' ಪತ್ತೆ
ಹೆಚ್ಚುಕಾಲವೇನೂ ಬೇಕಾಗಲಿಲ್ಲ. ಮಹಾರಾಷ್ಟ್ರ
ನೆರವಿನಿಂದ ಲಾಡ್ಜ್‌ನಲ್ಲಿ ಬಚ್ಚಿಟ್ಟುಕೊಂಡಿದ್ದ
ಎಳೆದು ತರುವ ಮಟ್ಟಿಗೆ ಪೊಲೀಸರು
ಾಗಿದ್ದಾರೆ. ಆದರೆ ಅವನಿಗೆ ಸೂಕ್ತ ಶಿಕ್ಷೆಯಾದೀತೆ?
ಾಕೋ ಅನುಮಾನವೇ ಸರಿ.

ನ ವಿರುದ್ಧ ಜಾಮೀನುರಹಿತ ವಾರೆಂಟ್ ಇದೆ.
ಹೋಗುವುದರಿಂದ ಆತ ನುಣುಚಿಕೊಳ್ಳಲಿಕ್ಕೆ
ಇಲ್ಲ, ಅದು ಗೊತ್ತಿದ್ದೆ ಬಂಧನವಾಗುತ್ತಿದ್ದಂತೆಯೇ
ದ ಒತ್ತಡ ಏರುಪೇರಾಗಿದೆ ಅಂತ ನಾಟಕವಾಡಿ
ಆಸ್ಪತ್ರೆ ಸೇರಿಕೊಂಡಿದ್ದಾನೆ. ಆ ಆಸ್ಪತ್ರೆಯ ಒಡೆಯ
ಕೋರೆ. ಅದೇ ಕೇಸರಿ ಪಕ್ಷದ ಆಸಾಮಿ.
ಯತ್ನಾಳ್ ಬೇಕಾದಂತೆ ನಾಟಕವಾಡಬಹುದು,
ರ್ಟ್‌ಗಳನ್ನೂ ಸೃಷ್ಟಿಸಿ ಪೊಲೀಸರ ಕೈಗಿತ್ತು
ಸಬಹುದು. ಯತ್ನಾಳ್‌ನನ್ನು ಸರ್ಕಾರಿ ಆಸ್ಪತ್ರೆಗೆ
ರಿ ಸಾಮಾನ್ಯ ವೈದ್ಯಕೀಯ ಪರೀಕ್ಷೆ ಮಾಡಿಸಿದರೆ
ದ ಅಸಲಿಯತ್ತು ಹೊರಬೀಳುತ್ತದೆ.

ಅಷ್ಟೆಲ್ಲಾ ರಿಸ್ಕು ಯಾರು ತೆಗೆದುಕೊಂಡಾರು?
ಕ್ಕೆ ಇಟ್ಟುಕೊಂಡು ಎಸ್‌ಪಿ ಶಪಥ್‌ರತ್ನ
ದೇ ಅಪರಾಧ......

• ಮೇಘರಾಜ್

ಪರಿಸರ ಮಂಡಳಿಯಲ್ಲಿ 'ಅಧಿಕಾರ' ಮಾಲಿನ್ಯ
ಭಾನಗಡಿ 'ಬಾಲಗಂ' ಕೊನೆಗೂ ಸಸ್ಪೆಂಡ್!

'ಅಗಲ ಆದದ್ದು ಹರಿಯಲೇ ಬೇಕು, ಉದ್ದ ಆದದ್ದು ಮುರಿಯಲೇ ಬೇಕು' ಅನ್ನೋ ಮಾತು ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿಯ ಮಟ್ಟಿಗೆ ನಿಜವಾಗಿದೆ. ಆತ ಮಾಡುತ್ತಿದ್ದದ್ದು ಕೇಂದ್ರ ಪರಿಸರ ಪ್ರಯೋಗಾಲಯದ ಮುಖ್ಯ ವೈಜ್ಞಾನಾಧಿಕಾರಿಯ ಕೆಲಸ, ಆದರೆ ವರ್ತಿಸುತ್ತಿದ್ದದ್ದು ಪಕ್ಕಾ ಸರ್ವಾಧಿಕಾರಿಯಂತೆ; ಮಾಡಬೇಕಾದ ಕರ್ತವ್ಯಗಳನ್ನು ಹೊರತುಪಡಿಸಿ ಬೇರೆಲ್ಲಾ ಕಿತಾಪತಿಗಳನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದ; ಮಹಿಳೆಯರು ಅನ್ನೋ ಸೌಜನ್ಯವೂ ಇಲ್ಲದೆ ಕೈಕೆಳಗಿನ ಸಿಬ್ಬಂದಿಗಳಿಗೆ ಸೊಂಟದ ಕೆಳಗಿನ ಭಾಷೆ ಬಳಸಿ ಬಾಯಿಗೆ ಬಂದಂತೆ ಎಗರಾಡುತ್ತಿದ್ದ; ಅಧಿಕಾರ ಇಲ್ಲದಿದ್ದರೂ ಸುಖಾಸುಮ್ಮನೆ ನೌಕರರನ್ನು ಅತ್ತಿಂದಿತ್ತ ವರ್ಗಾವಣೆ ಮಾಡಿ ಮಜಾ ತೆಗೆದುಕೊಳ್ಳುತ್ತಿದ್ದ; ಇಷ್ಟೆಲ್ಲಾ ಭಾನ್ಗಡಿಗಳ ವಾರಸುದಾರ ಬಾಲಗಂಗಾಧರನ್ ಈಗ ಸಸ್ಪೆಂಡ್ ಆಗಿ ಮನೆ ಸೇರಿದ್ದಾನೆ. ಇಷ್ಟಾದರು ತನ್ನ ಚಾಳಿ ಬಿಡದೆ ಮತ್ತೆ ಕೆಲಸಗಿಟ್ಟಿಸಿಕೊಳ್ಳಲು ನವರಂಗಿ ಆಟ ಶುರುಹಚ್ಚಿಕೊಂಡಿದ್ದಾನೆ.

ಅಸಲಿಗೆ 'ಬಾಲಗಂ'ನ ಸಸ್ಪೆಂಡ್ ಆದೇಶ ಕೇಳಿ ಸಿಬ್ಬಂದಿಗಳೆ ನಿಟ್ಟುಸಿರು ಬಿಡುತ್ತಿದ್ದಾರೆಂದರೆ ಇವನ ಉಪದ್ರವ ಅದೆಂತಹದಿರಬೇಡ ನೀವೇ ಯೋಚಿಸಿ. ಪಟ್ಟಿ ಮಾಡುತ್ತಾ ಹೋದರೆ ಬಾಲಗಂ ಪ್ರತಾಪಗಳದ್ದೇ ಒಂದು ಪ್ರಣಾಳಿಕೆ ಸಿದ್ಧವಾಗಿಬಿಡುತ್ತದೆ. ಕಿರಿಯ ಅಧಿಕಾರಿಗಳಿಗಿರಲಿ ತನ್ನ ಹಿರಿಯ ಅಧಿಕಾರಿಗಳಿಗೂ ಈತ ಕೊಟ್ಟಿರುವ ಕಾಟ ಅಂತಿಂತದ್ದಲ್ಲ, ಒಮ್ಮೆ ಮುಖ್ಯ ಆಡಳಿತಾಧಿಕಾರಿ ಶಿವಪ್ರಕಾಶ್ ವಿಪರೀತ ಕಂಪ್ಲೆಂಟ್ ಬಂದಿದ್ದರಿಂದ ರಾತ್ರಿ ಸುಮಾರು 11.30ರ ಸರಿಹೊತ್ತಿನಲ್ಲಿ ಶಿವನಗರದ ಕೇಂದ್ರ ಪರಿಸರ ಪ್ರಯೋಗಾಲಯದ ಭದ್ರತೆಯ ತಪಾಸಣೆಗೆಂದು ಹೋಗಿದ್ದರು. ಆದರೆ ಸಮವಸ್ತ್ರವೇ ಇರದ ಭದ್ರತಾ ಸಿಬ್ಬಂದಿಗಳಿಬ್ಬರು ಕುಡಿದ ಮತ್ತಿನಲ್ಲಿ ಶಿವಪ್ರಕಾಶ್‌ಗೆ ಬಾಯಿಗೆ ಬಂದಂತೆ ಬೈಯ್ದು ಹಲ್ಲೆಗೆ ಮುಂದಾಗಿದ್ದರು. ಗಸ್ತಿನಲ್ಲಿದ್ದ ಪೊಲೀಸರು ಮಧ್ಯಪ್ರವೇಶಿಸಿ ಪೀಪ್ರೋಟು ಆಸಾಮಿಗಳನ್ನು ಹತೋಟಿಗೆ ತೆಗೆದುಕೊಳ್ಳಬೇಕಾಗಿತ್ತು. ಆದರೆ ಮಾರನೇ ದಿನ ಬಾಲಗಂ ಇಡೀ ಪ್ರಕರಣವನ್ನು ತಿರುಚಿ ಶಿವಪ್ರಕಾಶ್‌ರನ್ನೇ ದೋಷಿಯಾಗಿಸಿದ್ದ. ಆ ಭದ್ರತಾ ಸಿಬ್ಬಂದಿಗಳನ್ನು ಪೂರೈಕೆ ಮಾಡುತ್ತಿದ್ದ ಸುಪ್ರೀತ್ ಎಂಟರ್‌ಪ್ರೈಸಸ್‌ನ ವ್ಯವಸ್ಥಾಪಕರಿಗೆ ಫೋನಾಯಿಸಿ 'ಮುಖ್ಯ ಆಡಳಿತಾಧಿಕಾರಿ ಸಿ.ಎನ್. ಶಿವಪ್ರಕಾಶ್‌ರೆ ನಿನ್ನೆ ರಾತ್ರಿ ಪಾನಮತ್ತರಾಗಿ ಕೇಂದ್ರ ಪ್ರಯೋಗಾಲಯಕ್ಕೆ ಬಂದಿದ್ದಲ್ಲದೆ ಕರ್ತವ್ಯದಲ್ಲಿದ್ದ ನಮ್ಮ ಸಿಬ್ಬಂದಿಗಳ ಮೇಲೆ ಹಲ್ಲೆ ನಡೆಸಿಹೋಗಿದ್ದಾರೆ ಅಂತ ಕೂಡಲೇ ಅಧ್ಯಕ್ಷರಿಗೆ ಕಂಪ್ಲೆಂಟ್ ಕೊಡಿ' ಎಂದು ಹೇಳಿಕೊಟ್ಟಿದ್ದ. ಜೊತೆಗೆ ಸಿಬ್ಬಂದಿಗಳಿಂದ ಬಲವಂತವಾಗಿ ಅದೇರೀತಿ ಮುಚ್ಚಳಿಕೆ ಬರೆಸಿಕೊಂಡಿದ್ದ.

ಪ್ರಕರಣ ಗೋಜಲಾಗುತ್ತಿದ್ದಂತೆ ಮಂಡಳಿಯ ಅಧ್ಯಕ್ಷ ವಾಮನಾಚಾರ್ಯ, ಎನ್. ಕೃಷ್ಣಮೂರ್ತಿ ಮತ್ತು ವಿ. ಆನಂದ್ ಎಂಬ ಕೇಂದ್ರ ಕಚೇರಿ ಸಿಬ್ಬಂದಿಗಳನ್ನು ಘಟನೆ ನಡೆದ ಪ್ರಯೋಗಾಲಯಕ್ಕೆ ಕಳುಹಿಸಿ ಸಿಸಿ ಟಿವಿಯ ಫೂಟೇಜ್ ತರಲು ಹೇಳಿದ್ದರು. ಆದರೆ ಈ ಇಬ್ಬರೂ ಅಧಿಕಾರಿಗಳು ಪ್ರಯೋಗಾಲಯಕ್ಕೆ ಬಂದಾಗ ದರ್ಪಿಷ್ಟನಂತೆ ವರ್ತಿಸಿದ ಬಾಲಗಂ ಸಿಸಿ ಟಿವಿಯ ಫೂಟೇಜ್ ಪಡೆಯಲು ಅಡ್ಡಗಾಲು ಹಾಕಿದ್ದಲ್ಲದೆ ಅವರಿಬ್ಬರೂ ಆವರಣದಲ್ಲಿ ಯಾವುದೇ ಕ್ರಮ ಕೈಗೊಳ್ಳುವುದಕ್ಕೂ ಆಸ್ಪದ ನೀಡದಂತೆ ಓಡಿಸಿ, ಫೂಟೇಜ್ ನಾಶಪಡಿಸಿದ್ದ.


ಕೊಠಡಿ ಕಿತ್ತಾಟ

ಈ ಘಟನೆ ನಡೆಯುವುದಕ್ಕೂ ಕೆಲ ದಿನಗಳ ಮುನ್ನ ಇಬ್ಬರು ಹಿರಿಯ ಅಧಿಕಾರಿಗಳ ನಡುವೆ ಕಚೇರಿಯ ಕೊಠಡಿಗಾಗಿ ಗುದ್ದಾಟ ನಡೆದು ಹಾದಿರಂಪ ಬೀದಿರಂಪವಾಗಿತ್ತು. ಅದರಲ್ಲಿ ಒಬ್ಬಾತ ಬಾಲಗಂ ಅನ್ನೋದನ್ನು ಬಿಡಿಸಿ ಹೇಳಬೇಕಿಲ್ಲ. ಅಸಲಿಗೆ ಬಾಲಗಂ ಅಲ್ಲಿನ ಮುಖ್ಯ ವೈಜ್ಞಾನಾಧಿಕಾರಿಯಾಗಿದ್ದರೂ ಅದರ ಆಡಳಿತ ಉಸಾಬರಿ ಅವನದಲ್ಲ. ಅದಕ್ಕೋಸ್ಕರ ಮಂಡಳಿ ಬಿ.ಜಿ. ಮೋಹನ್ ಕೃಷ್ಣ ಎಂಬುವವರನ್ನು ಮುಖ್ಯ ಪರಿಸರ ಅಧಿಕಾರಿಯನ್ನಾಗಿ ನೇಮಿಸಿತ್ತು. ನಿಸರ್ಗ ಭವನದಲ್ಲಿದ್ದ ಅಧ್ಯಕ್ಷರ ಕೊಠಡಿಯನ್ನೇ ಆ ನೂತನ ಅಧಿಕಾರಿಯ ಕಾರ್ಯಾಚರಣೆಗೆ ಬಿಟ್ಟುಕೊಡಲಾಗಿತ್ತು. ಇದು ಗೊತ್ತಾದ ಕೂಡಲೇ ಆ ಕೊಠಡಿಗೆ ಲಗ್ಗೆ ಇಟ್ಟ ಬಾಲಗಂ ಅಧ್ಯಕ್ಷರ ಹೆಸರಿನ ನಾಮಫಲಕ ಕಿತ್ತೊಗೆದು ತನ್ನ ನಾಮಫಲಕ ನೇತುಬಿಟ್ಟು ವಕ್ಕರಿಸಿಕೊಂಡಿದ್ದ. ಸ್ವತಃ ಬಾಲ'ಗಂಗಾ'ಧರನ್‌ಗೆ ಪತ್ರ ಬರೆದು, ಕೊಠಡಿ ಬಿಟ್ಟುಕೊಡಲು ಮೋಹನ್ ಕೃಷ್ಣ ಕೇಳಿಕೊಂಡರೂ ಆತ ಕೊಠಡಿಯನ್ನೂ ಕೊಡದೆ ಅವರು ಕರ್ತವ್ಯ ನಿರ್ವಹಿಸಲು ಅಡ್ಡಿಪಡಿಸಿದ್ದ. ಕೊನೆಗೆ ಮುಖ್ಯ ಆಡಳಿತಾಧಿಕಾರಿ ಯವರ ಕಚೇರಿ ಆದೇಶ ಸಂಖ್ಯೆ: ಪಿಸಿಬಿ 36 ಆಡಳಿ 13/353ರ ದಿನಾಂಕ 29.04.2014ರ ಮೇರೆಗೆ ಕೇಂದ್ರ ಕಚೇರಿ ಸಿಬ್ಬಂದಿಗಳೆ ವ್ಯಕ್ತಿಗತವಾಗಿ ಹೋಗಿ ಕೊಠಡಿಯಿಂದ ಬಾಲಗಂನನ್ನು ಓಡಿಸಿ ಮೋಹನ್ ಕೃಷ್ಣರಿಗೆ ಕೊಟ್ಟು ಬಂದಿದ್ದರು. ಪ್ರಯೋಗಾಲಯದ ಯಾವುದೇ ಕಡತಗಳು ಮುಖ್ಯ ಆಡಳಿತಾಧಿಕಾರಿಯಾದ ಮೋಹನ್ ಕೃಷ್ಣ ಅವರ ಮುಖೇನವೇ ನಡೆಸಬೇಕೆನ್ನುವ ನಿಯಮವಿದ್ದರೂ ಮೋಹನ್ ಕೃಷ್ಣಗೆ ಕಡತಗಳನ್ನೆ ಕೊಡದೆ ಅಧಿಕಾರ ಇಲ್ಲದಿದ್ದರೂ ತಾನೇ ಕಡತಗಳನ್ನು ಕ್ಲಿಯರ್ ಮಾಡುತ್ತಿದ್ದ ಬಾಲಗಂಗಾಧರ್ ಮಂಡಳಿಯ ನಿಯಮಗಳನ್ನೆಲ್ಲ ಗಾಳಿಗೆ ತೂರಿ ಮೆರೆದಾಡುತ್ತಿದ್ದ.

ಅಧಿಕಾರ ಮೀರಿ ವರ್ಗ

ಪ್ರಯೋಗಾಲಯದ ವೈಜ್ಞಾನಿಕ ವಿಭಾಗದ ಮುಖ್ಯಸ್ಥ ಬಾಲಗಂಗಾಧರನ್‌ಗೆ ಆಡಳಿತಾತ್ಮಕ ಮತ್ತು ಹಣಕಾಸು ವ್ಯವಹಾರಗಳ ಅಧಿಕಾರಗಳೇ ಇರಲಿಲ್ಲ. ಅಂತಹ ಅಧಿಕಾರ ಇದ್ದದ್ದು ಪ್ರಯೋಗಾಲಯದ ಮುಖ್ಯಸ್ಥ ಮೋಹನ್‌ಕೃಷ್ಣಗೆ. ಅದನ್ನೂ ಮೀರಿ ನಿಸರ್ಗ ಭವನದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಉಪ ವೈಜ್ಞಾನಿಕ ಅಧಿಕಾರಿಗಳಾದ ಸಿ.ಚನ್ನಯ್ಯ, ಎಸ್.ವೈ.ಸಂಪತ್ ಕುಮಾರ್, ಟಿ.ಮುನಿಸ್ವಾಮಿ, ವೈಜ್ಞಾನಿಕ ಅಧಿಕಾರಿಗಳಾದ ವೆಂಕಟೇಶ್ ಮತ್ತು ಪಿ.ಶಿವರುದ್ರಸ್ವಾಮಿ ಅವರಿಗೆ ಮಂಡಳಿಯ ಕೇಂದ್ರ ಕಚೇರಿಗೆ ಹೋಗಿ ವರದಿ ಮಾಡಿಕೊಳ್ಳುವಂತೆ ಮಾರ್ಚ್ 24ರಂದು ದಿಢೀರ್ ಆದೇಶ ಹೊರಡಿಸಿದ್ದ ಬಾಲಗಂಗಾಧರ್ ಅಕ್ಷರಶಃ ಇಲ್ಲಿಯ ಸರ್ವಾಧಿಕಾರಿಯಂತೆಯೇ ವರ್ತಿಸಿದ್ದ. ಜೊತೆಗೆ 10 ವರ್ಷ ಸುದೀರ್ಘ ಸೇವೆಸಲ್ಲಿಸಿದ್ದ ಶಿವರಾಜ್ ಎಂಬ ಹಿರಿಯ ಚಾಲಕನನ್ನು ಹಠಾತ್ತನೆ ವರ್ಗ ಮಾಡಿ ಆ ಜಾಗಕ್ಕೆ ತನಗೆ ಬೇಕಾದ ಮಹೇಶ್ ಜಿ.ಎ ಎನ್ನುವ ಚಾಲಕನನ್ನು ಸ್ವಯಂ ಚಾಲನೆಯಡಿ ನೇಮಿಸಿಕೊಂಡಿದ್ದ.

ಪ್ರಯೋಗಾಲಯದಲ್ಲಿ ಸುಮಾರು 60 ಸಿಬ್ಬಂದಿಗಳಿದ್ದಾರೆ. ಅವರೆಲ್ಲರ ಬಯೋಮೆಟ್ರಿಕ್ ಹಾಜರಿ ವ್ಯವಸ್ಥೆ ರದ್ದುಪಡಿಸಿ, ಹಾಜರಾತಿ ಪುಸ್ತಕಕ್ಕೆ ಸಹಿ ಮಾಡುವ ಹಳೇ ಪದ್ಧತಿಯನ್ನು ಮಾರ್ಚ್ 20ರಂದು ಆದೇಶಿಸಿದ್ದ ಬಾಲಗಂಗಾಧರನ್ ಮಂಡಳಿಗೇ ಸೆಡ್ಡು ಹೊಡೆದಿದ್ದುಂಟು.



ಸಿಬ್ಬಂದಿಗಳ ಹಾಜರಾತಿ ವ್ಯವಸ್ಥೆಯನ್ನು ಬಯೋಮೆಟ್ರಿಕ್ ಸಿಸ್ಟಮ್ ಮೂಲಕ ಕೇಂದ್ರ ಕಚೇರಿಯೇ ನಿಯಂತ್ರಿಸುತ್ತಿತ್ತು, ಅದನ್ನು ರದ್ದು ಮಾಡಿ, ಹಾಜರಾತಿ ಪುಸ್ತಕಕ್ಕೆ ಸಹಿ ಮಾಡಿಸುವ ವ್ಯವಸ್ಥೆ ಜಾರಿಗೊಳಿಸಿದ್ದ ಬಾಲಗಂ ತಿಂಗಳ ಹಾಜರಾತಿ ಕೇಂದ್ರ ಕಚೇರಿಗೆ ರವಾನೆಯಾಗದೆ ವೇತನ ನೀಡಲಿಕ್ಕೇ ತೊಂದರೆ ಉಂಟಾಗುವಂತೆ ಮಾಡಿದ್ದ. ಒಟ್ಟಿನಲ್ಲಿ ಪ್ರಯೋಗಾಲಯ ತನ್ನ ಸಾಮ್ರಾಜ್ಯ, ತಾನೇ ಸರ್ವಾಧಿಕಾರಿ, ಸಿಬ್ಬಂದಿಗಳೆ ಗುಲಾಮರೆನ್ನುವ ದರ್ಪದಲ್ಲಿ ಕೇಂದ್ರ ಕಚೇರಿಗೆ ಕೇರ್ ಮಾಡುವುದಿಲ್ಲ ಎಂಬ ಮೆಸೇಜು ಕಳಿಸುವುದು ಅವನ ಉದ್ದೇಶವಾದಂತಿತ್ತು.

ಪ್ರಯೋಗಾಲಯಕ್ಕೆ ನವೀಕರಣವನ್ನೇ ಮಾಡಿಸಿಲ್ಲ!

ಇಷ್ಟೆಲ್ಲ ಅನಗತ್ಯ ಭಾನಗಡಿ ಸೃಷ್ಟಿಸುತ್ತಿದ್ದ ಬಾಲಗಂಗಾಧರ್ ಮಾಡಬೇಕಾದ ಕೆಲಸಗಳನ್ನೇ ಮಾಡುತ್ತಿರಲಿಲ್ಲ. ಇದಕ್ಕೆ ಪ್ರತ್ಯಕ್ಷ ಉದಾಹರಣೆಯೆಂದರೆ 2009ರ ನಂತರದಿಂದ ಕೇಂದ್ರ ಸರ್ಕಾರದಿಂದ ತನ್ನ ಪ್ರಯೋಗಾಲಯಕ್ಕೆ ಮಾನ್ಯತೆಯನ್ನೇ ಪಡೆದುಕೊಳ್ಳದ್ದು. ಹೌದು, ಕೈಗಾರಿಕೆಗಳು ಹೊರಸೂಸುವ ತ್ಯಾಜ್ಯದಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಪರೀಕ್ಷಿಸಿ, ಪ್ರಮಾಣಪತ್ರ ನೀಡುವ ಮಾಲಿನ್ಯ ನಿಯಂತ್ರಣ ಮಂಡಳಿಯ ಕೇಂದ್ರ ಪರಿಸರ ಪ್ರಯೋಗಾಲಯಗಳು ಪರಿಸರ ಸಂರಕ್ಷಣೆ ಕಾಯ್ದೆ ಪ್ರಕಾರ ಕಾಲಕಾಲಕ್ಕೆ ತಮ್ಮ ಸ್ಥಾಪನೆಯನ್ನು ನವೀಕರಣಗೊಳಿಸಿಕೊಳ್ಳಬೇಕು. ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯ 2009ರ ಜನವರಿಯಲ್ಲಿ ಪರಿಸರ ಪ್ರಯೋಗಾಲಯಗಳ ಸ್ಥಾಪನೆಗೆ ಪರಿಷ್ಕೃತ ಮಾರ್ಗಸೂಚಿ ಪ್ರಕಾರ ಪ್ರಯೋಗಾಲಯಗಳು ಕಡ್ಡಾಯವಾಗಿ ಕೇಂದ್ರ ಪರಿಸರ ಇಲಾಖೆಯಿಂದ ಮಾನ್ಯತೆ ಪಡೆದಿರಬೇಕು, ಅವುಗಳಲ್ಲಿ ಶೈಕ್ಷಣಿಕವಾಗಿ ಅರ್ಹತೆ ಇರುವ ಸಿಬ್ಬಂದಿಯನ್ನೇ ನೇಮಿಸಬೇಕು, ಮಾದರಿಗಳ ಪರೀಕ್ಷೆಗೆ ವೈಜ್ಞಾನಿಕ ಮಾನದಂಡಗಳನ್ನು ಅನುಸರಿಸಬೇಕು, ನಿರ್ದಿಷ್ಟ ಉಪಕರಣಗಳನ್ನು ಕಡ್ಡಾಯವಾಗಿ ಇಟ್ಟಿರಬೇಕು... ಹೀಗೆ ಹಲವು ಷರತ್ತುಗಳಿವೆ. ಅಷ್ಟಾದರು ಪ್ರಯೋಗಾಲಯದ ವೈಜ್ಞಾನಿಕ ಮುಖ್ಯಸ್ಥನಾಗಿದ್ದುಕೊಂಡು ಮಾಡಿಸಬೇಕಾದ ನವೀಕರಣವನ್ನೇ ಆತ ಮಾಡಿಸಿರಲಿಲ್ಲ.

ಈತನ ದರ್ಪದಿಂದ ರೋಸಿಹೋಗಿದ್ದ ಕೆಲ ಸಿಬ್ಬಂದಿಗಳು ಹಲವಾರು ಬಾರಿ ಪರಿಸರ ಮಾಲಿನ್ಯ ಮಂಡಳಿಗೆ ಲಿಖಿತ ದೂರುಗಳನ್ನೂ ನೀಡಿದ್ದರು. ಚಾಲಕ ನೇಮಕಾತಿ ವಿಷಯವಾಗಿ ವಿಚಾರಣೆ ನಡೆಸಲು ಈತನನ್ನು ಕೇಂದ್ರ ಕಚೇರಿಗೆ ಕರೆಸಿದ್ದಾಗ ಅಧ್ಯಕ್ಷನೆದುರೇ ಬಾಯಿಗೆ ಬಂದಂತೆ ಅರಚಾಡಿ, ಮೇಜು ಗುದ್ದಿ ಪೌರುಷ ಹೊರಹಾಕಿದ್ದ. ಅಲ್ಲದೆ ಅದಕ್ಕೆ ಸಂಬಂಧಪಟ್ಟ ಫೈಲನ್ನೇ ಕಚೇರಿ ಸಿಬ್ಬಂದಿಯಿಂದ ಕಿತ್ತುಕೊಂಡು ಹೋಗಿದ್ದನಂತೆ.

ಇಂತಿಪ್ಪ ಬಾಲಗಂ ಪ್ರತಾಪಗಳಿಗೆ ಈಗ ಫುಲ್‌ಸ್ಟಾಪ್ ಬಿದ್ದಿದೆ. ಸಸ್ಪೆಂಡ್ ಆಗಿರುವ ಅವನ ಮೇಲೆ ತನಿಖೆಗೂ ಆದೇಶವಾಗಿದೆ. ಅಪ್ಪಣೆಯಿಲ್ಲದೆ ಬೆಂಗಳೂರು ಬಿಟ್ಟು ಹೊರಹೋಗದಂತೆ ಕಟ್ಟಪ್ಪಣೆಯೂ ಆಗಿದೆ. ಆದರೂ ತನ್ನ ಕಿತಾಪತಿ ಮಾತ್ರ ಕಡಿಮೆ ಮಾಡಿಕೊಂಡಿಲ್ಲ. ತನಗೆ ಗೊತ್ತಿರುವ ಕೆಲ ರಾಜಕೀಯ ನಾಯಕರುಗಳಿಂದ ಒತ್ತಡ ತಂದು, ಅಸ್ತಿತ್ವವೇ ಇಲ್ಲದ ಸಂಘದ ಹೆಸರಲ್ಲಿ ಮಂಡಳಿಗೆ ಲೆಟರ್ ಬರೆದು ಮುಷ್ಕರದ ಬೆದರಿಕೆ ಹಾಕಿ ಒಳ ತೂರಿಕೊಳ್ಳುವ ಲಾಬಿ ನಡೆಸುತ್ತಿದ್ದಾನೆ. ತೊಲಗಿದ ಬಾಲಗಂ ಮತ್ತೆ ವಕ್ಕರಿಸದಿದ್ದರೆ ಸಾಕು ಅಂತ ಅಲ್ಲಿನ ಸಿಬ್ಬಂದಿಗಳೆ ಗುಸುಗುಸು ಮಾತಾಡಿಕೊಳ್ಳುತ್ತಿದ್ದಾರೆ.


–ವರದಿಗಾರ

ಸರ್ಕಾರಿ ಕಚೇರಿಯೇ ಇವನ ಸಂಘದ ಆಫೀಸಂತೆ!

ಇಷ್ಟೆಲ್ಲಾ ಅಪದಾ-ತಪದಾಗಳನ್ನು ಮೈಮೇಲೆ ಎಳೆದುಕೊಂಡು ಸಸ್ಪೆಂಡ್ ಆಗಿರುವ ಬಾಲಗಂಗಾಧರ್ ಆಡಳಿತ ಮಂಡಳಿಯನ್ನು ಬೆದರಿಸಿ ಸಸ್ಪೆಂಡ್ ಆದೇಶವನ್ನು ಹಿಂಪಡೆಯುವಂತೆ ಮಾಡಲು ಒಂದು ಪ್ಲ್ಯಾನ್ ಮಾಡಿದ್ದ. ಈಗ ಅದೇ ಅವನಿಗೆ ಉಲ್ಟಾ ಹೊಡೆಯುವ ಸಾಧ್ಯತೆ ಕಂಡುಬರುತ್ತಿದೆ. 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವೈಜ್ಞಾನಿಕ, ಆಡಳಿತ ಮತ್ತು ಲೆಕ್ಕಪತ್ರ ವಿಭಾಗದ ನೌಕರರ ಕ್ಷೇಮಾಭಿವೃದ್ಧಿ ಸಂಘ' ಎನ್ನುವ ಲೆಟರ್‌ಹೆಡ್ ಪ್ರಿಂಟ್ ಮಾಡಿಸಿಕೊಂಡು ಆ ಸಂಘಕ್ಕೆ ತಾನೇ ಅಧ್ಯಕ್ಷ ಅಂತಲೂ ಘೋಷಿಸಿಕೊಂಡು ತನ್ನ ಸಸ್ಪೆಂಡ್ ಆದೇಶವನ್ನು ಹಿಂಪಡೆಯದಿದ್ದರೆ ಸಂಘದ ನೌಕರರೆಲ್ಲ ಧರಣಿ ಕುಳಿತು ಬಿಡುತ್ತಾರೆ ಎಂಬ ಬೆದರಿಕೆ ಪತ್ರ ಬರೆದಿದ್ದ. ಕೂಲಂಕಷವಾಗಿ ಪರಿಶೀಲಿಸಿದಾಗ ಅಂತಹದ್ದೊಂದು ಸಂಘವೇ ರಿಜಿಸ್ಟರ್ ಆಗಿಲ್ಲ ಎನ್ನುವುದು ತಿಳಿದುಬಂದಿತ್ತು. ಅದಕ್ಕಿಂತಲೂ ಸೋಜಿಗದ ಸಂಗತಿ ಎಂದರೆ ಅದೇ ಲೆಟರ್‌ಹೆಡ್‌ನಲ್ಲಿ ಸಂಘದ ವಿಳಾಸವನ್ನು ನಿಸರ್ಗ ಭವನ, 7ನೇ ಡಿ ಮುಖ್ಯ ರಸ್ತೆ ತಿಮ್ಮಯ್ಯ ರಸ್ತೆ ಶಿವನಗರ, ರಾಜಾಜಿನಗರ, ಬೆಂಗಳೂರು-10 ಎಂದು ನಮೂದಿಸಲಾಗಿದೆ. ಇದು ಸರ್ಕಾರಿ ಪ್ರಯೋಗಾಲಯದ ವಿಳಾಸ! ಯಾವ ಅನುಮತಿಯೂ ಇಲ್ಲದೆ, ಮಂಡಳಿಗೆ ಮಾಹಿತಿಯನ್ನೂ ನೀಡದೆ ಸರ್ಕಾರಿ ಸ್ಥಳವನ್ನು ಸಂಘದ ಆಫೀಸ್ ಮಾಡಿಕೊಂಡದ್ದು 'ಬಾಲಗಂ'ಗೆ ದೊಡ್ಡ ಮುಳುವಾಗುವ ಚಾನ್ಸ್ ಇದೆ.








ರವೀಂದ್ರನಾಥ್ ಪಜೀತಿಯ ನಿಜ ಮರ್ಮ

ತೋಳ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲೆಂಬಂತೆ ಕರ್ನಾಟಕ ಕಂಡ ನಿಷ್ಠುರಿ ಪೊಲೀಸ್ ವರಿಷ್ಠರಲ್ಲೊಬ್ಬರಾದ ಎಡಿಜಿಪಿ ರವೀಂದ್ರನಾಥ್ ವಿರುದ್ಧ ಅಷ್ಟು ದಿಕ್ಕುಗಳಿಂದಲೂ ಗದಾ ಪ್ರಹಾರ!

ರವೀಂದ್ರನಾಥ್ ಎಷ್ಟೇ ಪ್ರಾಮಾಣಿಕರಾಗಿದ್ದರೂ 'ಓಬೋಪೆ' ಕಾಫಿ ಶಾಪ್ ಸೆಕ್ಸ್ (!) ಫೋಟೋ ಪ್ರಸಂಗವನ್ನು ಅವರ ಕೆರಿಯರ್ ಹಿನ್ನೆಲೆಯಿಂದ ಪ್ರತ್ಯೇಕವಾಗಿಸಿಯೇ ನೋಡಬೇಕು ಎಂದು ಟಿವಿ ಕ್ರಿಮಿನಾಲಜಿಸ್ಟ್ ಓರ್ವ ಸುತ್ತೋಲೆ ಹೊರಡಿಸಿದ್ದಾನೆ. ಮತ್ತೊಂದು ಟಿವಿ ಪ್ರಭೃತಿಯೋರ್ವನ ಪ್ರಕಾರ ರವೀಂದ್ರನಾಥ್ ತಮ್ಮ ಸುತ್ತಣ ಮೀಡಿಯಾ ಕಾಳಜಿಯನ್ನೆಲ್ಲ ತಮ್ಮ ಅನಾಚಾರವನ್ನು ಮುಚ್ಚಿಕೊಳ್ಳಲು ಬಳಸಿಕೊಳ್ಳುತ್ತಿದ್ದಾರೆ.



ಇದಿಷ್ಟೇ ಅಲ್ಲ; ರವೀಂದ್ರನಾಥ್ ಮಾಡಬಾರದ್ದು ಮಾಡಿದ್ದರಿಂದಲೇ ಮಾತುಮಾತಿಗೆ ತನ್ನನ್ನು ಕಮೀಷನರ್ ಬಿರಾದ್‌ಕರ್ ಮತ್ತು ಗುಪ್ತವಾರ್ತೆಯ ಎಡಿಜಿಪಿ ಎ.ಎಂ. ಪ್ರಸಾದ್ ದಲಿತ ಎಂದು ಕರೆದು ಜಾತಿನಿಂದನೆ ಮಾಡಿದ್ದಾರೆಂದು ಬೊಬ್ಬೆ ಹಾಕುತ್ತಿದ್ದಾರೆಂಬುದು ಮಗದೊಂದು ಟಿವಿಯ ಸಂಶೋಧನೆಯಾದರೆ ಇನ್ನೊಬ್ಬ ಸಂಪಾದಕ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ರವೀಂದ್ರನಾಥ್ ಕಂಡರೆ ಇಷ್ಟವಿಲ್ಲ ಏಕೆಂದರೆ ಸಿದ್ದುಗೆ ದಲಿತರ ತಲೆ ಕಂಡರೇನೇ ಆಗಿ ಬರೋಲ್ಲ!


ಹೀಗೆ ತಲೆಗೊಂದು, ತೀಟೆಗೊಂದು ಕುಚೇಷ್ಟೆ, ಕುಚೋದ್ಯಗಳ ಕೇಂದ್ರ ಬಿಂದುವಾಗಿರುವ ಕೆಎಸ್‌ಆರ್‌ಪಿಯ ಎಡಿಜಿಪಿ ರವೀಂದ್ರನಾಥ್ ಈಗ ಅಕ್ಷರಶಃ ಸೂತ್ರ ಹರಿದ ಪತಂಗ.

ಕಾಫಿ ಶಾಪೊಂದಕ್ಕೆ ಹೋಗಿ ಎದುರು ಕೂತಿದ್ದ ಯುವತಿಯರ ಫೋಟೋ ತೆಗೆಯುವುದು ರಾಜ್ಯದ ಉನ್ನತ ಪೊಲೀಸ್ ಅಧಿಕಾರಿಯೊಬ್ಬ ಮಾಡಬಹುದಾದ ಚೇಷ್ಟೆಯಂತೂ ಅಲ್ಲವೇ ಅಲ್ಲ. ಹಾಗೊಮ್ಮೆ ಫೋಟೋ ತೆಗೆದಿದ್ದರೆ ಅದು ಅಕ್ಷಮ್ಯವೇ.

ಆ ಸೋಮವಾರ

ಎಡಿಜಿಪಿ ರ್‍ಯಾಂಕಿನ ಪೊಲೀಸ್ ಅಧಿಕಾರಿಯೊಬ್ಬ ಯಾರೋ ಪೋಲಿ-ಪಕಾಳಿಯಂತೆ ಕಾಫಿ ಶಾಪಿನಲ್ಲಿ ಎದುರು ಕೂತ ಯುವತಿಯರ ಫೋಟೋ ತೆಗೆಯುತ್ತಾನೆಂದರೆ ಆತನಿಗೆ ಶಿಕ್ಷೆಯಾಗಲೇಬೇಕು. ಅದರಲ್ಲೂ ಪೊಲೀಸ್ ಅಧಿಕಾರಿಯಾಗಿ ಕಾನೂನಿನ ಪರಿವೆಯಿದ್ದೂ ತಪ್ಪೆಸಗುತ್ತಾನೆಂದರೆ ಅದು ಅಕ್ಷಮ್ಯವೇ ಸರಿ. ಆದರೆ ಕಾಫಿ ಶಾಪಿನಲ್ಲಿ ರವೀಂದ್ರನಾಥ್ ಅದಿನ್ನೆಂತಹ 'ಅಶ್ಲೀಲ' ಫೋಟೋ ತೆಗೆದಿರಬಹುದು? ಅವರು ಅಂತಹ ಫೋಟೋ ತೆಗೆದಿದ್ದರು ಎಂಬುದೇ ಇನ್ನೂ ಸ್ಪಷ್ಟವಾಗಿಲ್ಲ.

ಘಟನೆಯನ್ನೇ ನೋಡುವುದಾದರೆ; ಇಡೀ ಪ್ರಕರಣವೇ



ವಿಚಿತ್ರ ಮತ್ತು ಅನುಮಾನಾಸ್ಪದ. ರವೀಂದ್ರನಾಥ್ ಬೇರೆ ಪೊಲೀಸ್ ಅಧಿಕಾರಿಗಳಂತಲ್ಲ, ಇದ್ದುದರಲ್ಲಿ ಪ್ರಾಮಾಣಿ[...] ಮತ್ತು ನಿಷ್ಠುರಿ. ಮೂಲತಃ ಆಂಧ್ರ ಪ್ರದೇಶದ ರವೀಂದ್ರನಾಥ್ ಹಿನ್ನೆಲೆಯಿಂದ ನಿರ್ಗತಿಕರೇನಲ್ಲ. ಇವರ ತಂ[...] ಮಹೇಂದ್ರನಾಥ್ ಆಂಧ್ರದ ಎನ್.ಟಿ. ರಾಮರಾವ್ ಸಚಿ[...] ಸಂಪುಟದಲ್ಲಿ ಮಂತ್ರಿಯಾಗಿದ್ದವರು. ಜಾತಿಯಿಂದ ದಲಿತರು.

ಕರ್ನಾಟಕ ಕೇಡರ್‌ನ ಐಪಿಎಸ್ ಅಧಿಕಾರಿಯಾ[...] ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿಕೊಂಡು ಬಂದ ರವೀಂದ್ರನಾಥ್ ಎಲ್ಲೂ ಹೆಸರು ಕೆಡಿಸಿಕೊಂಡವರ[...] ತನ್ನ ನಿಷ್ಠುರತೆ, ಮುಂಗೋಪ ಮತ್ತು ಅತಿ ಶಿಸ್ತಿನಿಂದಾಗಿಯೆ[...] ಅನೇಕ ಸಹೋದ್ಯೋಗಿಗಳ ಕೆಂಗಣ್ಣಿಗೆ ಗುರಿಯಾಗಿ[...] ರವೀಂದ್ರನಾಥ್ ಸ್ವಭಾವದಲ್ಲಿ ಜಮದಗ್ನಿ ಎಂದ[...] ಚಾಲ್ತಿಯಲ್ಲಿದ್ದವರು. 'ಸಾಹೇಬ್ರು ತುಂಬಾ ಸ್ಟ್ರಿಕ್ಟು' ಎಂದ[...] ಹೋಗಿಬಂದಲ್ಲೆಲ್ಲ ಅನ್ನಿಸಿಕೊಳ್ಳುತ್ತಿದ್ದ ರವೀಂದ್ರನಾಥ್ ಹೆಸ[...] ಮೊದಲ ಸಾರಿ ಕೇಳಿಬಂದದ್ದೇ ಅವರು ಮೈಸೂರಿ[...] ಕಮೀಷನರ್ ಆದಮೇಲೆ.

ಡಿಜಿ ಗಾದಿಯ ಪೈಪೋಟಿಗೆ

ಮೈಸೂರಿನಲ್ಲಿದ್ದಷ್ಟೂ ದಿನ ಪ್ರಾಮಾಣಿ[...] ಅಧಿಕಾರಿಯೆಂದೇ ಚಾಲ್ತಿಯಲ್ಲಿದ್ದ ರವೀಂದ್ರನಾಥ್‌ಗೆ ಇಬ್ಬ[...] ವಯಸ್ಸಿಗೆ ಬಂದ ಹೆಣ್ಣು ಮಕ್ಕಳಿದ್ದಾರೆ ಮತ್ತು ವಯಸ್ಸಿ[...] ಐವತ್ತು, ಪತ್ನಿ ಕೂಡ ಜೊತೆಗೇ ಇದ್ದಾರೆ. ಸ[...] ಎಡಿಜಿಪಿಯಾಗಿ ಬಡ್ತಿ ಪಡೆದು ಕೆಎಸ್‌ಆರ್‌ಪಿ[...] ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿರುವ ರವೀಂದ್ರನಾ[...] ಇವತ್ತಲ್ಲ ನಾಳೆ ಪೊಲೀಸ್ ಕಮೀಷನರ್ ಹುದ್ದೆಗ[...] ಅಥವಾ ಪೊಲೀಸ್ ಮಹಾ ನಿರ್ದೇಶಕ ಪದವಿಗೆ[...] ನೇಮಕವಾಗಬೇಕಾದವರೆ. ಏಕೆಂದರೆ ಜ್ಯೇಷ್ಠತೆಯ[...] ರವೀಂದ್ರನಾಥ್ ಹಿರಿಯ ಐಪಿಎಸ್‌ಗಳಾ[...] ಸುನೀಲ್‌ಕುಮಾರ್, ಎಂ.ಎನ್. ರೆಡ್ಡಿ, ಆಡಳಿತ ವಿಭಾಗ[...] ಎಡಿಜಿಪಿ ಅಲೋಕ್ ಮೋಹನ್ ಮತ್ತು ಹಾಲಿ ಬೆಂಗಳೂ[...]

12ನೇ ಪುಟ[...]

ಕಾಫಿಶಾಪ್ ಷಡ್ಯಂತ್ರದ ನಾನಾ ಪ್ರಶ್ನೆಗಳು

ಮೇ 26ರ 'ಓಬೋಪೆ' ಕಾಫಿಶಾಪ್‌ನ ಇಡೀ ಪ್ರಸಂಗವೇ ವಿಚಿತ್ರವಾಗಿದೆ. ಯಾವ ಯುವತಿಯರ ಫೋಟೋಗಳನ್ನು ರವೀಂದ್ರನಾಥ್ ತಮ್ಮ ಮೊಬೈಲಿನಿಂದ ಚಿತ್ರೀಕರಿಸಿದರೆಂದು ಹೈಗ್ರೌಂಡ್ಸ್ ಪೊಲೀಸರು ಆರೋಪಿಸುತ್ತಾರೋ ಆ ಯುವತಿಯರ ಪೈಕಿ ದೂರು ಕೊಟ್ಟವಳು ಒಬ್ಬಳು ಪತ್ರಕರ್ತೆ!

ಈಕೆ ಟೈಮ್ಸ್ ಗ್ರೂಪಿನಲ್ಲಿ ವರದಿಗಾರ್ತಿಯೋ, ಜಾಹಿರಾತು ವಿಭಾಗದ ಏಜೆಂಟಳೋ, ಘಟಾನುಘಟಿ ಬಿಲ್ಡರುಗಳ ದೈತ್ಯ ಅಪಾರ್ಟ್‌ಮೆಂಟು ಹೌಸಿಂಗ್, ಪ್ರಾಜೆಕ್ಟುಗಳ ಜಾಹಿರಾತಿಗಾಗಿ ಪೊಲೀಸ್ ಉನ್ನತಾಧಿಕಾರಿಗಳ ಮೂಲಕ ಬಿಲ್ಡರ್‌ಗಳ ಮೇಲೆ ಪ್ರಭಾವ ಬೀರುವಾಕೆಯೋ ಬಲ್ಲವರಿಲ್ಲ.-ರಿಯಲ್ ಎಸ್ಟೇಟ್ ಬಿಜಿನೆಸ್ ಜಾಹಿರಾತಿಗೂ ಟೈಮ್ಸ್ ಗ್ರೂಪಿಗೂ ಮತ್ತು ಪೊಲೀಸ್ ವ್ಯವಸ್ಥೆಗೂ ಇರುವ ಸಂಬಂಧದ ಯಾವ ಕೊಂಡಿಯಾಗಿ ಈಕೆ ಇದ್ದಳೋ ಬಲ್ಲವರ್‍ಯಾರು?

ಹಾಗೊಮ್ಮೆ ರವೀಂದ್ರನಾಥ್ ಆಕೆಯ ಫೋಟೋ ತೆಗೆದಿದ್ದರೆ ಅದನ್ನು ಪ್ರಶ್ನಿಸಬೇಕಿದ್ದದ್ದು ಆಕೆಯೆ. ಆದರೆ ಏಕಾಏಕಿ ಬಾಲ್ಕನಿಯಿಂದ ಶ್ರೀಧರ್ ಎಂಬಾತನೊಬ್ಬ ಇಳಿದುಬಂದಿದ್ದೇ ನೀನ್ಯಾಕೆ ಫೋಟೋ ತೆಗೆದೆ ಎಂದು ರವೀಂದ್ರನಾಥ್ ಮೇಲೆ ಏರಿಹೋಗುತ್ತಾನೆ. ತನಗೆ ಸಂಬಂಧವಿಲ್ಲದ, ಯಾರೋ ಅಪರಿಚಿತ ಯುವತಿಯ ಫೋಟೋ ಅನ್ನು ಇನ್ನಾರೋ ಅಪರಿಚಿತ ಆಸಾಮಿ ತನ್ನ ಮೊಬೈಲಿನಲ್ಲಿ ತೆಗೆದ ಮಾತ್ರಕ್ಕೆ ಇಷ್ಟೊಂದು ತಲೆಕೆಡಿಸಿಕೊಂಡು ಏಕಾಏಕಿ ಆತನ ಮೇಲೆ ಹಲ್ಲೆ ನಡೆಸುವ ಮಟ್ಟಕ್ಕೆ ಯಾರೂ ಇಳಿಯುವುದಿಲ್ಲ.

ಏಕೆಂದರೆ ಹಲ್ಲೆ ಮಾಡಿದ ಆಸಾಮಿಗೆ ಆಕೆ ಸಂಬಂಧಿಯಾಗಲಿ, ಪರಿಚಿತಳಾಗಲಿ ಅಲ್ಲ. ತೆಗೆದ ಫೋಟೋ ಕೇವಲ ವ್ಯಕ್ತಿ ಚಿತ್ರವಾಗಿತ್ತೇ ಹೊರತು ಅಶ್ಲೀಲ ಚಿತ್ರವಾಗಿಲ್ಲ. ಆದರೂ ಏಕಾಏಕಿ ಬಂದವನೇ ಏಕೆ ಹಲ್ಲೆ ನಡೆಸುತ್ತಾನೆ? ಜೊತೆಗೆ ಮೊಬೈಲ್ ಮಾತ್ರವಲ್ಲದೆ ರವೀಂದ್ರನಾಥ್ ಅವರ ಪರ್ಸ್ ಅನ್ನೂ ಏಕೆ ತೆಗೆದಿಟ್ಟುಕೊಳ್ಳುತ್ತಾನೆ?

ಇದೇ ಕಾಫಿಶಾಪ್ ಪ್ರಸಂಗದ ಅತೀ ಮುಖ್ಯ ಪ್ರಶ್ನೆಯಾದರೆ ಶ್ರೀಧರ್ ಎಂಬಾತನ ಹಿನ್ನೆಲೆಯಂತೂ ಇನ್ನೂ ನಿಗೂಢ. ರವೀಂದ್ರನಾಥ್ ಪ್ರಕಾರ ಆತ ಕಮೀಷನರ್ ಬಿರಾದ್‌ಕರ್‌ರ ಬಾತ್ಮೀದಾರನಾದರೆ, ಬಿರಾದ್‌ಕರ್ ಆತ ನಿವೃತ್ತ ನೌಕಾದಳದ ಅಧಿಕಾರಿಯೆನ್ನುತ್ತಾರೆ. ಅನಕ್ಷರಸ್ಥನಾಗಿದ್ದರೆ ಆ ಮಾತು ಬೇರೆ. ವಿದ್ಯಾವಂತ ಮತ್ತು ಕಾನೂನಿನ ಪರಿಜ್ಞಾನವನ್ನು ಹೊಂದಿರುವ ಶ್ರೀಧರ್ ಕಾನೂನುರೀತ್ಯ ರವೀಂದ್ರನಾಥ್‌ರನ್ನು ಪೊಲೀಸಿಗೊಪ್ಪಿಸಬೇಕೇ ಹೊರತು ತಾನೇ ಹಲ್ಲೆ ನಡೆಸುವುದಾಗಲಿ, ಪರ್ಸ್ ಕಿತ್ತುಕೊಳ್ಳುವುದಾಗಲಿ ಮಾಡುವಂತಿಲ್ಲ. ಮಾಡಿದರೆ ಅದು ಕೂಡ ಅಪರಾಧವೆ.


ವಿಚಿತ್ರವೆಂದರೆ ಇದೇ ಶ್ರೀಧರ್ ಮೇಲೆ ಬಿದ್ದು ಎದುರು ಕೂತಿದ್ದ ಯುವತಿಯರನ್ನು



ರವೀಂದ್ರನಾಥ್ ವಿರುದ್ಧ ಎತ್ತಿ ಕಟ್ಟುತ್ತಾನೆ. ಆ ಯುವತಿ ಕೂಡ ರವೀಂದ್ರನಾಥ್ ಕಪಾಳಕ್ಕೆ ಬಾರಿಸುತ್ತಾಳೆ. ಅದೇ ವ್ಯಾಪ್ತಿಯ ಡಿಸಿಪಿ ರವಿಕಾಂತೇಗೌಡರಿಗೆ ಫೋನ್ ಮಾಡುತ್ತಾಳೆ ಮತ್ತು ಸ್ಥಳಕ್ಕೆ ಸಂಬಂಧಪಟ್ಟ ಠಾಣಾ ವ್ಯಾಪ್ತಿಯಿಂದ ಹೊರತಾದ ಸಂಬಂಧವೇ ಇಲ್ಲದ ಪಕ್ಕದ ಠಾಣೆಯ ಎಸ್.ಐ. ರವಿಯನ್ನು ಕಳುಹಿಸುತ್ತಾರೆ. ಯಾರೇ ಸಬ್ ಇನ್ಸ್‌ಪೆಕ್ಟರ್ ಏಕಾಏಕಿ ಬಂದಿದ್ದೇ ಕಪಾಳಕ್ಕೆ ಬಾರಿಸುವ ಹೀನಕೃತ್ಯ ಆದಾಗಿರಲಿಲ್ಲ. ತಾನು ಎಡಿಜಿಪಿ ಎಂದರೂ ಲೆಕ್ಕಿಸದೆ ಥರ್ಡ್‌ರೇಟ್ ಕ್ರಿಮಿನಲ್‌ನಂತೆ ಎಳೆದೊಯ್ಯುವ ಆಗತ್ಯವೇ ಇರಲಿಲ್ಲ.

ಹಾಗೇ ರವೀಂದ್ರನಾಥ್‌ರನ್ನು ಠಾಣೆಗೆ ಎಳೆದೊಯ್ದ ಪೊಲೀಸರು ಅವರ ಮೇಲೆ ಹಲ್ಲೆ ನಡೆಸಿ ಪರ್ಸ್ ಕಿತ್ತುಕೊಂಡ ಶ್ರೀಧರ್‌ನನ್ನು ಕಾಟಾಚಾರಕ್ಕೂ ಠಾಣೆಗೊಯ್ದಿಲ್ಲ. ಆತನಿಂದ ಪರ್ಸ್ ಅನ್ನು ಸಂಜೆಯ ಹೊತ್ತಿಗೆ ಕಬ್ಬನ್‌ಪಾರ್ಕ್ ಠಾಣೆಗೆ ತರಿಸುತ್ತಾರೆ. ಪತ್ರಕರ್ತೆಯಿಂದ ಸಂಜೆ ಹೊತ್ತಿಗೆ 'ಅಪರಿಚಿತ' ಎಂದು ನಮೂದಿಸಿ ದೂರು ದಾಖಲಿಸುತ್ತಾರೆ. ತದನಂತರ ತನ್ನ ಮೊಬೈಲಿನ ಸಿಮ್ ಕಾರ್ಡ್ ನೀಡುವಂತೆ ಠಾಣೆಯಲ್ಲಿ ರವೀಂದ್ರನಾಥ್ ಒತ್ತಾಯಿಸಿದ್ದನ್ನೇ ದೊಡ್ಡ ದುರಾಚಾರವೆಂಬಂತೆ ಯಾರೋ ವೀಡಿಯೋ ಚಿತ್ರಿಸಿಕೊಳ್ಳುತ್ತಾರೆ.

ಕಾಫಿಶಾಪ್‌ನ ದೃಶ್ಯಾವಳಿಯನ್ನು ಮಾತ್ರ ಬಚ್ಚಿಟ್ಟು ಠಾಣೆಯಲ್ಲಿ ರವೀಂದ್ರನಾಥ್ ಕೂಗಾಡಿದ್ದನ್ನು ಟೀವಿಗಳಿಗೆ ಒದಗಿಸುವ ಪೊಲೀಸರ ಖಾಕಿ ಕೌಶಲ್ಯ ರವೀಂದ್ರನಾಥ್ ವಿರುದ್ಧ ಮಾತ್ರವೇ ಏಕೆ ಪರಿಣಾಮಕಾರಿಯೋ ಅರ್ಥವಾಗುತ್ತಿಲ್ಲ.



ಕಾಂಗ್ರೆಸ್ ಎಂಬ ಮುಳ್ಳಿನ ಗಿಡದಲ್ಲಿ ಕಪ್ಪು ಗುಲಾಬಿ


ರಾಷ್ಟ್ರ ರಾಜಕಾರಣದಲ್ಲಿ ಮೋದಿಯೆಂಬ ...ಳ್ಳಿನಗಿಡ ಎಲ್ಲೆಡೆ ತನ್ನ ಕದಂಬ ಬಾಹುಗಳನ್ನು ...ಚುತ್ತಿದ್ದರೆ ಖರ್ಗೆಯೆಂಬ ಕಪ್ಪು ಗುಲಾಬಿಯೊಂದು ...ಸ್ಥದ ನೈಜ ಪ್ರಜಾಪ್ರಭುತ್ವವಾದಿಗಳಲ್ಲಿ ಸಣ್ಣ ಭರವಸೆಯ ... ಬೆಳಕನ್ನು ಸೂಸುತ್ತಿದೆ. ಕರ್ನಾಟಕಕ್ಕೆ ಒಂದರ್ಥದಲ್ಲಿ ...ಎ ಅದೃಷ್ಟ ಮತ್ತು ದುರಾದೃಷ್ಟಗಳ ಮಿಶ್ರಫಲ.

ಕರ್ನಾಟಕದಲ್ಲಿ 17, ರಾಷ್ಟ್ರಮಟ್ಟದಲ್ಲಿ 280 ...ಂಗಳನ್ನು ಪಡೆದ ಮೋದಿ ಹಿಟ್ಲರ್ ಆಗುವ ಭಯ ...ದುದೆಯಾದರೆ ಖರ್ಗೆ ಎಂಬ ಜನ್ಮ ಹೋರಾಟಗಾರನೊಬ್ಬ ...ಪಕ್ಷ ನಾಯಕನ ಸ್ಥಾನದತ್ತ ಹೊರಟಿರುವುದು ಒಂದು ...ಕ ಸೂಚನೆ. ಪ್ರಖರ ಕೋಮುವಾದಿ ಪ್ರಧಾನಿ ವಿರುದ್ಧ ...ಷ್ಕಳಂಕ ರಾಜಕೀಯ ಚಾರಿತ್ರ್ಯದ ಖರ್ಗೆಯಂತವರು ...ವುದು ಒಂದು ಸವಾಲೇ ಸರಿ. ಹಿಂದುಳಿದ ವರ್ಗದ ...ನಿಯ ವಿರುದ್ಧ ದಲಿತ ಪ್ರತಿಪಕ್ಷ ನಾಯಕನನ್ನು ಅಖಾಡಕ್ಕೆ ...ಸುವುದರ ಮೂಲಕ ಕಾಂಗ್ರೆಸ್ ಹೈಕಮಾಂಡ್ ಒಂದೇ ...ಲ್ಲಿ ಎರಡು ಹಕ್ಕಿ ಹೊಡೆಯುವ ಸಾಹಸಕ್ಕೆ ಕೈ ...ದೆ. ಎಲ್ಲರಿಗೂ ಗೊತ್ತಿರುವಂತೆ ದೇಶದ ಯಾವುದೇ ...ಕ್ಕೆ ಹೋದರೂ ನಿಚ್ಚಳವಾಗಿ ಸಿಗುವ ವರ್ಗಗಳೆಂದರೆ ...ಹ್ಮಣ, ಮುಸ್ಲಿಂ ಹಾಗೂ ದಲಿತರು. ಪ್ರಥಮ ಬಾರಿಗೆ ...ಪಿಯಲ್ಲಿ ಬ್ರಾಹ್ಮಣರಿಂದ ರಾಜಕೀಯ ಆದಿಪತ್ಯ ...ಪ್ಪಿದೆ. ಹಿಂದುಳಿದ ವರ್ಗದ ನರೇಂದ್ರ ಮೋದಿ ದೇಶದ ...ಾನಿಯಾಗಿದ್ದಾರೆ. ಮುಸ್ಲಿಂರ ಪಾಲಿಗೆ ಅನಿವಾರ್ಯ ...ವಾಗಿದ್ದ ಕಾಂಗ್ರೆಸ್ ಸೋತು ಸುಣ್ಣವಾಗಿದೆ. ಇಂತಹ ... ಧ್ರುವೀಕರಣದಲ್ಲಿ ದೇಶದ ಬಹುಸಂಖ್ಯಾತ ದಲಿತರು ...ಕೀಯ ಅವಕಾಶವಂಚಿತರಾಗಿದ್ದಾರೆ. ಬಾಬು ...ಜೀವನರಾಮ್, ಮಾಜಿ ಸ್ಪೀಕರ್ ಮೀರಾಕುಮಾರ್‌ರನ್ನು ...ರತುಪಡಿಸಿದರೆ ಯಾವುದೇ ದಲಿತ ನಾಯಕ ...ಮಟ್ಟದಲ್ಲಿ ಈ ದೇಶದ ಸರ್ಕಾರ ಅಥವಾ ರಾಷ್ಟ್ರೀಯ ...ವೊಂದರ ನಾಯಕನಾದ ಉದಾಹರಣೆ ಇಲ್ಲ. ಒಂದೆಡೆ ...ಳುನಾಡಿನ ಜಯಲಲಿತ, ಪಶ್ಚಿಮ ಬಂಗಾಳದ ಮಮತಾ, ...ನ್ ಪಟ್ನಾಯಕ್ ಸೇರಿಕೊಂಡು ವಿರೋಧ ಪಕ್ಷದ ...ದ ಮೇಲೆ ಕಣ್ಣಿಟ್ಟಿದ್ದಾರೆ. ಕಾಂಗ್ರೆಸ್ ದಲಿತನಾಯಕ ...ಯವರನ್ನು ತನ್ನ ಸಂಸದೀಯ ಪಕ್ಷದ ನಾಯಕನಾಗಿ ...ಕ ಮಾಡಿರುವುದರಿಂದ ಬಹುತೇಕ ಪಕ್ಷಗಳು ಖರ್ಗೆ ... ನಿಲ್ಲುವುದು ಖಚಿತ. ಯಾವುದೇ ರಾಜಕೀಯ ...ವಾದರೂ ದಲಿತರನ್ನು ಸಾಮಾನ್ಯಕ್ಕೆ ಎದುರು ...ಕೊಳ್ಳುವ ರಿಸ್ಕ್ ತೆಗೆದುಕೊಳ್ಳುವುದಿಲ್ಲ. ಹೀಗಾಗಿ ...ಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆಗೆ ಬಿಜೆಪಿ ಮೈತ್ರಿಕೂಟ ...ರತುಪಡಿಸಿ ಬೇರೆಲ್ಲ ಪಕ್ಷಗಳು ಬೆಂಬಲ ನೀಡುವ ...ಕ್ಯತೆಯೇ ಹೆಚ್ಚು. ಮೋದಿಯಂಥ ನಿರಂಕುಶ ಪ್ರಧಾನಿ ...ುದ್ಧ 45 ವರ್ಷಗಳ ತನ್ನ ರಾಜಕೀಯ ಜೀವನದಲ್ಲಿ ...ದೇಒಂದು ಕಪ್ಪು ಚುಕ್ಕೆ ಇಲ್ಲದ ಸ್ಥಿತಪ್ರಜ್ಞ ದಲಿತ ...ಖಂಡನೊಬ್ಬನು ನಿಲ್ಲಿಸುವುದರಿಂದ ಒಂದೆಡೆ ಸಾಮಾಜಿಕ ...ಯದ ಪರ ನಿಂತಂತೆಯೂ ಆಯ್ತು, ಮತ್ತೊಂದೆಡೆ ...ಪಕ್ಷ ಸ್ಥಾನವನ್ನು ಪಡೆದಂತೆಯೂ ಆಯ್ತು; ಬಹುಶಃ ... ಕಾಂಗ್ರೆಸ್ ಲೆಕ್ಕಾಚಾರವಿರಬಹುದು.

...ನ್ನು ವ್ಯಕ್ತಿ ವಿಷಯಕ್ಕೆ ಬಂದರೆ ಕರ್ನಾಟಕದ ...ಕೀಯ ಇತಿಹಾಸದಲ್ಲಿ ಸೋಲಿಲ್ಲದ ಸರದಾರ ಅಂತಲೇ ... ಗುರುತಿಸಿಕೊಂಡಂತವರು. ನಿರಂತರವಾಗಿ ಒಂಭತ್ತು ... ವಿಧಾನಸಭೆಗೆ, ನಂತರ ಎರಡು ಬಾರಿ ಲೋಕಸಭೆಗೆ ...ೇ ಪಕ್ಷದಿಂದ ಆಯ್ಕೆಯಾದವರು ಖರ್ಗೆ. 1972ರಲ್ಲಿ ...ವಾದ ಅವರ ರಾಜಕೀಯ ಪಯಣದಲ್ಲಿ 32 ವರ್ಷ ...ವರಾಗಿ, 6 ವರ್ಷ ಪ್ರತಿಪಕ್ಷ ನಾಯಕರಾಗಿ, ಸುಮಾರು ...ವರ್ಷಗಳ ಕಾಲ ಕೇಂದ್ರ ಸಚಿವರಾಗಿ ಜವಾಬ್ದಾರಿ ...ಯಿಸಿದ್ದಾರೆ. ಆದರೆ ಈ ಹಾದಿಯಲ್ಲಿ ಒಂದೇ ಒಂದು ...ಡಲ್ ಕೂಡ ಇಲ್ಲ, 15 ಸಾವಿರ ದಿನ ಒಂದಲ್ಲ ...ಿ ಹುದ್ದೆಯಲ್ಲಿದ್ದರೂ ಭ್ರಷ್ಟಾಚಾರದ ಭೂತ ಇವರತ್ತ ...ದಿಲ್ಲ.

1942ರಲ್ಲಿ ಕರ್ನಾಟಕದ ಬೀದರ್ ಜಿಲ್ಲೆ ಭಾಲ್ಕಿ ...ೂಕಿನ ಕುಗ್ರಾಮವೊಂದರಲ್ಲಿ ಹುಟ್ಟಿದ ಖರ್ಗೆ ತಮ್ಮ ...ಮೆಗೆ ತಕ್ಕ ಪ್ರತಿಫಲ ಪಡೆದವರೆ ಅಲ್ಲ. ವೀರೇಂದ್ರ ...ಲರ ಪಡಸಾಲೆಯಲ್ಲೇ ರಾಜಕೀಯಕ್ಕೆ ಕಾಲಿಟ್ಟ ...ನ್ನು ಗುರುತಿಸಿದ್ದು ದೇವರಾಜು ಅರಸು. ಶಾಸಕರಾಗಿ ...ಮಿಟ್ಕಲ್‌ನಿಂದ ಗೆದ್ದು ಬಂದ ಖರ್ಗೆ ತದನಂತರ ...ಮುಖ್ಯಮಂತ್ರಿಗಳ ಬಳಿಯೂ ಸಚಿವರಾಗಿ ದುಡಿದರು.

...ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ಗೆ ಇವತ್ತು ಇರೋ ಸ್ಥಿತಿ ...ಟಕದಲ್ಲಿ 1999ರಲ್ಲೇ ಎದುರಾಗಿತ್ತು. ಕಾಂಗ್ರೆಸ್ ...ಗಳದಿಂದ ಬಸವಳಿದಿದ್ದ ರಾಜ್ಯ ಕಾಂಗ್ರೆಸ್ ಕೇವಲ ...ಸಕರಷ್ಟನ್ನೇ ಗೆಲ್ಲಿಸಿಕೊಳ್ಳಲು ಸುಸ್ತಾಗಿತ್ತು. ಪ್ರತಿಪಕ್ಷ ...ಾನಕ್ಕೂ ಕಾಂಗ್ರೆಸ್‌ಗೆ ದಕ್ಕಿರಲಿಲ್ಲ. ಅಂತಹ ದಯನೀಯ ...ಲ್ಲಿ ಕಾಂಗ್ರೆಸನ್ನು ಮುನ್ನಡೆಸಿ ನಂತರ ಚುನಾವಣೆಯಲ್ಲಿ ... ಕಾಂಗ್ರೆಸ್ ಅಭ್ಯರ್ಥಿಗಳು ಗೆದ್ದು ಬರುವಂತೆ ಮಾಡಿದ್ದೇ ...ಕಾರ್ಜುನ ಖರ್ಗೆ. ಅವರ ಈ ಅವಿರತ ದುಡಿಮೆಗೆ ಅಂದೇ ಅವರು ಮುಖ್ಯಮಂತ್ರಿಯಾಗಬೇಕಿತ್ತು, ಆದರೆ ಚುನಾವಣೆಗೆ ಇನ್ನು ಆರು ತಿಂಗಳಿರುವಾಗ ಕೆಪಿಸಿಸಿ ಅಧ್ಯಕ್ಷರಾಗಿ ಬಂದಿದ್ದ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದರು.



ಖರ್ಗೆಯವರ ಸಾಮರ್ಥ್ಯಕ್ಕೆ ತಕ್ಕ ಉದಾಹರಣೆಯೆಂದರೆ ರಾಮನಗರ ವಿಧಾನಸಭಾ ಕ್ಷೇತ್ರದ ಉಪಚುನಾವಣೆ. ಪ್ರಧಾನಿ ಹುದ್ದೆಗೇರಿದ ದೇವೇಗೌಡರು ರಾಮನಗರದ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರಿಂದ ಅಲ್ಲಿ ಉಪಚುನಾವಣೆ ಎದುರಾಗಿತ್ತು. ಆಗ ಜೆಡಿಎಸ್‌ನ ಜೆ.ಎಚ್. ಪಟೇಲ್ ಮುಖ್ಯಮಂತ್ರಿ. ಜನಪ್ರಿಯತೆಯ ಉತ್ತುಂಗ ಶಿಖರದಲ್ಲಿದ್ದ ಅಂಬರೀಶ್ ಜೆಡಿಎಸ್ ಅಭ್ಯರ್ಥಿ. ಅದಕ್ಕಿಂತಲೂ ಪ್ರಧಾನಿ ಪ್ರತಿನಿಧಿಸುತ್ತಿದ್ದ ಕ್ಷೇತ್ರವೆಂಬ ಪ್ರತಿಷ್ಠೆ. ಅಂಥಲ್ಲಿ ರಾಜಕೀಯವಾಗಿ ಏನೇನೂ ಅಲ್ಲದಿದ್ದ ಸಿ.ಎಂ.ಲಿಂಗಪ್ಪರನ್ನು ಕಾಂಗ್ರೆಸ್ಸಿನಿಂದ ಗೆಲ್ಲಿಸಿಕೊಂಡು ಬಂದದ್ದು ಖರ್ಗೆಯವರ ರಾಜಕೀಯ ಛಾತಿ.

2004ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತ, ಈ ಬಾರಿಯಾದರು ಖರ್ಗೆ ಮುಖ್ಯಮಂತ್ರಿಯಾಗುತ್ತಾರೆ ಎಂಬ ನಿರೀಕ್ಷೆ ಇತ್ತಾದರು ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗದ ಅತಂತ್ರ ಸ್ಥಿತಿ ನಿರ್ಮಾಣವಾಗಿತ್ತು. ಆಗ ಜೆಡಿಎಸ್ ಜೊತೆಗಿನ ಸಮ್ಮಿಶ್ರ ಸರ್ಕಾರದ ರಚನೆ ಅನಿವಾರ್ಯವಾಗಿತ್ತು. ದೇವೇಗೌಡರಿಗೆ ಖಡಕ್ ಖರ್ಗೆಗಿಂತ ಪುಣ್ಯಕೋಟಿ ಧರ್ಮಸಿಂಗ್ ಅವರೆ ಫ್ಲೆಕ್ಸಿಬಲ್ ಎನಿಸಿರಬೇಕು. ಆಗಲೂ ಮುಖ್ಯಮಂತ್ರಿ ಪಟ್ಟ ದಲಿತ ಮುಖಂಡನಿಂದ ಮಾರುದ್ದ ದೂರವೇ ಉಳಿದುಬಿಟ್ಟಿತ್ತು.

2008ರ ವಿಧಾನಸಭಾ ಚುನಾವಣೆಯಲ್ಲಿ ಯಡ್ಡಿ-ಕುಮ್ಮಿ ಫ್ಯಾಕ್ಟರ್‌ನಿಂದ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂತು. ಸೋಲಿನಿಂದ ಕಂಗೆಟ್ಟಿದ್ದ ಕಾಂಗ್ರೆಸ್ ಪಕ್ಷಕ್ಕೆ ಹೊಸ ನಾಯಕನೊಬ್ಬನ ಅನಿವಾರ್ಯವಿತ್ತು. ಅದೇ ಸಂದರ್ಭದಲ್ಲಿ ಒಂದು ಘಟನೆ ನಡೆದುಹೋಗಿತ್ತು. ಕಾಂಗ್ರೆಸ್ ಅಧಿನಾಯಕಿ ಸೋನಿಯಾರನ್ನು ಭೇಟಿ ಮಾಡಲು ಖರ್ಗೆಯವರು ದೆಹಲಿಗೆ ತೆರಳಿದ್ದರು. ಮೇಡಮ್ ದರ್ಶನಕ್ಕೆ ದೀರ್ಘಕಾಲದಿಂದ ಕಾದು ಕುಳಿತಿದ್ದ ಖರ್ಗೆ ಅವರಿಗೆ ವಯೋಸಹಜವಾದ ತೂಕಡಿಕೆ. ಅವರ ಸರದಿ ಬಂದಾಗ ಕರೆಯಲು ಬಂದ ಮೇಡಮ್‌ನ ಆಪ್ತ ಸಹಾಯಕ ಅವರನ್ನು ನಿದ್ದೆಯಿಂದ ಎಬ್ಬಿಸಬೇಕಾಯಿತು. ಇದನ್ನು ಸಿಸಿ ಟಿವಿಯಲ್ಲಿ ಗಮನಿಸಿದ ಸೋನಿಯಾಗೆ 'ನನ್ನನ್ನು ನೋಡಲು ಬಂದಿರುವಾಗಲೇ ನಿದ್ದೆ ಮಾಡುವ ಇವರು ಕರ್ನಾಟಕದಲ್ಲಿ ಕಾಂಗ್ರೆಸನ್ನು ಯಾವ ರೀತಿ ಮುನ್ನಡೆಸಬಲ್ಲರು?' ಎಂಬ ಅನುಮಾನ ಶುರುವಾಯಿತು ಎನ್ನುತ್ತವೆ ಎಐಸಿಸಿ ಮೂಲಗಳು. ಹಾಗಾಗಿ ಖರ್ಗೆಯವರ ಹಿಂದಿನ ಸಾಧನೆಗಳೆಲ್ಲ ಮಸುಕಾಗಿ ಸಿದ್ದರಾಮಯ್ಯ ಪ್ರತಿಪಕ್ಷ ನಾಯಕನ ಸ್ಥಾನಕ್ಕೇರಿದರು.

ಆದರೆ ಖರ್ಗೆಯವರ ಬೆಂಬಲಿಗರು ಸಿಡಿದೆದ್ದರು. ಇದರ ಮುನ್ಸೂಚನೆ ಅರಿತ ಹೈಕಮಾಂಡ್ ಗುಲ್ಬರ್ಗ ಲೋಕಸಭಾ ಕ್ಷೇತ್ರಕ್ಕೆ ಟಿಕೆಟ್ ನೀಡಿದರು. ಅಭೂತಪೂರ್ವವಾಗಿ ಖರ್ಗೆ ಗೆದ್ದು ಬಂದರು. ಖರ್ಗೆಯವರಿಗೆ ಕಾರ್ಮಿಕ ಇಲಾಖೆಯನ್ನು ನೀಡಿ ಯುಪಿಎ-2 ಸರ್ಕಾರದಲ್ಲಿ ಸಚಿವರನ್ನಾಗಿಸಿದರು ಸೋನಿಯಾ. ಖರ್ಗೆಯವರ ನಿಜವಾದ ಸಾಮರ್ಥ್ಯ ಮೇಡಂಗೆ ಗೊತ್ತಾದದ್ದು ಆಗಲೇ. ಇದಕ್ಕೂ ಮುನ್ನ ಸಿಂಗೂರ್ ಪೋಸ್ಕೊ ಮುಂತಾದೆಡೆ ಕಾರ್ಮಿಕ ಅರಾಜಕತೆ ಇತ್ತು. ಇದನ್ನ ಖರ್ಗೆ ಸಮರ್ಥವಾಗಿ ನಿಭಾಯಿಸಿದ್ದರು. ಅವರ ಅವಿರತ ಪರಿಶ್ರಮದಿಂದಾಗಿ ವಿಶ್ವಕಾರ್ಮಿಕ ವಲಯದಲ್ಲಿ ಜಗತ್ತಿನ ಪ್ರಥಮ ಸ್ಥಾನದಲ್ಲಿ ಖರ್ಗೆಯವರಿದ್ದರು. ವಿಶ್ವಸಂಸ್ಥೆ ಕೂಡ ಇವರನ್ನು ಹಾಡಿಹೊಗಳಿತು. ಈ ಹಿಂದೆ ಖರ್ಗೆಯವರ ಸಾಮರ್ಥ್ಯವನ್ನು ತಪ್ಪಾಗಿ ಅಂದಾಜಿಸಿದ್ದ ಪ್ರಮಾದವನ್ನು ರೈಲ್ವೇ ಖಾತೆಯನ್ನೇ ಅವರಿಗೆ ವಹಿಸಿಕೊಡುವ ಮೂಲಕ ಸೋನಿಯಾ ಸರಿಪಡಿಸಿಕೊಂಡರು. ತಮಗೆ ಸಿಕ್ಕ 8 ತಿಂಗಳಲ್ಲಿ ರೈಲ್ವೆ ಇಲಾಖೆಗೆ ಖರ್ಗೆ ಮಾಡಿದ ಸೇವೆ ಒಂದು ದಾಖಲೆಯೇ ಸರಿ.

ಇದೀಗ 2014ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸಿನ ಅತಿರಥ-ಮಹಾರಥರು ಸೋತಿದ್ದಾರೆ. ಗೆದ್ದ ಬಹುತೇಕರ ಮೇಲೆ ಹಗರಣಗಳ ಆರೋಪಗಳಿವೆ. ಹೀಗಾಗಿ ತಮ್ಮ ರಾಜಕೀಯ ಜೀವನದುದ್ದಕ್ಕೂ ನಿಷ್ಕಳಂಕ ಸೇವೆಗೈದ ಖರ್ಗೆ, ಸೋನಿಯಾ ಮೇಡಮ್‌ರ ಆಯ್ಕೆಯಾಗಿದ್ದಾರೆ. ಖರ್ಗೆ ಒಂದು ರೀತಿಯ ಸ್ಥಿತಪ್ರಜ್ಞ. ಅಧಿಕಾರ ಬಂದಾಗ ಹಿಗ್ಗೋದು, ಇಲ್ಲದಿದ್ದಾಗ ಕುಗ್ಗೋದು ಅವರ ಜಾಯಮಾನವೇ ಅಲ್ಲ. ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡೊಲ್ಲ. ಸಲ್ಲದ ಸಂಗತಿಗಳಿಗೆ ಸುಖಾಸುಮ್ಮನೆ ಹೋಗುವುದಿಲ್ಲ. ಸಂದರ್ಭ ಬಂದಾಗ ಯಾವುದಕ್ಕೂ ಅಂಜುವುದಿಲ್ಲ. ಇವೆಲ್ಲಕ್ಕೂ ಹೆಚ್ಚಾಗಿ ಕಾಂಗ್ರೆಸ್ ಪಕ್ಷಕ್ಕೆ ಇವರು ತೋರುವ ನಿಷ್ಠೆ ಅಚಲ.

ಈ ಮೊದಲು ಯಾರೂ ನಿರೀಕ್ಷೆ ಮಾಡದೆ ಇದ್ದ ದೇವೇಗೌಡರು ಪ್ರಧಾನಿಯಾದಂತೆ, ಕಾಂಗ್ರೆಸ್‌ನಂತಹ ರಾಷ್ಟ್ರೀಯ ಪಕ್ಷವೊಂದರ ನಾಯಕತ್ವವೂ ಮಲ್ಲಿಕಾರ್ಜುನ ಖರ್ಗೆಯವರಿಗೆ ಅನಿರೀಕ್ಷಿತವಾಗೇ ಒಲಿದಿದೆ. ಲೋಕಸಭೆಗೆ ತುಮಕೂರಿನ ಮಲ್ಲಿಕಾರ್ಜುನ್‌ರವರು ಡೆಪ್ಯೂಟಿ ಸ್ಪೀಕರ್ ಮತ್ತು ರಾಜ್ಯಸಭೆಗೆ ರೆಹಮಾನ್ ಖಾನ್ ಉಪಸಭಾಪತಿಯಾಗಿದ್ದು ಬಿಟ್ಟರೆ ಇಂಥ ಮತ್ತೊಂದು ಮಹತ್ವದ ಹುದ್ದೆ ಕರ್ನಾಟಕಕ್ಕೆ ದಕ್ಕಿರಲಿಲ್ಲ. ಹಿಂದುಳಿದ ವರ್ಗದ ಪ್ರಧಾನಿ ವಿರುದ್ಧ ದಲಿತ ಪ್ರತಿಪಕ್ಷದ ನಾಯಕನೊಬ್ಬನನ್ನು ನಿಲ್ಲಿಸಲು ಬಿಟ್ಟ ಕಾಂಗ್ರೆಸ್ ನಿರ್ಧಾರದ ಹಿಂದೆ ಏನೇ ಲೆಕ್ಕಾಚಾರಗಳಿದ್ದರೂ ದಲಿತನೊಬ್ಬನಿಗೆ ಈ ಸ್ಥಾನ ನೀಡುವ ಮೂಲಕ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದಿದೆ. ●

ಅಕ್ಷರಧಾಮ ದಾಳಿ: ಮೋದಿಗೆ ಮಂಗಳಾರತಿ

ಕಳೆದ ಮೇ 16ರಂದು ಲೋಕಸಭಾ ಚುನಾವಣೆಯ ಫಲಿತಾಂಶ ಹೊರಬೀಳುತ್ತಿದ್ದ ವೇಳೆಯಲ್ಲೇ ಸುಪ್ರೀಂಕೋರ್ಟ್ ಇಂದಲೂ ಒಂದು ಮುಖ್ಯ ತೀರ್ಪು ಹೊರಬಿದ್ದಿತ್ತು. ಆದರೆ ಮೇ 16 ಮತ್ತು 17ರಂದು ಎಲ್ಲಾ ಮಾಧ್ಯಮಗಳಲ್ಲಿ ಮೋದಿಯ 'ಜಪ' ಮುಂದುವರೆದಿದ್ದರಿಂದ ಈ ತೀರ್ಪು ಹೆಚ್ಚಿನ ಜನರ ಗಮನಕ್ಕೆ ಬರಲಿಲ್ಲ.


ಅಂದು ಸುಪ್ರೀಂ ಕೋರ್ಟ್ 2002 ರ ಸೆಪ್ಟೆಂಬರ್ 24ರಂದು ಅಹಮದಾಬಾದ್‌ನಲ್ಲಿರುವ ಅಕ್ಷರಧಾಮ ದೇವಾಲಯದ ಮೇಲೆ ಇಬ್ಬರು ಭಯೋತ್ಪಾದಕರು ನಡೆಸಿದ ದಾಳಿಗೆ ಸಂಬಂಧಪಟ್ಟಿದ್ದ ತೀರ್ಪನ್ನು ನೀಡುತ್ತಾ ಮೋದಿಗೆ ಮಂಗಳಾರತಿ ಎತ್ತಿತ್ತು ಮತ್ತು ಆತನ ಆಡಳಿತದಲ್ಲಿ ಹೇಗೆ ಕಾನೂನುಗಳ ಉಲ್ಲಂಘನೆ ಆಗುತ್ತದೆ ಎಂಬುದಕ್ಕೆ ಸುಳಿವು ನೀಡಿತ್ತು.

ಅಕ್ಷರಧಾಮ ದಾಳಿಯಲ್ಲಿ ಆರು ಮಂದಿ ಮುಸಲ್ಮಾನರನ್ನು ಆರೋಪಿಗಳು ಎಂದು ಮೋದಿಯ ಗುಜರಾತ್ ಸರ್ಕಾರ ಆರೋಪಿಸಿತ್ತು. ಕಳೆದ 12 ವರ್ಷಗಳನ್ನು ಜೈಲಿನಲ್ಲೇ ಕಳೆದಿರುವ ಅವರೆಲ್ಲರಿಗೆ ವಿವಿಧ ಕೆಳಗಿನ ನ್ಯಾಯಾಲಯಗಳು ಮರಣ ದಂಡನೆಯಿಂದ ಜೀವಾವಧಿ ಬಂಧನದ ತನಕ ಶಿಕ್ಷೆಗಳನ್ನು ನೀಡಿದ್ದವು. ಆದರೆ ಸುಪ್ರೀಂಕೋರ್ಟ್ ಮಾತ್ರ ದಾಳಿಯಲ್ಲಿ ಆ ಆರು ಮಂದಿಯ ಪಾಲುದಾರಿಕೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದು ಎಲ್ಲರನ್ನೂ ಬಿಡುಗಡೆ ಮಾಡಿತಲ್ಲದೆ ಗುಜರಾತಿನ ಗೃಹ ಸಚಿವನೂ ಆಗಿದ್ದ ಮೋದಿಯನ್ನು ತರಾಟೆಗೆ ತೆಗೆದುಕೊಂಡಿತು.

ವಾಸ್ತವವಾಗಿ ಅಕ್ಷರಧಾಮದ ಮೇಲಾದ ದಾಳಿಯ ತನಿಖೆ ವಿಚಿತ್ರ ತಿರುವುಗಳನ್ನು ಪಡೆಯುತ್ತಾ ನಡೆದಿತ್ತು. ಆರಂಭದಲ್ಲಿ ಈ ದಾಳಿಯ ತನಿಖೆಯನ್ನು ಗುಜರಾತಿನ ಭಯೋತ್ಪಾದಕ ನಿಗ್ರಹ ದಳಕ್ಕೆ (ಎಟಿಎಸ್) ವಹಿಸಲಾಗಿತ್ತು. ಆದರೆ ದಾಳಿ ನಡೆದ ಒಂದು ವರ್ಷದತನಕ ಎಟಿಎಸ್ ತನಿಖೆ ಕಿಂಚಿತ್ತೂ ಪ್ರಗತಿ ಕಾಣದೆ ತಟಸ್ಥವಾಗಿತ್ತು. ಆದರೆ ಎಟಿಎಸ್ ನಿಂದ ಕ್ರೈಮ್ ಬ್ರಾಂಚ್ ತನಿಖಾ ಜವಾಬ್ದಾರಿಯನ್ನು 2003ರ ಆಗಸ್ಟ್ ತಿಂಗಳಲ್ಲಿ ಹೊತ್ತ ನಂತರ ತನಿಖೆ ಇದ್ದಕ್ಕಿದ್ದಂತೆ 'ಚುರುಕಾಯಿತು'!

ನಿಮಗೆ ಗೊತ್ತಿದೆ, ಈಗ ವಂಜಾರಾ ಎಂಬ ಗುಜರಾತ್ ಪೊಲೀಸ್ ಅಧಿಕಾರಿಯನ್ನು ನಕಲಿ ಎನ್‌ಕೌಂಟರ್‌ಗಳನ್ನು ನಡೆಸಿದ್ದಕ್ಕೆ ಬಂಧನದಲ್ಲಿಡಲಾಗಿದೆ. ಕ್ರೈಮ್ ಬ್ರಾಂಚ್ ಪೊಲೀಸರ ಪ್ರಕಾರ ಎಟಿಎಸ್ ಮುಖ್ಯಸ್ಥನಾಗಿದ್ದ ವಂಜಾರಾ ಒಂದು ವರ್ಷದ ಕಾಲ ಅಕ್ಷರಧಾಮ ದಾಳಿಯ ಹಿಂದೆ ಇದ್ದ ಒಬ್ಬರನ್ನೂ ಬಂಧಿಸಿರಲಿಲ್ಲ. ಆದರೆ ಆ ತನಿಖೆ ಆತನಿಂದ ಕ್ರೈಮ್ ಬ್ರಾಂಚ್‌ಗೆ ಹಸ್ತಾಂತರಿಸಿದ ಒಂದೆರಡು ಗಂಟೆಗಳೊಳಗೆ ಆತ ಕೊಟ್ಟ 'ಟಿಪ್ ಆಫ್' ಮೇಲೆ ಐವರನ್ನು ಬಂಧಿಸಲಾಯಿತು. ಈ ಐವರೂ ಮುಸಲ್ಮಾನರಾಗಿದ್ದರು. ಅಷ್ಟೇ ಅಲ್ಲ, ಆದರ ಮಾರನೆ ದಿನವೇ ಅವರೆಲ್ಲರ ವಿರುದ್ಧ ಪೋಟಾ ಕಾಯಿದೆಯಡಿ ಬಂಧಿಸಲಾಯಿತು. ಅಚ್ಚರಿಯ ಸಂಗತಿ ಎಂದರೆ ಇದಾದ ಮಾರನೆ ದಿನ ಆರನೆಯವನನ್ನೂ ಆರೆಸ್ಟ್ ಮಾಡಲಾಯಿತು. ಹೀಗೆ ಒಂದು ವರ್ಷ ನೆನೆಗುದಿಗೆ ಬಿದ್ದಿದ್ದ ತನಿಖೆ ನಾಟಕೀಯವಾಗಿ ನಡೆದು ಅಂತ್ಯಗೊಂಡಿತ್ತು.

ಆ ಆರೂ ಜನರ ಬಂಧನವು ವಂಜಾರಾ ನೀಡಿದ ಮಾಹಿತಿಯನ್ನು ಆಧರಿಸಿತ್ತು ಎಂದು ಪೊಲೀಸರು ದಾಖಲಿಸಿದ್ದರೂ ಯಾವುದೇ ನ್ಯಾಯಾಲಯ ವಂಜಾರಾನನ್ನು ಪ್ರಶ್ನಿಸುವ ಗೋಜಿಗೇ ಹೋಗಿರಲಿಲ್ಲ. ಇದನ್ನು ಗಮನಿಸಿದ ಸುಪ್ರೀಂ ಕೋರ್ಟ್, "ಪೋಟಾ ನ್ಯಾಯಾಲಯ ಯಾಕೆ



ವಂಜಾರಾನನ್ನು ಕರೆದು ಪ್ರಶ್ನಿಸಲಿಲ್ಲ? ಯಾಕೆ ಈ ಎಲ್ಲರ ಬಂಧನದಲ್ಲಿರುವ ನ್ಯೂನತೆಗಳನ್ನು ನ್ಯಾಯಾಲಯಗಳು ಪ್ರಶ್ನಿಸಲಿಲ್ಲ? ಪೊಲೀಸರು ಹೇಳಿದ್ದನ್ನೇ ಯಾಕೆ ನ್ಯಾಯಾಲಯಗಳು ನಂಬಿದವು?" ಎಂದು ಕೇಳಿದೆ.

ವಿಚಾರಣಾ ನ್ಯಾಯಾಲಯ ಮತ್ತು ಗುಜರಾತ್ ಹೈಕೋರ್ಟ್ ಸಹ ಆರೋಪಿಗಳು ಕೊಟ್ಟಿದ್ದ ತಪ್ಪೊಪ್ಪಿಗೆಗಳನ್ನೇ ಆಧಾರವಾಗಿಟ್ಟುಕೊಂಡು ತೀರ್ಪು ನೀಡಿದ್ದವು. ಈ ತಪ್ಪೊಪ್ಪಿಗೆಗಳನ್ನೂ ಪ್ರಶ್ನಿಸಿರುವ ಸುಪ್ರೀಂ ಕೋರ್ಟ್ "ಇದೇನು ವಿಚಿತ್ರ? ದಾಖಲೆಗಳ ಪ್ರಕಾರ ಈ ಆರು ಜನ ತಪ್ಪೊಪ್ಪಿಗೆಗಳನ್ನು ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಎಂ) ಎದುರು ನೀಡಿದರು. ಹದಿನೈದು ಪುಟಗಳಷ್ಟು ಉದ್ದವಿರುವ ಪ್ರತಿಯೊಂದು ತಪ್ಪೊಪ್ಪಿಗೆ ಹೇಳಿಕೆಯನ್ನೂ ಸಿಜೆಎಂ ಬರೆದುಕೊಂಡರು ಮತ್ತು ಅದನ್ನು ಆರೋಪಿಗಳಿಗೆ ಓದಿ ಹೇಳಿ ಅವರ ಮೇಲೆ ಪೊಲೀಸರಿಗೆ ಒತ್ತಡ ಬಂದಿಲ್ಲ ಎಂದು ಸಹಿಯನ್ನೂ ತೆಗೆದುಕೊಂಡರೆಂದು, ಇದೆಲ್ಲವನ್ನು ಅವರು ಕೇವಲ ಅರ್ಧ ಗಂಟೆಯಲ್ಲಿ ಮಾಡಿಮುಗಿಸಿದರೆಂದೂ ತೋರಿಸಲಾಗಿದೆ. ಇದು ಅಸಾಧ್ಯ. ಅಷ್ಟೇ ಮುಖ್ಯವಾಗಿ ಪ್ರತಿ ತಪ್ಪೊಪ್ಪಿಗೆ ಹೇಳಿಕೆಯೂ ತದ್ವಿರುದ್ಧವಾಗಿವೆ. ಆದರೂ ಇವನ್ನು ಆಧರಿಸಿ ತೀರ್ಪು ನೀಡಲಾಗಿತ್ತು ಎಂದರೆ ಅಚ್ಚರಿಯಾಗುತ್ತದೆ" ಎಂದಿದ್ದಾರೆ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿಗಳಾದ ಎ.ಕೆ.ಪಟ್ನಾಯಕ್ ಮತ್ತು ವಿ.ಗೋಪಾಲ ಗೌಡರು.

ಸುಪ್ರೀಂಕೋರ್ಟ್ ಇನ್ನೊಂದು ಮುಖ್ಯ ಅಂಶದ ಬಗ್ಗೆ ಗಮನ ಹರಿಸಿದೆ. ಅದೇನೆಂದರೆ ಅಕ್ಷರಧಾಮದ ಮೇಲೆ ದಾಳಿ ಮಾಡಿದ ಭಯೋತ್ಪಾದಕರ ರಕ್ತ ಸಿಕ್ತ ಹೆಣಗಳ ಪ್ಯಾಂಟ್ ಜೇಬುಗಳಿಂದ ಪಡೆದುಕೊಳ್ಳಲಾಯಿತು ಎಂದು ಪೊಲೀಸರು ಹಾಜರುಪಡಿಸಿರುವ ಪತ್ರಗಳು. ಆ ಪತ್ರಗಳಲ್ಲಿ ಗುಜರಾತಿನಲ್ಲಿ 2002ರಲ್ಲಿ ನಡೆದ ಮುಸಲ್ಮಾನರ ಮಾರಣಹೋಮಕ್ಕೆ ಪ್ರತಿಯಾಗಿ ಅಕ್ಷರಧಾಮದ ಮೇಲೆ ದಾಳಿ ಮಾಡುತ್ತಿದ್ದೇವೆ ಎಂದು ಉರ್ದುವಿನಲ್ಲಿ ಹಸ್ತಾಕ್ಷರಗಳಲ್ಲಿ ಬರೆಯಲಾಗಿತ್ತು. ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆ ನಡೆಸಿ ಅವರಬ್ಬರನ್ನು ಕೊಂದು ಹಾಕಿದ ಎನ್‌ಎಸ್‌ಜಿ ಕಮಾಂಡೋಗಳ ಮುಖ್ಯಸ್ಥ ಬ್ರಿಗೇಡಿಯರ್ ರಾಜ್ ಸೀತಾಪತಿ ಅವರ ಸಮ್ಮುಖದಲ್ಲೇ ಈ ಪತ್ರಗಳಲ್ಲಿ ಪಡೆಯಲಾಗಿತ್ತು ಎಂದು ಗುಜರಾತ್ ಪೊಲೀಸರು ನ್ಯಾಯಾಲಯದ ಮುಂದೆ ಹೇಳಿದ್ದರು. ಆದರೆ ಬ್ರಿಗೇಡಿಯರ್ ಸೀತಾಪತಿಯವರನ್ನು ಪೊಲೀಸರು ಎಂದೂ ನ್ಯಾಯಾಲಯದ ಮುಂದೆ ಹಾಜರು ಪಡಿಸಲೇ ಇಲ್ಲ. "ಈ ಪತ್ರಗಳು ಆ ಭಯೋತ್ಪಾದಕರ ಜೇಬುಗಳಿಂದ ಪಡೆಯಲಾಗಿತ್ತು ಎಂದು ಸೀತಾಪತಿಯವರ ಹೇಳಿಕೆ ಇಲ್ಲದೆ ನಂಬುವುದು ಹೇಗೆ?" ಎಂದು ಸುಪ್ರೀಂ ಕೋರ್ಟ್ ಗುಮಾನಿ ವ್ಯಕ್ತಪಡಿಸಿದೆ.

ಆ ಗುಮಾನಿಗೂ ಕಾರಣವಿದೆ. ಅದೇನೆಂದರೆ ಭಯೋತ್ಪಾದಕರ ಜೇಬುಗಳಿಗೂ ಗುಂಡೇಟು ತಾಗಿತ್ತು. ಆದರೆ ಅವರ ಜೇಬಿನಲ್ಲಿತ್ತು ಎಂದು ಪೊಲೀಸರು ಹೇಳಿದ ಪತ್ರಗಳು ರಕ್ತಸಿಕ್ತವಾಗಿರಲಿಲ್ಲ. ಇನ್ನೂ ಅಚ್ಚರಿಯ ಸಂಗತಿ ಏನೆಂದರೆ ಅವು ಎಷ್ಟು ಒಳ್ಳೆಯ ಸ್ಥಿತಿಯಲ್ಲಿದ್ದವೆಂದರೆ ಅವು ಹೊಸದಾಗಿ ಬರೆದಿರುವಂತಿದ್ದವು! ಆದರೂ ಗುಜರಾತ್ ಹೈಕೋರ್ಟ್ "ಸತ್ಯ ಹಲವೊಮ್ಮೆ ಕಲ್ಪಿತ ಕತೆಗಳಿಗಿಂತ ವಿಚಿತ್ರವಾಗಿರುತ್ತದೆ" ಎಂದು ನಂಬಿತ್ತು. ಅದನ್ನು ಲೇವಡಿ ಮಾಡಿರುವ ಸುಪ್ರೀಂ ಕೋರ್ಟ್ "ಮಾರ್ಕ್ ಟ್ವೈನ್ 'ಸತ್ಯ ಹಲವೊಮ್ಮೆ ಕಲ್ಪಿತ ಕತೆಗಳಿಗಿಂತ ವಿಚಿತ್ರವಾಗಿರುತ್ತದೆ' ಎಂದಿದ್ದ ಹೌದು. ಆದರೆ ಕಲ್ಪಿತ ಕತೆಗಳೂ ನಂಬುವಂತಿರಬೇಕು" ಎಂದಿದ್ದಾರೆ.

ಕೊನೆಗೆ ಇಂತಹ ಕಪೋಲಕಲ್ಪಿತ ಕಾರಣಗಳನ್ನು ನೀಡಿ ಅಮಾಯಕರನ್ನು ಬಂಧಿಸಿದ್ದಕ್ಕೆ ಸುಪ್ರೀಂಕೋರ್ಟ್ ಮೋದಿಯನ್ನೇ ತರಾಟೆಗೆ ತೆಗೆದುಕೊಂಡಿದೆ. "ಇದನ್ನು ಪೋಟಾ ಕಾಯ್ದೆಯಡಿ ತಂದಿದ್ದು ಯಾವ ಕಾರಣಕ್ಕೆ, ಇಂತಹ ಕೆಲಸ ಮಾಡುವ ಮುನ್ನ ಗೃಹ ಇಲಾಖೆ ಸರಿಯಾಗಿ ಯೋಚಿಸಬೇಕಿತ್ತು. ಯಾಕೆಂದರೆ ತನಿಖಾ ಹಂತದಿಂದ ಹಿಡಿದು ಪೋಟಾ ಕಾಯ್ದೆಯನ್ನು ಅನ್ವಯಿಸುವ ತನಕ ಪ್ರತಿ ಹಂತದಲ್ಲಿ ದುಷ್ಟತನ ಎದ್ದುಕಾಣಿಸುತ್ತದೆ" ಎಂದು ಪರೋಕ್ಷವಾಗಿ ಮೋದಿಯನ್ನು ತರಾಟೆಗೆ ತೆಗೆದುಕೊಂಡಿದೆ.

ಮೋದಿಯ ಆಳ್ವಿಕೆಯಲ್ಲಿ ಅಲ್ಪಸಂಖ್ಯಾತನಿಗೆ ಏನು ಕಾದಿದೆ ಎಂಬುದಕ್ಕೆ ಇದು ಒಂದು ಎಚ್ಚರಿಕೆ ಅಲ್ಲವೇ? ●

ಅಮಾಯಕರಿಗೆ ಪೊಲೀಸರ ಟಾರ್ಚರ್

[illegible] ಆರೋಪಿಸಿದ ಪೊಲೀಸರು [illegible] ಮುರಿಯುವಂತೆ ಪೊಲೀಸರು ನನಗೆ [illegible] ಅಕ್ಷರಧಾಮ [illegible] ಸುಪ್ರೀಂಕೋರ್ಟ್ ಅವರನ್ನು [illegible]

ರವೀಂದ್ರನಾಥ್ ಪಜೀತಿ

10ನೇ ಪುಟದಿಂದ

ನಗರದ ಪೊಲೀಸ್ ಕಮೀಷನರ್ ಔರಾದ್‌ಕರ್‌ಗೆ ಸರಿ ಸಮಾನರು. ಹಾಗೊಮ್ಮೆ ಔರಾದ್‌ಕರ್ ಬಡ್ತಿ ಪಡೆದು ಪಚಾವೋ ಜಾಗದಲ್ಲಿ ಪೊಲೀಸ್ ಮಹಾ ನಿರ್ದೇಶಕ ಪದವಿಗೆ ಅಣಿಯಾದರೆ ಆ ಹುದ್ದೆಗೆ ಅವರ ಸರಿಸಮನಾಗಿ ಪೈಪೋಟಿಯಿರುವುದು ರವೀಂದ್ರನಾಥರೇ. ಈ ಕಾರಣಕ್ಕೇ ಮೇ 26ರ ಕಾಫಿಶಾಪ್ ಪ್ರಸಂಗಕ್ಕೇ ರಾಜ್ಯ ಪೊಲೀಸ್ ಮುಖ್ಯಸ್ಥ ಗಾದಿಯ ಪೈಪೋಟಿಗೂ ಮಾರ್ಮಿಕ ಸಂಬಂಧವೊಂದು ಕೊಂಡಿ ಹಾಕಿದೆ.

ಈ ಮಧ್ಯೆ ರವೀಂದ್ರನಾಥ್ ಪದೇಪದೇ ಬರುತ್ತಿದ್ದದ್ದು ಕನ್ನಿಂಗ್ ಹ್ಯಾಂ ರಸ್ತೆಯ ಮೆಡಿನೋವಾ ಹೆಲ್ತ್ ಸೆಂಟರ್ ಎಂಬ ಆರೋಗ್ಯ ತಪಾಸಣಾ ಕೇಂದ್ರಕ್ಕೆ. ಅದೇನು ಕಾಯಿಲೆಯೋ ನರದೌರ್ಬಲ್ಯವೋ ಈಗಾಗಲೇ ನಾಲ್ಕೈದು ಬಾರಿ ಮೆಡಿನೋವಾಗೆ ಬಂದಿದ್ದ ರವೀಂದ್ರನಾಥ್‌ಗೆ ಮತ್ತೊಂದು ಸುತ್ತಿನ ರಕ್ತ ಪರೀಕ್ಷೆ ನಿಗದಿಯಾಗಿದ್ದು ಮೇ 26ರ ಸೋಮವಾರಕ್ಕೆ. ಖಾಲಿ ಹೊಟ್ಟೆಯಲ್ಲಿ ಬೆಳ್ಳಂಬೆಳಗ್ಗೆಯೇ ಬಂದು ಮೊದಲ ಸುತ್ತಿನ ರಕ್ತ ಪರೀಕ್ಷೆಗೆ ರಕ್ತ ಕೊಟ್ಟವರನ್ನು ಕೊಂಚ ಹೊತ್ತಿನ ನಂತರ ತಿಂಡಿ ತಿಂದು ಬರುವಂತೆ ಅಲ್ಲಿನ ವೈದ್ಯರು ಸೂಚಿಸಿದ್ದಾರೆ.

ಆದರರ್ಥ ಆಹಾರ ಸೇವಿಸಿದ ನಂತರ ಇನ್ನೊಂದು ಸುತ್ತಿನ ರಕ್ತ ಪರೀಕ್ಷೆಗೆ ರವೀಂದ್ರನಾಥ್ ಅಣಿಯಾಗಬೇಕಿತ್ತು. ಹಾಗೆ ತಿಂಡಿ ವಿರಾಮಕ್ಕೊಂದು ರವೀಂದ್ರನಾಥ್ ಪಕ್ಕದ 'ಒಚೋಪೆ' ಎಂಬ ಐಷಾರಾಮೀ ಕಾಫಿ ಶಾಪ್‌ಗೆ ಬಂದಿದ್ದಾರೆ. ಕಾಫಿ ಡೇ ಮಾದರಿಯಲ್ಲೇ ವಿದೇಶಿ ಶೈಲಿಯ ಪೇಯಗಳಿಗೆ ಹೇಳಿಮಾಡಿಸಿದ 'ಒಚೋಪೆ'ಗೆ ಬಂದ ರವೀಂದ್ರನಾಥ್ ಅದೇನು ತಿಂದರೋ ಗೊತ್ತಿಲ್ಲ, ಎದುರಿಗೆ ಇಬ್ಬರು ಯುವತಿಯರಿದ್ದರು. ಆನಂತರ ನಡೆದದ್ದು ಮಾತ್ರ ಅಸ್ವಾಭಾವಿಕ, ಅತಿರೇಕದ ವರ್ತನೆಗಳೇ.

ಮಾನ ರಕ್ಷಕ ರವಿಕಾಂತೇ....!

ಇದ್ದಕ್ಕಿದ್ದಂತೆ ಶ್ರೀಧರ್ ಎಂಬ ಆಸಾಮಿಯೊಬ್ಬ ಕಾಫಿ ಶಾಪಿನ ಬಾಲ್ಕನಿಯಿಂದ ಇಳಿದುಬಂದವನೇ ರವೀಂದ್ರನಾಥ್‌ರನ್ನು ಹಿಡಿದು ಕಪಾಳಕ್ಕೆ ಹೊಡೆಯುತ್ತಾನೆ. ಎದುರಿಗಿದ್ದ ಹುಡುಗಿಯರ ಫೋಟೋ ತೆಗೆಯುತ್ತಿಯೇನೋ ಎಂದಿದ್ದೇ ಅವರ ಮೊಬೈಲು ಮತ್ತು ಪರ್ಸನ್ನು ಕಿತ್ತುಕೊಳ್ಳುತ್ತಾನೆ. ಎದುರು ಕೂತಿದ್ದ ಆ ಯುವತಿಯರನ್ನೂ ಈತ ನಿಮ್ಮ ಫೋಟೋ ತೆಗೆಯುತ್ತಿದ್ದ ಎಂದು ಛೂಬಿಟ್ಟಿದ್ದಾನೆ. ಅಷ್ಟಾಗಿದ್ದೇ ಆ ಹುಡುಗಿಯರೂ ಸೇರಿ ರವೀಂದ್ರನಾಥ್ ಮೇಲೆ ಹಲ್ಲೆ ನಡೆಸುತ್ತಾರೆ. ಜೊತೆಗೆ ಅಕ್ಕಪಕ್ಕದ ಜನ, ದಾರಿಹೋಕರೂ ಸೇರಿಕೊಂಡು ರವೀಂದ್ರನಾಥ್‌ರನ್ನು ಸುತ್ತುವರಿಯುತ್ತಾರೆ. ಎದುರಿಗಿದ್ದ ಯುವತಿಯರ ಪೈಕಿ ಒಬ್ಬಳು ತನ್ನ ಮಾನಭಂಗಕ್ಕೆ ಯತ್ನಿಸಿದರೇನೋ ಎಂಬಂತೆ ಏಕಾಏಕಿ ಬೆಂಗಳೂರು ಕೇಂದ್ರ ಡಿಸಿಪಿ ರವಿಕಾಂತೇಗೌಡರಿಗೆ ಫೋನ್ ಮಾಡುತ್ತಾಳೆ-

ಮಹಿಳೆ, ಮಾನ, ಸೆಕ್ಸು, ಫೋಟೋ; ಇತ್ಯಾದಿ ಶಬ್ದಗಳನ್ನು ಕೇಳಿದ್ದೇ ತಡ ಗೋಪಿಕಾ ಸ್ತ್ರೀಯರ ಮಾನರಕ್ಷಣೆಗೆಂದೇ ಅವತಾರವೆತ್ತ ಸಾಕ್ಷಾತ್ ಶ್ರೀಕೃಷ್ಣ ಪರಮಾಪ್ತನಂತೆ ಪುಳಕಿತಗೊಂಡ ರವಿಕಾಂತೇಗೌಡರು ತನ್ನ ಪರಮಾಪ್ತ ಎಸ್‌ಐ ಹೈಗ್ರೌಂಡ್ಸ್ ಠಾಣೆಯ ರವಿಯವರನ್ನು ಕಳಿಸಿದ್ದಾರೆ. ಸ್ಥಳಕ್ಕೆ ಬಂದಿದ್ದೇ ವೀರಾವೇಶದ ಎಸ್‌ಐ ರವಿ ಯಾರೋ ಪಿಕ್‌ಪಾಕೆಟ್‌ನನ್ನು ಹಿಡಿದಂತೆ ಕಪಾಳಕ್ಕೆ ಬಾರಿಸುತ್ತಾರೆ. ತಾನೊಬ್ಬ ಹಿರಿಯ ಪೊಲೀಸ್ ಅಧಿಕಾರಿ ಎಂದರೂ ಲೆಕ್ಕಿಸದೇ ಯಕಶ್ಚಿತ್ ಕ್ರಿಮಿನಲ್‌ನಂತೆ ಠಾಣೆಗೆ ಎಳೆದೊಯ್ದು ಲಾಕಪ್ಪಿಗೆ ದಬ್ಬುತ್ತಾರೆ. ಅಲ್ಲಿಂದಾಚೆಗೆ ಪ್ರತಿಯೊಂದನ್ನೂ ಮೆಲೋಡ್ರಾಮಾ ಪೋದಿಯಲ್ಲಿ ಯಥಾವತ್ತಾಗಿ ನ್ಯೂಸ್ ಚಾನಲ್ಲುಗಳು ಬಿತ್ತರಿಸಲಾರಂಭಿಸುತ್ತವೆ.

ಅದಾದನಂತರ ರವೀಂದ್ರನಾಥ್ ಓರ್ವ ಪೊಲೀಸ್ ವರಿಷ್ಠರಾಗಿ ಯಾವ ರೀತಿ ವರ್ತಿಸಬಾರದಿತ್ತೋ ಅಂಥದ್ದೇ ರೀತಿಯಲ್ಲಿ ಯಡವಟ್ಟಾಗಿಳಿದದ್ದು ಅಕ್ಷಮ್ಯವೇ. ಏಕಾಏಕಿ ಪೊಲೀಸ್ ಕಮೀಷನರ್ ಔರಾದ್‌ಕರ್ ಕಚೇರಿಗೆ ಬಂದು ಡಿಜಿ ಪಚಾವೋ ಛೇಂಬರಿಗೆ ನಡಿ ಎಂದು ಕೈಹಿಡಿದೆಳೆಯಲು ಯತ್ನಿಸಿದ್ದು ಅವರ ಎಡಬಿಡಂಗಿತನದ ಹಾಗೇ ಕಾಣುತ್ತದೆ. ಇದ್ದಕ್ಕಿದ್ದಂತೆ ಕಾಫಿ ಶಾಪಿಗೆ ಹೋಗಿ ಬಿಲ್ಲು ಕೊಟ್ಟು ಬರ್ತೀನಿ ಎಂದು ಹೋದವರು ಮತ್ತೆ ವಾಪಸ್ಸು ಬಂದು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಲಾಕಪ್ಪಿನಲ್ಲಿ ಕೂತದ್ದು ಹುಚ್ಚಾಟವಾಗಿ ಕಾಣಿಸುತ್ತದೆ. ಎಲ್ಲವನ್ನೂ ಬಿಟ್ಟು ತನ್ನ ಮೊಬೈಲಿನ ಸಿಮ್ ಕಾರ್ಡ್ ಕೊಡುವಂತೆ ಪೊಲೀಸರ ವಿರುದ್ಧ ಏರಿಹೋದದ್ದು ಜನಕ್ಕೆ ದರ್ಪದಂತೆ ತೋಚುತ್ತದೆ. ಬೇಡಬೇಡವೆಂದರೂ ನನ್ನನ್ನು ಆರೆಸ್ಟ್ ಮಾಡಿ ಜೈಲಿಗೆ ಹಾಕಿ ಎಂದು ಮೇಲೆ ಬಿದ್ದು ತೆಗೆದ ಕ್ಯಾತೆ ಅಧಿಕ ಪ್ರಸಂಗಿತನವೇ ಸರಿ.

ಹುಚ್ಚಾಟ

ಇದ್ದಕ್ಕಿದ್ದಂತೆ ನನ್ನ ರಾಜೀನಾಮೆ ಪಡೆಯಿರಿ ಎಂದು ಪೊಲೀಸ್ ವರಿಷ್ಠರನ್ನು ರವೀಂದ್ರನಾಥ್ ಪೀಡಿಸುತ್ತಾರೆ. ಏಕಾಏಕಿ ಮುಖ್ಯಮಂತ್ರಿಗಳನ್ನು ಭೇಟಿಯಾಗ್ತೀನಿ ಎಂದು ಮುಖ್ಯಮಂತ್ರಿಗಳ ಕಚೇರಿಗೆ ಬರುತ್ತಾರೆ. ಅಲ್ಲಿಂದ ಆಟೋ ಹತ್ತಿ ಗುಪ್ತ ವಾರ್ತೆಯ ಎಡಿಜಿಪಿ ಪ್ರಸಾದ್‌ರನ್ನು ಕಾಣಲು ನುಗ್ಗುತ್ತಾರೆ. ಅಲ್ಲಿ ಪ್ರಸಾದ್ ತನ್ನನ್ನು ದಲಿತ ಎಂದ, ದಲಿತ ಎಂದು ಗೇಲಿ ಮಾಡಿದ ಎಂದು ಟೀವಿಗಳೆದುರು ಎದೆ ಬಡಿದುಕೊಳ್ಳುತ್ತಾರೆ. ಅದನ್ನು ಯಥಾವತ್ತಾಗಿ ಟೀವಿಗಳು ಪ್ರಸಾರ ಮಾಡುತ್ತವೆ. ಅದಕ್ಕೂ ಮುನ್ನ ಪೊಲೀಸ್ ಕಮೀಷನರ್ ಔರಾದ್‌ಕರ್ ತನ್ನನ್ನು ಜಾತಿ ಹಿಡಿದು ನಿಂದಿಸಿದರೆಂದೂ ದಲಿತನೆಂದು ಅವಮಾನವೆಸಗಿದರೆಂದೂ ದೂರು ದಾಖಲಿಸುತ್ತಾರೆ. ತಾನು ದಲಿತನಾಗದೆ ಹೋಗಿದ್ದರೆ ಹೀಗೆಲ್ಲ ನಡೆಯುತ್ತಿತ್ತಾ ಎಂದು ಪ್ರಶ್ನಿಸುತ್ತಾರೆ. ಸಿಕ್ಕ ಸಿಕ್ಕ ಟೀವಿಗಳ ಹರಟೆಯಲ್ಲಿ ಭಾಗವಹಿಸುತ್ತಾರೆ.

ಒಟ್ಟಿನಲ್ಲಿ ರವೀಂದ್ರನಾಥ್ ಕೃತಿಗೂ ಮಾತಿಗೂ ವ್ಯತ್ಯಾಸವೇ ಇಲ್ಲದಂತೆ ಜನರೆದುರು ಅಧಿಕ ಪ್ರಸಂಗಿತನವಾಗಿ ಕಾಣಿಸುತ್ತದೆ. ಬಹುಶಃ ತನ್ನ ಹುಚ್ಚಾಟದಿಂದಾಗಿಯೇ ರವೀಂದ್ರನಾಥ್ ಉಗುರಲ್ಲಿ ಹೋಗುವುದಕ್ಕೆ ಕೊಡಲಿ ಪ್ರಯೋಗಿಸಿದಂತೆ ಇಡೀ ಪ್ರಕರಣವನ್ನು ಖುದ್ದು ರವೀಂದ್ರನಾಥ್ ಕಗ್ಗಂಟಾಗಿಸುತ್ತಾರೆ.

ಇಲ್ಲಿ ಸೂಕ್ಷ್ಮವೆಂದರೆ, ರವೀಂದ್ರನಾಥ್ ತನ್ನನ್ನು ಬಂಧಿಸಿ, ಜೈಲಿಗೆ ಹಾಕಿ, ನಾನು ರಾಜೀನಾಮೆ ಕೊಡುತ್ತೇನೆಂದು ಮೇಲೆ ಬಿದ್ದು ರಾದ್ಧಾಂತ ಮಾಡದೇ ಹೋಗಿದ್ದರೆ ಇಡೀ ಸಮಸ್ಯೆಯೇ ಇಷ್ಟು ಹೊತ್ತಿಗೆ ಮುಗಿಯುತ್ತಿತ್ತು. ಹಠಕ್ಕೆ ಬಿದ್ದ ಬಾಲಕನಂತೆ ರವೀಂದ್ರನಾಥ್ ಗಳಿಗೆಗೊಂದು ರಂಪಕ್ಕಿಟ್ಟದ್ದರಿಂದಲೇ ಸಂಜೆ ತನಕ ಕಾದ ಪೊಲೀಸರು ಪ್ರಕರಣವನ್ನು ಕಬ್ಬನ್‌ಪಾರ್ಕ್ ಠಾಣೆಗೆ ವರ್ಗಾಯಿಸಬೇಕಾಯಿತು. ಯುವತಿಯರಿಂದ ದೂರು ಪಡೆಯಬೇಕಾಯಿತು ಮತ್ತು ಎಫ್‌ಐಆರ್ ದಾಖಲಿಸಬೇಕಾಯಿತು!

ಎಲ್ಲವೂ ಸರಿಯೆ. ರವೀಂದ್ರನಾಥ್ ಇಲ್ಲಿ ಶುದ್ಧ ಅವಿವೇಕಿಯಂತೆ ವರ್ತಿಸಿದ್ದಾರೆ ನಿಜ. ಅವರ ಯಡವಟ್ಟು ಮತ್ತು ಎಡಬಿಡಂಗಿತನದ ಪರಿಣಾಮವಾಗಿಯೇ ಗೃಹಮಂತ್ರಿ ಜಾರ್ಜ್ ಮಾಧ್ಯಮಗಳೆದುರು ತಡಬಡಾಯಿಸಬೇಕಾಯಿತು. ಅಂತಿಮವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹಣೆ ಚಚ್ಚಿಕೊಳ್ಳುವಂತಾಗುವುದಕ್ಕೂ ರವೀಂದ್ರನಾಥ್ ಎಡಬಿಡಂಗಿತನವೇ ಕಾರಣವಾಯ್ತು.

ಮೇಲ್ಜಾತಿಯವನಾಗಿದ್ದರೆ?

ಮೇಲುನೋಟಕ್ಕೆ ಇದೆಲ್ಲವೂ ಸರಿಯೆ. ಆದರೆ ರವೀಂದ್ರನಾಥ್‌ರನ್ನು ಆ ರೀತಿ ಹುಚ್ಚನಂತೆ ವರ್ತಿಸುವಂತೆ ಮಾಡಿದವರ್‍ಯಾರು? ಯಾವ ಕಾರಣಕ್ಕೆ ರವೀಂದ್ರನಾಥ್ ತಾನೊಬ್ಬ ಹಿರಿಯ ಪೊಲೀಸ್ ಅಧಿಕಾರಿ ಎಂಬುದನ್ನೂ ಮರೆತು ತನ್ನ ಜಾತಿಯ ರಕ್ಷಣೆ ಯಾಚಿಸುವಷ್ಟು ಅಸಹಾಯಕರಾಗುತ್ತಾರೆ? ಕಾಫಿಶಾಪ್‌ನ ದೃಶ್ಯಾವಳಿಗಳೆಲ್ಲವನ್ನೂ ಮುಚ್ಚಿಟ್ಟು ಹೈಗ್ರೌಂಡ್ಸ್ ಠಾಣೆಯಲ್ಲಿ ಅವರು ಸಿಮ್ ಕಾರ್ಡ್‌ಗಾಗಿ ಒತ್ತಾಯಿಸುವುದನ್ನೇ ಕಾದು ಅದನ್ನು ವೀಡಿಯೋ ಮಾಡಿಕೊಂಡವರ್‍ಯಾರು? ಮತ್ತು ಅದನ್ನು ಟೀವಿಗಳಿಗೆ ಬಿಡುಗಡೆ ಮಾಡಿದವರ್‍ಯಾರು? ಏಕೆ ಟೀವಿಗಳು ರವೀಂದ್ರನಾಥ್‌ರ ಪೇಚಾಟವನ್ನೇ ಆಯ್ದು ಬಿತ್ತರಿಸುತ್ತವೆ?

ಇದು ಇಡೀ ಪ್ರಕರಣದ ಮಾರ್ಮಿಕ ಪ್ರಶ್ನೆಗಳಾದರೆ ಘಟನೆಯ ಮೂಲವೇ ನಿಗೂಢದ ಹುತ್ತದಂತಿದೆ. ಇಲ್ಲಿನ ಅತಿಮುಖ್ಯ ಪ್ರಶ್ನೆಯೆಂದರೆ ಓರ್ವ ದಲಿತ ಅಧಿಕಾರಿ ರವೀಂದ್ರನಾಥ್ ಬದಲಿಗೆ ಆ ಜಾಗದಲ್ಲಿ ರವಿಕಾಂತೇಗೌಡರೋ ಮಿರ್ಜಿಯಂಥವರೋ ಅಥವಾ ಯಾರೇ ಮೇಲ್ಜಾತಿಯ ಐಪಿಎಸ್ ಅಧಿಕಾರಿಯಾಗಿದ್ದರೆ ಮೀಡಿಯಾಗಳು ಇದೇ ರೀತಿ ವರ್ತಿಸುತ್ತಿದ್ದವಾ? ಇಷ್ಟೇ ನಿಷ್ಠುರವಾಗಿ ಇಲ್ಲಿನ ಪೊಲೀಸ್ ವ್ಯವಸ್ಥೆ ವರ್ತಿಸುತ್ತಿತ್ತಾ?

• ರಾ. ಸೋಮನಾಥ್

ಮೋದಿ ಬೆನ್ನಿಗೆ ಕೊಲೆಗಡುಕ ಕಂಪನಿಗಳು

ನರಹಂತಕ ನರೇಂದ್ರ ಮೋದಿ ಬೆಂಬಲಕ್ಕೆ ಕೇವಲ ...ಟಾ ಮತ್ತು ಅಂಬಾನಿ ತರಹದ ಭಾರತೀಯ ಬಂಡವಾಳ ...ಗಳು ನಿಂತಿಲ್ಲ. ಅವರೆಲ್ಲರ ಜೊತೆಗೆ ಘಟಾನುಘಟಿ ...ದೇಶಿ ಬಂಡವಾಳಶಾಹಿಗಳೂ ನಿಂತಿದ್ದಾರೆ. ಅಂತವುಗಳಲ್ಲಿ ...ವು ವರ್ಷಗಳ ಹಿಂದೆ ಆಂಧ್ರಪ್ರದೇಶ ಒಂದರಲ್ಲೇ ...00 ರೈತರ ಮತ್ತು ಮಹಿಳೆಯರ ಆತ್ಮಹತ್ಯೆಗೆ ಕಾರಣ ...ಗಿದ್ದ ಒಮಿಡಿಯಾರ್ ನೆಟ್‌ವರ್ಕ್ ಎಂಬ ಗುಂಪೂ ...ದಾಗಿದೆ. ಇಂತಹ ಬಂಡವಾಳಶಾಹಿಗಳು ಭಾರತದ ...ಭಿವೃದ್ಧಿಯನ್ನಾಗಲಿ, ಭಾರತೀಯರ ಹಿತಾಸಕ್ತಿಗಳನ್ನಾಗಲಿ ...ಪಾಡುವುದಕ್ಕೇನು ಟೊಂಕಕಟ್ಟಿ ನಿಂತಿರುವುದಿಲ್ಲ, ಬದಲಾಗಿ ...ನ ಜನರಿಂದ ಇನ್ನೆಷ್ಟು ಕಾಸು ಕಿತ್ತುಕೊಳ್ಳಬಹುದು, ...ತ್ತೆಷ್ಟು ಲಾಭ ಮಾಡಿಕೊಳ್ಳಬಹುದು ಎಂಬ ದುರಾ...ಲೋಚನೆಯಲ್ಲೇ ಇರುತ್ತವೆ ಎಂದು ಪ್ರತ್ಯೇಕವಾಗಿ ಹೇಳ...ಬೇಕಿಲ್ಲ.

...ಇಲ್ಲಿ ಉದಾಹರಣೆಗೆ ಈ ಒಮಿಡಿಯಾರ್ ನೆಟ್‌ವರ್ಕ್ ...ಮೋದಿಯೊಂದಿಗೆ ಅದೆಂತಹ ನಂಟನ್ನು ಇಟ್ಟುಕೊಂಡಿದೆ ...ದು ನೋಡೋಣ.

...ಏನಿದು ಒಮಿಡಿಯಾರ್?

ಈಬೇ ಎಂಬ ಇ-ಕಾಮರ್ಸ್ ಕಂಪನಿಯ ಮಾಲೀಕ ...ಯರ್ ಒಮಿಡಿಯಾರ್ ಎಂಬಾತ ಹುಟ್ಟುಹಾಕಿರುವ ...ದ್ದೇ ಒಮಿಡಿಯಾರ್ ನೆಟ್‌ವರ್ಕ್. ಪಿಯರ್ ...ಮಿಡಿಯಾರ್ ಮಿಲಿಯಾಧಿಪತಿ. ಈತನ ಕಾರ್ಯಕ್ಷೇತ್ರ ...ಇ-ಕಾಮರ್ಸ್. ಅಂದರೆ ಇಂಟರ್‌ನೆಟ್‌ನಲ್ಲಿ ವ್ಯವಹಾರ ...ನಡೆಸುವ ಕಂಪನಿಗಳನ್ನು ಹುಟ್ಟುಹಾಕುವುದು. ಬರುವ ...ವರ್ಷಗಳಲ್ಲಿ ಇ-ಕಾಮರ್ಸ್ ಭಾರತದಲ್ಲಿ ವೇಗವಾಗಿ ...ವಿಸ್ತರಗೊಳ್ಳಲಿದೆ ಎಂದು ಅಂದಾಜಿಸಲಾಗಿದೆ. ಆದ್ದರಿಂದ ...ಲವು ವರ್ಷಗಳ ಹಿಂದೆ ಈ ಒಮಿಡಿಯಾರ್ ನೆಟ್‌ವರ್ಕ್ ...ಏನು ಮಾಡಿತು ಎಂದರೆ ಭಾರತದಲ್ಲಿ ಇ- ಕಾಮರ್ಸ್ ...ಕಂಪನಿಗಳನ್ನು ಹುಟ್ಟುಹಾಕಲು ಒಂದು ಕಚೇರಿಯನ್ನು ...ತೆರೆಯಿತು. ಆ ಕಚೇರಿಯ ಮುಖ್ಯಸ್ಥನಾಗಿ ಜಯಂತ್ ...ಸಿನ್ಹಾ ಎಂಬಾತನನ್ನು ನೇಮಿಸಲಾಯಿತು.

...ಮೇಲುನೋಟಕ್ಕೆ ಈ ಜಯಂತ್ ಆ ಹುದ್ದೆಗೆ ...ಲಾಯಕ್ ಆದವನೆ. ಯಾಕೆಂದರೆ ಆತ ಹಾರ್ವರ್ಡ್ ...ವಿಶ್ವವಿದ್ಯಾಲಯದಲ್ಲಿ ಎಂಬಿಎ ಮಾಡಿದ್ದ ಮತ್ತು ಹಲವು ...ವರ್ಷಗಳ ಕಾಲ ಮೆಕಿನ್ಸೆ ಎಂಬ ಕಂಪನಿಯಲ್ಲಿ ಕೆಲಸ ...ಮಾಡಿದ್ದ. ಆದರೆ ಅದೆಲ್ಲಕ್ಕಿಂತ ಇನ್ನೊಂದು ಮುಖ್ಯ ಅರ್ಹತೆ ... ಜಯಂತ್ ಸಿನ್ಹಾನಿಗೆ ಇತ್ತು. ಅದೇನೆಂದರೆ ಆತ ...ಬಿಜೆಪಿಯ ಹಿರಿಯ ನಾಯಕ ಮತ್ತು ಮಾಜಿ ಕೇಂದ್ರ ...ಸಚಿವ ಯಶವಂತ್ ಸಿನ್ಹಾನ ಪುತ್ರನಾಗಿದ್ದದ್ದು.


...ಒಮಿಡಿಯಾರ್ ಸೇರುತ್ತಿದ್ದಂತೆ ಈ ಜಯಂತ್ ಸಿನ್ಹಾ ...ಏನು ಮಾಡಿದನೆಂದರೆ 2013ರ ಹೊತ್ತಿಗೆ ಒಮಿಡಿಯಾರ್ ...ನೆಟ್‌ವರ್ಕ್ ಭಾರತದ ಈಕಾಮರ್ಸ್ ವಲಯದಲ್ಲಿ ...ಬರೋಬ್ಬರಿ 6000 ಮಿಲಿಯನ್ ಡಾಲರ್‌ಗಳನ್ನು ...ಬಂಡವಾಳವಾಗಿ ಹೂಡುವಂತೆ ಮಾಡಿದ. ಇದು ...ಒಮಿಡಿಯಾರ್ ಜಗತ್ತಿನಾದ್ಯಂತ ಹೂಡಿದ್ದ ಬಂಡವಾಳದಲ್ಲಿ ...ಶೇ 18 ರಷ್ಟಾಗಿತ್ತು. ಆ ಕಂಪನಿಯು ಬೇರೆ ದೇಶಗಳಲ್ಲಿ ...ಹೂಡಿರುವ ಹಣಕ್ಕಿಂತ ಇದು ಹೆಚ್ಚಿನದ್ದು.

...ಈ ಬಂಡವಾಳವೆಲ್ಲ ಒಮಿಡಿಯಾರ್ ಕಂಪನಿಗೆ ...ಲಾಭವಾಗಿ ಪರಿವರ್ತನೆ ಆಗಬೇಕೆಂದರೆ ಇಲ್ಲಿ ಇ-ಕಾಮರ್ಸ್ ...ನ್ನು ಪ್ರೋತ್ಸಾಹಿಸುವ ಸರ್ಕಾರ ಅಧಿಕಾರಕ್ಕೆ ಬರಬೇಕಿತ್ತು. ...ಅದು ಮೋದಿಯಿಂದ ಮಾತ್ರ ಸಾಧ್ಯ ಎಂದು ಸಿನ್ಹಾನಿಗೆ ...ಗೊತ್ತಿತ್ತು. ಆದ್ದರಿಂದ ಆತ ಏನು ಮಾಡಿದನೆಂದರೆ ಅತ್ತ ...ಒಮಿಡಿಯಾರ್ ಕಂಪನಿಯ ಮುಖ್ಯಸ್ಥನಾಗಿ ಕೆಲಸ ...ಮಾಡುತ್ತಿದ್ದಾಗಲೇ ಇತ್ತ ಮೋದಿಯ ರಾಜಕೀಯ ...ಸಲಹೆಗಾರನಾಗಿಯೂ ಕೆಲಸ ಮಾಡಲಾರಂಭಿಸಿದ.

...ಇ-ಕಾಮರ್ಸ್ ವಲಯದಲ್ಲಿ ವಿದೇಶಿ ಬಂಡವಾಳ ...ಹೂಡಿಕೆಗೆ ಭಾರತ ಸರ್ಕಾರ ಅನುವು ಮಾಡಿಕೊಡಬೇಕೆಂದು ... ಒತ್ತಾಯಲಾರಂಭಿಸಿದ. ಏಕೆಂದರೆ ಈ ಕ್ಷೇತ್ರದಲ್ಲಿ ...ಎಫ್‌ಡಿಐಗೆ ಒಪ್ಪಿಗೆ ನೀಡಿದರೆ ಒಮಿಡಿಯಾರ್ ಕಂಪನಿಗೆ ...ಭಾರೀ ಲಾಭ ಸಿಗುತ್ತದೆ. ಇದರ ಜೊತೆಗೆ ಬಿಜೆಪಿಯನ್ನು ...ಬೆಂಬಲಿಸುವ ಇಂಡಿಯಾ ಫೌಂಡೇಶನ್ ಎಂಬ 'ಥಿಂಕ್ ...ಟ್ಯಾಂಕ್' ಗುಂಪಿನ ನಿರ್ದೇಶಕನೂ ಆದ.

...ಈ ಇಂಡಿಯಾ ಫೌಂಡೇಶನ್ ಎಂಬ ಗುಂಪು ...ಕೋಮುಕಾರಿ ಸಿದ್ಧಾಂತವನ್ನು ಹೊಂದಿರುವಂತಹದ್ದು. ...ಇವರಿಗೆ ಭಾರತದ ಹಲವಾರು ಅರಣ್ಯ ಪ್ರದೇಶಗಳಲ್ಲಿ ...ವಾಸಿಸುವ ಬಡ ಆದಿವಾಸಿಗಳು ನಕ್ಸಲ್ ಬೆಂಬಲಿಗರು. ...ಆದ್ದರಿಂದ ಅವರನ್ನೆಲ್ಲ ನಾಶ ಮಾಡಬೇಕೆಂಬುದು ಈ ...ಗುಂಪಿನ ತರ್ಕ. ಅಷ್ಟೇ ಅಲ್ಲ, ಕ್ರಿಶ್ಚಿಯನ್ ಪಾದ್ರಿಗಳು ...ನಕ್ಸಲರೊಂದಿಗೆ ಕೈಜೋಡಿಸಿ ಆದಿವಾಸಿಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡುತ್ತಿದ್ದಾರೆ ಎಂಬುದು ಈ ಗುಂಪಿನ ಅಭಿಪ್ರಾಯ. ಅಂದಹಾಗೆ ಈ ಇಂಡಿಯಾ ಫೌಂಡೇಶನ್ ಎಂಬ ಗುಂಪನ್ನು ಹುಟ್ಟುಹಾಕಿದ್ದು ಬೇರೆ ಯಾರೂ ಅಲ್ಲ, ಇಂಟೆಲಿಜೆನ್ಸ್ ಬ್ಯೂರೋದ ಮಾಜಿ ಅಧ್ಯಕ್ಷನಾಗಿದ್ದ ಮತ್ತೀಗ ಮೋದಿಯ ಸರ್ಕಾರದಲ್ಲಿ ರಕ್ಷಣಾ ಸಲಹೆಗಾರನಾಗಿ ನೇಮಕಗೊಂಡಿರುವ ಅಜಿತ್ ದೋವಲ್ ಎಂಬ ಅಧಿಕಾರಿ.





ಆಗ ದೇಶದಾದ್ಯಂತ ಭ್ರಷ್ಟಾಚಾರದ ವಿರುದ್ಧ ಜನಾಂದೋಲನ ಪ್ರಾರಂಭವಾಗಿತ್ತು. ಇದನ್ನು ಬಿಜೆಪಿ ಪರವಾಗಿ ತಿರುಗಿಸಲು ಆರೆಸ್ಸೆಸ್ ನಾಯಕರು ಅಣ್ಣಾ ಹಜಾರೆಯ ಸತ್ಯಾಗ್ರಹಕ್ಕೆ ಬೆಂಬಲಿಸಿದ್ದು ಈಗ ಎಲ್ಲರಿಗೂ ಗೊತ್ತಿದೆ. ಅಷ್ಟು ಸಾಲದೆಂಬಂತೆ ಒಮಿಡಿಯಾರ್ ಕಂಪನಿ ಏನು ಮಾಡಿತೆಂದರೆ ಜನಾಗ್ರಹ ಎಂಬ ಎನ್‌ಜಿಒಗೆ ಒಳಗಿಂದೊಳಗೇ ಕುಮ್ಮಕ್ಕು ಕೊಟ್ಟು ಅದನ್ನೂ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲು ಪ್ರೋತ್ಸಾಹಿಸಿದ್ದು. ಬೆಂಗಳೂರಿನವನೇ ಆದ ರಮೇಶ್ ರಾಮನಾಥನ್ ಎಂಬಾತ ಪ್ರಾರಂಭಿಸಿರುವ ಈ ಜನಾಗ್ರಹ ಎಂಬ ಕೊಟ್ಟಿ ಜನಪರ ಸಂಸ್ಥೆ ಅಮೆರಿಕಾದ ಯುಎಸ್‌ಏಡ್ ಎಂಬ ಸಂಸ್ಥೆಯ ಮೇಲೆ ಅದೆಂತಹ ಮಂಕುಬೂದಿ ಎರಚಿತೆಂದರೆ ಯುಎಸ್‌ಏಡ್ ಜನಾಗ್ರಹಕ್ಕೆ ಬರೋಬ್ಬರಿ 55 ಮಿಲಿಯನ್ ಡಾಲರ್‌ಗಳನ್ನು ದಾನ ಮಾಡಿತು!

ವಾಸ್ತವವಾಗಿ ಈ ಜನಾಗ್ರಹ ಸಂಸ್ಥೆಯು 2005ರಲ್ಲೇ ಬೆಂಗಳೂರಿನಲ್ಲಿ ಕುಡಿಯುವ ನೀರಿನ ಖಾಸಗೀಕರಣವನ್ನು ವಿರೋಧಿಸುತ್ತೇನೆಂದು ಹೇಳುತ್ತಲೇ ವರ್ಲ್ಡ್ ಬ್ಯಾಂಕ್ ಹಮ್ಮಿಕೊಂಡಿದ್ದ ಕುಡಿಯುವ ನೀರಿನ ಖಾಸಗೀಕರಣದೊಂದಿಗೆ ಕೈಜೋಡಿಸಿ ಬಟಾಬಯಲಾಗಿತ್ತು. ಆದರೇನಂತೆ, ಮೋದಿಯನ್ನು ಅಧಿಕಾರಕ್ಕೆ ತರಬೇಕು, ಆ ಮೂಲಕ ವಿದೇಶಿ ಕಂಪನಿಗಳಿಗೆ ಮಿಲಿಯನ್‌ಗಟ್ಟಲೆ ಲಾಭ ಕೊಡಿಸಬೇಕು ಎಂಬ ನಿಟ್ಟಿನಲ್ಲಿ ಕಂತ್ರಿಗಳನ್ನೂ ಮುದ್ದಾಡುತ್ತವೆ ಒಮಿಡಿಯಾರ್ ತರಹದ ಜನದ್ರೋಹಿ ಸಂಸ್ಥೆಗಳು.

ಅಂದಹಾಗೆ ಈ ಒಮಿಡಿಯಾರ್ ಅಂತಿಂತಹ ಕಂಪನಿಯಲ್ಲ. ಈ ಹಿಂದೆ ಇದೇ ಒಮಿಡಿಯಾರ್ ಎಸ್‌ಕೆಎಸ್ ಎಂಬ ಮೈಕ್ರೋ ಫೈನಾನ್ಸ್ ಕಂಪನಿಯನ್ನು ಹುಟ್ಟುಹಾಕಿತ್ತು. ಮಹಿಳೆಯರ ಮತ್ತು ರೈತರ ಸಬಲೀಕರಣ ಮಾಡುತ್ತೇವೆಂದು ಹೇಳುತ್ತಿದ್ದ ಈ ಎಸ್‌ಕೆಎಸ್ ಕಂಪನಿಯು ಭಾರತದಾದ್ಯಂತ ಸಾವಿರಾರು ಜನರಿಗೆ ಚಿಕ್ಕಪುಟ್ಟ ಸಾಲಗಳನ್ನು ನೀಡಿತ್ತು. ಆ ಸಾಲವನ್ನು ಸಕಾಲದಲ್ಲಿ ತೀರಿಸಲಾಗದವರನ್ನು ಎಸ್‌ಕೆಎಸ್ ಕಂಪನಿಯ ಏಜೆಂಟರು ಎಷ್ಟು ಹೀನಾಯವಾಗಿ ಸತಾಯಿಸಲಾರಂಭಿಸಿದರೆಂದರೆ ಆಂಧ್ರಪ್ರದೇಶ ರಾಜ್ಯವೊಂದರಲ್ಲೇ ಸುಮಾರು ಇನ್ನೂರು ಮಹಿಳೆಯರು ಮತ್ತು ರೈತರು ಆತ್ಮಹತ್ಯೆಗೆ ಶರಣಾಗಿದ್ದರು.

ಅಷ್ಟೇ ಅಲ್ಲ, ಇದೇ ಇಮಿಡಿಯಾರ್ ಮತ್ತು ಯುಎಸ್‌ಏಡ್ ಜೊತೆಗೂಡಿ ಯುಕ್ರೇನ್ ದೇಶದಲ್ಲಿ ಹಲವು ಎನ್‌ಜಿಒಗಳನ್ನು ಹುಟ್ಟುಹಾಕಿ ಅವುಗಳಿಗೆ ಹಣದ ಹೊಳೆಯನ್ನೇ ಹರಿಸಿದ್ದವು. ಆ ಎನ್‌ಜಿಒಗಳ ಕೆಲಸ ಏನೆಂದರೆ ಅಲ್ಲಿಯ ಸರ್ಕಾರದ ವಿರುದ್ಧ ಹೋರಾಟ ಮಾಡುವುದು. ಇದರಲ್ಲಿ ಆ ಎನ್‌ಜಿಒಗಳು ಎಷ್ಟು ಯಶಸ್ವಿಯಾದವೆಂದರೆ ಕಳೆದ ಫೆಬ್ರವರಿಯಲ್ಲಿ ಯುಕ್ರೇನ್ ಸರ್ಕಾರ ಪತನಗೊಂಡಿತು. ಅಂದರೆ ಆ ಮೂಲಕ ಆ ದೇಶದ ಮೇಲೆ ಒಮಿಡಿಯಾರ್ ಮತ್ತು ಯುಎಸ್‌ಏಡ್ ಸಂಸ್ಥೆಗಳಿಗೆ ಹಿಡಿತ ಸಿಕ್ಕಿತು.

ಅದನ್ನೇ ಈಗ ಒಮಿಡಿಯಾರ್ ಭಾರತದಲ್ಲೂ ಸಾಧಿಸಲು ಸಜ್ಜಾಗಿದೆ.

ಇ ಕಾಮರ್ಸ್ ಬಗ್ಗೆ ಮೋದಿ ಒಲವು

ಜಯಂತ್ ಸಿನ್ಹಾ ಒಮಿಡಿಯಾರ್ ಮುಖ್ಯಸ್ಥನಾಗಿ ಮಾಡಿದ ಕೆಲವು ಕೆಲಸಗಳಲ್ಲಿ ಮುಖ್ಯವಾದದ್ದು ಮೋದಿಯನ್ನು ಜೆಪಿ ಮಾರ್ಗನ್, ಮಾರ್ಗನ್ ಸ್ಟಾನ್ಲೆ ಮತ್ತು ನೊಮುರಾ ಬ್ಯಾಂಕ್ ತರಹದ ಜಾಗತಿಕ ಬಂಡವಾಳಶಾಹಿ ಕಂಪನಿಗಳಿಗೆ ಪರಿಚಯಿಸಿದ್ದು. ಹಾಗೆಯೇ ಗೂಗಲ್ ತರಹದ ಜಾಲತಾಣಗಳಿಗೆ ಪರಿಚಯಿಸಿ ಅವು ಮೋದಿ ಪರವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಂಡಿದ್ದು.


ಕಳೆದ ಫೆಬ್ರವರಿ ತನಕ ಮೋದಿ ಪರವಾಗಿ ಪರೋಕ್ಷವಾಗಿ ಕೆಲಸ ಮಾಡಿದ್ದ ಜಯಂತ್ ಆನಂತರ ಒಮಿಡಿಯಾರ್ ಕಂಪನಿಯನ್ನು ತೊರೆದು ಪ್ರತ್ಯಕ್ಷವಾಗಿ ಮೋದಿ ಬೆಂಬಲಕ್ಕೆ ನಿಂತ. ಆತನ ತಂದೆ ಯಶವಂತ್ ಸಿನ್ಹಾನ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ ಜಯಂತ್ ಗೆದ್ದೂ ಬಿಟ್ಟ.

ಕಾಕತಾಳೀಯವೆಂಬಂತೆ ಅದೇ ಹೊತ್ತಿಗೆ ಮೋದಿ ಕೂಡ ತಾನು ಪ್ರಧಾನಿ ಆದರೆ ಇ-ಕಾಮರ್ಸ್ ಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಹೂಡಿಕೆಗೆ ಅನುವು ಮಾಡಿಕೊಡುತ್ತೇನೆಂದು ಘೋಷಿಸಿದ! ಇಷ್ಟು ಸಾಕಾಗಿತ್ತು, ಇ-ಕಾಮರ್ಸ್ ಕ್ಷೇತ್ರದಲ್ಲಿ ಅಪಾರ ಹಣವನ್ನು ಹೂಡಿರುವ ವಿದೇಶಿ ಕಂಪನಿಗಳೂ ಮೋದಿ ಬೆಂಬಲಕ್ಕೆ ನಿಲ್ಲಲು!!

ಆಧುನಿಕ ತಂತ್ರಜ್ಞಾನಕ್ಕೂ ದೇಶದ ಅಭಿವೃದ್ಧಿಗೂ ಅಂತಹ ನಂಟೇನಿಲ್ಲ, ಉದಾಹರಣೆಗೆ ಅಡಾಲ್ಫ್ ಹಿಟ್ಲರ್ ಕೂಡ "ತಂತ್ರಜ್ಞಾನ ಅಂದರೆ ನನಗೆ ಹುಚ್ಚು" ಅಂದಿದ. ಮಾತ್ರವಲ್ಲ ರಾಕೆಟ್ ಸೈನ್ಸ್, ಏರೋಸ್ಪೇಸ್ ಮತ್ತು ಆಧುನಿಕ ತಂತ್ರಜ್ಞಾನದ ಅಭಿವೃದ್ಧಿಗೆ ಆತ ಹೆಚ್ಚು ಒತ್ತು ಕೊಟ್ಟಿದ್ದ. ಆ ಕಾರಣಕ್ಕೇ ಐಬಿಎಂ ತರಹದ ದೊಡ್ಡ ಕಂಪನಿಗಳು ಆತನಿಗೆ 'ಪಂಚ್ ಕಾರ್ಡ್' ತರಹದ ಕಂಪ್ಯೂಟರ್‌ಗಳನ್ನು ಅಭಿವೃದ್ಧಿ ಮಾಡಿಕೊಟ್ಟಿತ್ತು. ಈ 'ಪಂಚ್ ಕಾರ್ಡ್' ಕಂಪ್ಯೂಟರ್‌ಗಳನ್ನೇ ಹಿಟ್ಲರ್ ಯಹೂದಿಯರ ಮಾರಣಹೋಮಕ್ಕೆ ಉಪಯೋಗಿಸಿಕೊಂಡಿದ್ದ ಎಂಬುದನ್ನು ಯಾರೂ ಮರೆಯಬಾರದು.

ಮೋದಿಯ ಹಿಂದೂರಾಷ್ಟ್ರವಾದವೂ, ಒಮಿಡಿಯಾರ್ ತರಹದ ಬಂಡವಾಳಶಾಹಿ ಕಂಪನಿಗಳ ಸ್ವಹಿತಾಸಕ್ತಿಗಳೂ ಜೊತೆಗೂಡಿದರೆ ಇಲ್ಲಿ ದೊಡ್ಡ ದುರಂತವಲ್ಲದೇ ಮತ್ತೇನೂ ಸಂಭವಿಸುವುದಿಲ್ಲ ಎಂಬ ವಾಸ್ತವವನ್ನು ಎಲ್ಲರೂ ಅರಿಯಬೇಕು.

● ಅಶೋಕ್



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಚಿರತೆಯ ಹುಡುಕಾಟ

ನಾನು ಗುರಿಯನ್ನು ತಪ್ಪಿರಲಾರೆ ಎಂಬ ನಂಬಿಕೆಯಿದ್ದರೂ ಚಿರತೆಯ ಶವ ಸಿಕ್ಕಮೇಲೆ ಮಾತ್ರ ಅದು ಖಾತ್ರಿಯಾಗುತ್ತಿತ್ತು, ಕೋಣಗಳನ್ನು ಕಾಡಿನಲ್ಲಿ ಅಟ್ಟಿ ಚಿರತೆಯೇನಾದರೂ ಬದುಕಿ ಉಳಿದಿದೆಯೇ ಎಂದು ಪರೀಕ್ಷಿಸುವ ನನ್ನ ಯೋಜನೆಗೆ ಹಳ್ಳಿಯವರು ಸಹಕರಿಸಲಿಲ್ಲ, ಹಾಗಾಗಿ ರಂಗಸ್ವಾಮಿಗೆ ಬೇಟೆಯ ನಾಯಿಯೊಂದನ್ನು ಹುಡುಕಿ ಕೊಡಲು ಹೇಳಿದೆ. ಬಹಳ ಕಷ್ಟದಲ್ಲಿ ಎತ್ತರದ, ಉದ್ದವಾದ ಡೊಂಕು ಬಾಲದ ಬಡಕಲು ಹೆಣ್ಣು ನಾಯಿಯೊಂದು ಸಿಕ್ಕಿತು. ಅದರ ಹೆಸರು 'ಕುಷ್'. ಸೇಲಂ ಜಿಲ್ಲೆಯ ಹೆಚ್ಚಿನ ನಾಯಿ ಮಾಲಿಕರ ಇಷ್ಟದ ಹೆಸರು ಇದು. ನಾಯಿಯ ಗಮನ ಸೆಳೆಯಲು 'ಹುಷ್' ಎಂದು ಕರೆಯುತ್ತಾರಲ್ಲಾ ಅದಕ್ಕೆ ಪ್ರಾಸಬದ್ಧವಾಗಿರುವುದರಿಂದ ಈ ಹೆಸರು ಹುಟ್ಟಿರಬೇಕು ಎನ್ನುವುದು ನನ್ನ ತರ್ಕ!

ರಂಗಸ್ವಾಮಿ, ದನಗಾಹಿ ಕುಷ್‌ನ ಮಾಲಿಕ ಮತ್ತು ಕುಷ್‌ನೊಡಗೂಡಿ ಚಿರತೆಯನ್ನು ಅರಸಲು ಹೊರಟೆನು. ನಾನು ಗುಂಡುಹಾರಿಸಿದ ಜಾಗದಿಂದ ನಮ್ಮ ಹುಡುಕಾಟ ಆರಂಭಿಸಬೇಕೆಂದು ನಾನು ಬಯಸಿದ್ದೆ. ಆದರೆ ಆ ಸ್ಥಳವನ್ನು ಹುಡುಕಲು ಆಗಲೇ ಇಲ್ಲ, ರಾತ್ರಿಯಲ್ಲಿ ಪೊದೆಗಳ, ಗಿಡಗಂಟೆಗಳ ಆಕಾರ, ಗಾತ್ರ, ದಿಕ್ಕು ಎಲ್ಲವೂ ಬೇರೆಯದೇ ಆಗಿ ಕಾಣುವುದರಿಂದ ಹಗಲಿನಲ್ಲಿ ಅವುಗಳನ್ನು ಗುರುತಿಸುವುದು ಸುಲಭವಲ್ಲ ಎಂದು ಕಾಡಿನಲ್ಲಿ ಅಲೆಯುವವರಿಗೆಲ್ಲಾ ಗೊತ್ತಿರುತ್ತದೆ. ಸಾಮಾನ್ಯ ಗಿಡಗಂಟಿಗಳೂ ಕೂಡ ರಾತ್ರಿಯಲ್ಲಿ ಭಾರೀ ದೊಡ್ಡದಾಗಿ ಕಾಣುತ್ತದೆ.

ಆದರೆ ಆ ದನಗಾಹಿ ಹಸುವಿನ ಶವವಿದ್ದ ಸ್ಥಳಕ್ಕೆ ನಮ್ಮನ್ನು ಸುಲಭವಾಗಿ ಕರೆದುಕೊಂಡು ಹೋದ. ಚಿರತೆ ಶವವನ್ನು ಅರ್ಧ ಮಾತ್ರ ತಿಂದಿತ್ತು. ಈ ಸ್ಥಳವನ್ನು ಗುರುತಾಗಿ ಇಟ್ಟುಕೊಂಡು ನಾನು ರಾತ್ರಿ ನಡೆದು ಬಂದ ದಿಕ್ಕು, ಗುಂಡುಹೊಡೆದ ಸ್ಥಳದ ದೂರ ಮುಂತಾದವುಗಳನ್ನೆಲ್ಲಾ ಅಂದಾಜು ಮಾಡತೊಡಗಿದೆ. ಚಿರತೆ ಇನ್ನೂ ಜೀವಂತವಿದ್ದಿದ್ದರೆ ನಮ್ಮ ಗಲಾಟೆಯನ್ನು ಇಷ್ಟರೊಳಗೆ ಕೇಳಿ ಆಕ್ರಮಣ ಮಾಡಬೇಕಿತ್ತು, ಹಾಗಾಗಿ ಅದು ಈ ಸ್ಥಳದ ಸುತ್ತಮುತ್ತಲೂ ಇರುವುದಂತೂ ಸಾಧ್ಯವಿರಲಿಲ್ಲ, ಅಂದರೆ ನಾನು ಹೊಡೆದ ಗುಂಡು ಅದನ್ನು ದೂರ ಕರೆದುಕೊಂಡು ಹೋಗಲಾರದಷ್ಟು ದೊಡ್ಡ ಗಾಯವನ್ನು ಮಾಡಿರಲಾರದು ಎಂದುಕೊಂಡೆ.

ರಾತ್ರಿ ನಾನು ಗುಂಡು ಹೊಡೆದ ಸ್ಥಳವನ್ನು ಗುರುತಿಸುವುದಕ್ಕಾಗದೆ, ಚಿರತೆ ಹೋಗಿರಬಹುದಾದ ದಿಕ್ಕನ್ನು ನಿರ್ಧರಿಸಲು ನಾವು ರಕ್ತದ ಕಲೆಗಳನ್ನು ಪತ್ತೆಹಚ್ಚಬೇಕೆಂದು ಎಲ್ಲರಿಗೂ ಹೇಳಿದೆ. ಸ್ವಲ್ಪ ಸಮಯದಲ್ಲಿ ನಮ್ಮೆಲ್ಲರಿಗಿಂತ ಮೊದಲು ಕುಷ್ ಹುಲ್ಲಿನ ಮೇಲಿದ್ದ ಒಣಗಿದ ರಕ್ತದ ಕಲೆಯನ್ನು ಗುರುತಿಸಿ ತನ್ನ ಒಡೆಯನ ಗಮನ ಸೆಳೆಯಿತು. ನನ್ನ ಗುರಿ ತಪ್ಪಿರಲಿಲ್ಲವೆಂದು ಸೂಚನೆ ಸಿಕ್ಕೊಡನೆ ನಾನು ಉತ್ಸಾಹಿತನಾದೆ. ರಕ್ತ ಬಿದ್ದಿರುವ ಸ್ಥಳವನ್ನು ನೋಡಿದರೆ ನಾನು ಚಿರತೆಯ ದೇಹದ ಮೇಲ್ಭಾಗವನ್ನು ಗಾಯಗೊಳಿಸಿರಬೇಕು ಅನ್ನಿಸಿತು. ನಾನು ಅದರ ಕಣ್ಣುಗಳ ಮಧ್ಯೆ ಗುರಿ ಇಟ್ಟಿದ್ದರಿಂದ ಗುಂಡು ಅದರ ತಲೆಗೆ ಹೊಡೆದಿರುವ ಸಾಧ್ಯತೆಗಳೇ ಹೆಚ್ಚು, ಹಾಗೊಮ್ಮೆ ಚಿರತೆ ಆ ಕ್ಷಣದಲ್ಲಿ ದೇಹದ ಮುಂದಿನ ಭಾಗವನ್ನು ಬಾಗಿಸಿದ್ದರೆ ಗುಂಡು ಅದರ ಬೆನ್ನಿನ ಭಾಗಕ್ಕೆ ತಗುಲಿರುವ ಸಾಧ್ಯತೆ ಇತ್ತು.



ಕುಷ್ ಬೇಟೆಯ ಯಾವುದೇ ತರಬೇತಿ ಪಡೆಯದಿದ್ದರೂ ಇಲ್ಲಿಂದ ಮುಂದೆ ತನ್ನ ಕ್ಷಮತೆಯನ್ನು ತೋರಿಸಿತು. ನಮ್ಮ ಅಗತ್ಯವೇನೆಂದು ಗುರುತಿಸಿದ ಅದು ರಕ್ತದ ಜಾಡನ್ನು ಹುಡುಕಲು ಸುತ್ತಲಿನ ಜಾಗವನ್ನು ಮೂಸಿ ನೋಡತೊಡಗಿತು. ಕೆಲವೇ ಕ್ಷಣಗಳಲ್ಲಿ ಏನನ್ನೋ ಗುರುತಿಸಿದ ಕುಷ್ ನಮ್ಮಿಂದ ಮುಂದೆ ಓಡತೊಡಗಿತು. ಅದನ್ನು ಹಿಂಬಾಲಿಸಿದ ನಮಗೆ ಎಲೆಗಳು ಮತ್ತು ಹುಲ್ಲಿನ ಮೇಲೆ ಇನ್ನೂ ಹೆಚ್ಚಿನ ರಕ್ತದ ಕಲೆಗಳು ಕಾಣತೊಡಗಿದವು. ಚಿರತೆಗೆ ಆಗಿದ್ದ ಗಾಯ ಆಳವಾಗಿತ್ತು ಎನ್ನುವುದಕ್ಕೆ ಇದು ಪುರಾವೆಯಾಗಿತ್ತು, ಕೆಲವು ತಂಪಿನ ಜಾಗದಲ್ಲಿ ಹೊರತಾಗಿಸಿದರೆ ಉಳಿದ ಕಡೆ ರಕ್ತ ಒಣಗಿಹೋಗಿತ್ತು, ಆದರೆ ಶ್ವಾಸಕೋಶದಂತಹ ದೇಹದ ಪ್ರಮುಖ ಅಂಗಗಳಿಗೆ ಹಾನಿಯಾಗಿದೆ ಎಂದು ಸೂಚಿಸುವಷ್ಟು ಗಾಢ ಬಣ್ಣದ ರಕ್ತದ ಗುರುತುಗಳಿರಲಿಲ್ಲ.

ಕುಷ್ ಈಗ ಪಶ್ಚಿಮದ ಹೊಳೆಯ ಕಡೆ ಜೋರಾಗಿ ಓಡುತ್ತಿತ್ತು, ಆನೇಕಲ್ ವಂಕ ಎಂದು ಕರೆಸಿಕೊಳ್ಳುತ್ತಿದ್ದ ಇದು ಮುಂದೆ ದೊಡ್ಡ ಹಳ್ಳವೆಂಬ ಹೆಸರಿನ ಇನ್ನೊಂದು ಹೊಳೆಗೆ ಸೇರುತ್ತಿತ್ತು, ಈ ಹೊಳೆ ಕಾವೇರಿ ನದಿಗೆ ಸೇರುವವರೆಗಿನ ಎಲ್ಲಾ ಪ್ರದೇಶದಲ್ಲಿ ನಾನು ಸಾಕಷ್ಟು ಅನ್ವೇಷಣೆ ಮಾಡಿದ್ದೇನೆ. ಇಲ್ಲಿ ನನಗೆ ಕಾಣಿಸಿದ ಕೆಲವು ಭೂಗರ್ಭದ ಗುಟ್ಟುಗಳನ್ನು ಹೇಳಿದರೆ ಸೇಲಂ ಜಿಲ್ಲೆಯ ಜನಜಂಗುಳಿಯಿಂದ ದೂರವಿರುವ ಅತ್ಯಂತ ಶ್ರೀಮಂತವಾದ ಅರಣ್ಯ ಪ್ರದೇಶವನ್ನು ನಾಶಮಾಡಲು ಆಹ್ವಾನವಿತ್ತಂತಾಗುತ್ತದೆ.



ದಟ್ಟವಾದ ಪೊದೆಗಳ ಮಧ್ಯೆ ಕುಷ್ ಈಗ ಸರಾಗವಾಗಿ ಓಡುತ್ತಿತ್ತು, ನಮಗೆ ಅದನ್ನು ಹಿಂಬಾಲಿಸುವುದೇ ದೊಡ್ಡ ಕಷ್ಟದ ಕೆಲಸವಾಗಿತ್ತು, ಗಿಡಗಂಟಿಗಳಲ್ಲಿನ ಮುಳ್ಳಿನಿಂದ ಚುಚ್ಚಿಸಿಕೊಳ್ಳುತ್ತಾ ಸುತ್ತಲು ಎಲ್ಲಾದರೂ ಗಾಯಗೊಂಡ ಚಿರತೆ ಅಡಗಿದೆಯೇ ಎನ್ನುವ ಪ್ರಜ್ಞೆಯೂ ಇಲ್ಲದೆ ನಾವು ಕುಷ್‌ನನ್ನು ಹಿಂಬಾಲಿಸುತ್ತಿದ್ದೆವು. ನಮ್ಮ ವೇಗ ಸ್ವಲ್ಪವೇ ಕಡಿಮೆಯಾದ ತಕ್ಷಣ ಕಣ್ಮರೆಯಾಗುತ್ತಿದ್ದ ಅದನ್ನು ಸೀಟಿ ಹೊಡೆದು ಮತ್ತೆ ಹಿಂದಕ್ಕೆ ಕರೆಸಬೇಕಾಗುತ್ತಿತ್ತು, ಕುಷ್‌ನ ಓಟವನ್ನು ಹಿಡಿತದಲ್ಲಿಡಲು ಅದರ ಮಾಲಿಕನ ರುಮಾಲನ್ನು ಕುಷ್‌ನ ಕುತ್ತಿಗೆಗೆ ಬಿಗಿದು ಹಿಡಿದುಕೊಳ್ಳಲು ಹೇಳಿದೆ. ಇದೂ ಕೂಡ ಸುಲಭದ ಕೆಲಸವಾಗಿರಲಿಲ್ಲ, ಹೀಗೆ ನಡೆಯುತ್ತಾ ನಾವು ಆನೇಕಲ್ ವಂಕವನ್ನು ತಲುಪುವ ಇಳಿಜಾರಿಗೆ ಬಂದೆವು. ಬೇಸಿಗೆಯ ಆ ಸಮಯದಲ್ಲಿ ಹೊಳೆ ಮುಕ್ಕಾಲು ಪಾಲು ಒಣಗಿಹೋಗಿತ್ತು.

ಚಿರತೆ ಗಾಯದಿಂದ ಆದ ರಕ್ತಸ್ರಾವದಿಂದ ಬಳಲಿತ್ತು ಎನ್ನುವುದಕ್ಕೆ ಇಲ್ಲಿ ಸೂಚನೆಗಳು ಸಿಕ್ಕವು. ಮರವೊಂದರ ಕೆಳಗೆ ಹುಲ್ಲಿನ ಮೇಲೆ ಅದು ನೋವಿನಿಂದ ಹೊರಳಾಡಿತ್ತು, ಕುಷ್ ಈ ಸ್ಥಳವನ್ನು ದೀರ್ಘವಾಗಿ ಪರಿಶೀಲನೆ ಮಾಡಿದ್ದಲ್ಲದೆ ಅಲ್ಲಿನ ರಕ್ತವನ್ನು ನೆಕ್ಕಿ ನೋಡಿತು. ಸಾಮಾನ್ಯವಾಗಿ ಹಳ್ಳಿಯ ಬೇಟೆನಾಯಿಗಳು ಚಿರತೆಗೆ ಹೆದರುತ್ತವೆ. ಆದರೆ ಕುಷ್ ಅಸಾಮಾನ್ಯ ನಾಯಿಯಾಗಿದ್ದು ನಮ್ಮ ಜೊತೆ ಬಂದಿದ್ದು ನಮ್ಮ ಅದೃಷ್ಟವೇ ಆಗಿತ್ತು, ಇದರ ಸಹಾಯವಿಲ್ಲದಿದ್ದರೆ ನಮಗೆ ಆ ದಟ್ಟವಾದ ಕಾಡಿನಲ್ಲಿ ರಕ್ತದ ಜಾಡನ್ನು ಹಿಡಿದು ಹೋಗುವುದು ಸಾಧ್ಯವೇ ಇರಲಿಲ್ಲ.

ನಾವು ಹಳ್ಳದ ಕಡೆ ಇಳಿಯುತ್ತಿದ್ದಂತೆ ಗಿಡಗಂಟಿಗಳು ಕಡಿಮೆಯಾದರೂ ಕಲ್ಲುನೆಲ ಮತ್ತು ಚೂಪಾದ ಅಲುಗಿನಂತಹ ಎಲೆ ಇರುವ ಹುಲ್ಲಿನ ಮಧ್ಯೆ ಹಾದುಹೋಗಬೇಕಾಗಿತ್ತು, ಆದರೆ ರಕ್ತದ ಜಾಡನ್ನು ಹಿಡಿಯುವುದು ಸುಲಭವಾಗಿತ್ತು, ನಾವು ಬಂದ ದೂರವನ್ನು ಮತ್ತು ಚಿರತೆಗೆ ಆಗಿರುವ ರಕ್ತಸ್ರಾವವನ್ನು ಗಮನಿಸಿದರೆ ಗಾಯ ನಾನೆಣಿಸಿದ್ದಕ್ಕಿಂತಲೂ ತೀವ್ರವಾಗಿರಬೇಕು ಅನ್ನಿಸಿತು. ಗುಂಡು ಪ್ರಮುಖ ರಕ್ತನಾಳವನ್ನು ಹಾನಿಮಾಡಿದೆ ಎನ್ನುವುದು ನಿಶ್ಚಿತವಾಗಿತ್ತು, ಹಳ್ಳದ ಬಳಿ ಚಿರತೆ ತನ್ನ ದಾಹವನ್ನು ತಣಿಸಿಕೊಂಡು ಮುಂದುವರೆದಿತ್ತು, ನಾನು ಒಂದೇ ಗುಂಡನ್ನು ಹಾರಿಸಿದ್ದರೂ ಎರಡು ಗಾಯಗಳಿಂದ ರಕ್ತ ಹೊರಬಂದ ಸೂಚನೆಗಳಿದ್ದವು. ರಕ್ತದ ಮಡುವಿನಲ್ಲಿ ಮೂಡಿದ್ದ ಚಿರತೆಯ ಹೆಜ್ಜೆ ಗುರುತನ್ನು ನೋಡಿ ಇದು ಸಾಮಾನ್ಯ ಗಾತ್ರದ ಗಂಡು ಎಂದು ತೀರ್ಮಾನಿಸಿದೆ.

ಹಳ್ಳವನ್ನು ದಾಟಿದ ಚಿರತೆ ಸ್ವಲ್ಪ ದೂರ ದಂಡೆಯಲ್ಲೇ ನಡೆದು ನಂತರ ಎದುರಿನ ಬೆಟ್ಟವನ್ನೇರಿ ಹೋಗಿತ್ತು, ಮುಂದೆ ಮತ್ತೆ ಕಾಡು ದಟ್ಟವಾಗತೊಡಗಿತ್ತು, ಕುಷ್ ಮಾತ್ರ ಈ ಕೆಲಸಕ್ಕಾಗಿಯೇ ತರಬೇತಿ ಹೊಂದಿದ ಬೇಟೆನಾಯಿಯಂತೆ ಮುಂದುವರೆಯುತ್ತಲೇ ಇತ್ತು, ದೆಂಕನಿಕೊಟ್ಟದಿಂದ ಅಂಚೆಟ್ಟಿಗೆ ಹೋಗುವ ರಸ್ತೆಯನ್ನು ಹಾದು ನಾವು ಮುಳ್ಳುಗಳು ಮತ್ತು ಲಂಟಾನಾ ಪೊದೆಗಳಿದ್ದ ಅರಣ್ಯವನ್ನು ಪ್ರವೇಶಿಸಿದೆವು. ಬಟ್ಟೆಯನ್ನೆಲ್ಲಾ ಹರಿದುಕೊಂಡು, ಮೈತುಂಬಾ ಗಾಯ ಮಾಡಿಕೊಳ್ಳುತ್ತಾ, ಕೆಲವೊಂದು ಕಡೆ ಲಂಟಾನದ ಪೊದೆಗಳಡಿ ತೆವಳು... ನಾವು ಹೋಗಬೇಕಾಗಿತ್ತು, ಈ ಪರಿಸ್ಥಿತಿಯಲ್ಲಿ ನನ್ನ ಬಂದೂಕು ದೊ... ಭಾರವಾಗಿತ್ತು, ಆದರೆ ಕುಷ್ ಮಾತ್ರ ಆಗಾಗ ಹಿಂತಿರುಗಿ ನೋಡುತ್ತಾ ನಾ... ಬರುತ್ತಿದ್ದ ಆಮೆ ವೇಗಕ್ಕೆ ತನ್ನ ಅಸಹನೆ ವ್ಯಕ್ತಪಡಿಸುತ್ತಿತ್ತು!

ಜೇನುಗಳ ಆಕ್ರಮಣ

ಚಿರತೆ ಕುಂದುಕೊಟ್ಟೈ ಗ್ರಾಮದ ಹತ್ತಿರವಿದ್ದ ದೊಡ್ಡ ಬೆಟ್ಟವೊಂದ... ಹೋಗಿತ್ತು ಎಂಬುದು ಸ್ಪಷ್ಟವಾಗತೊಡಗಿತು. ಈ ಬೆಟ್ಟದ ತುದಿಯಲ್ಲಿ ಸ... ಮತ್ತು ದೊಡ್ಡದಾದ ಹಲವಾರು ಗುಹೆಗಳಿದ್ದವು. ಇನ್ನೂ ಅಪಾಯಕಾರಿಯಾ... ವಿಚಾರವೆಂದರೆ ಈ ಗುಹೆಗಳ ಬಾಗಿದ ಒಳ ಮೇಲ್ಭಾವಣಿಯಲ್ಲಿ ಕಾಡಿ... ಕಲ್ಲುಜೇನುಗಳು ಗೂಡು ಕಟ್ಟಿರುತ್ತಿದ್ದವು. ಹಿಂದೆ ಈ ದಾರಿಯಲ್ಲಿ ಓಡಾಡುವಾ... ನಾನು ಇಂತಹ ಜೇನುಗೂಡುಗಳನ್ನು ನೋಡಿದ್ದೆ. ಈ ಜೇನುಗಳನ್ನು ಕೆರಳಿಸುವುದ... ಬಹಳ ಅಪಾಯಕಾರಿಯಾಗಬಹುದಿತ್ತು, ಇಂತಹ ಪರಿಸ್ಥಿತಿಯಲ್ಲಿ ಕಪ... ಚಿರತೆಯನ್ನು ನಾನು ಪಡೆದುಕೊಳ್ಳುವ ಸಾಧ್ಯತೆಗಳು ಬಹಳ ಕಡಿಮ... ಅನ್ನಿಸತೊಡಗಿತು.

ರಕ್ತದ ಗುರುತಿನ ಜಾಡನ್ನು ಹಿಡಿದು ಮುಂದುವರೆದಂತೆ ನಾವು ಒಂದ... ದೊಡ್ಡ ಗುಹೆಯ ಮುಖವನ್ನು ತಲುಪಿದೆವು. ನಾವು ನಿಂತ ಸ್ಥಳದಿಂದ ಆರೆಂಟ... ದೊಡ್ಡದಾದ ಜೇನುಗೂಡುಗಳು ಆ ಗುಹೆಯ ಮೇಲ್ಭಾವಣಿಯಿಂ... ನೇತಾಡುತ್ತಿರುವುದು ಕಂಡುಬರುತ್ತಿತ್ತು, ಇವುಗಳ ಮಧ್ಯೆ ಹಳೆಯ ಗೂಡುಗಳ... ಮತ್ತು ಜೇನುಮೇಣದ ಮುದ್ದೆಗಳೂ ಕೂಡ ಅಲ್ಲಲ್ಲಿ ಅಂಟಿಕೊಂಡಿತ್ತು, ನಮ... ಮುಂದಿರುವ ಬಂಡೆಯನ್ನೇರಿ ಗುಹೆಯ ಬಾಗಿಲನ್ನು ತಲುಪಿದೆವು. ಲಕ್ಷಾಂತ... ಜೇನುಹುಳುಗಳು ಗೂಡಿನ ಸುತ್ತಮುತ್ತ ಹಾರಾಡುತ್ತಿದ್ದುದರಿಂದ ಇಡೀ ಗುಹ... ಅವುಗಳ ಝೇಂಕಾರದ ಸದ್ದಿನಿಂದ ತುಂಬಿಹೋಗಿತ್ತು. ಈ ಪುಟಾಣಿ ಕೀಟಗಳು... ನಮ್ಮ ಬರವನ್ನು ಗಮನಿಸದೆ ತಮ್ಮ ಕಾರ್ಯದಲ್ಲಿ ತೊಡಗಿಕೊಂಡಿದ್ದವು... ಆದರೆ ನಾವು ಅವುಗಳ ಶಾಂತಿಯನ್ನು ಭಂಗಪಡಿಸಿದ್ದರೆ ಅವು ನಮ್ಮ ಮೇಲೆ... ಮುಗಿಬಿದ್ದು ವಿಷದ ಮುಳ್ಳುಗಳನ್ನು ನೆಟ್ಟು ಕೆಲವೇ ನಿಮಿಷಗಳಲ್ಲಿ ನಮ್ಮ... ಸಾವಿಗೆ ಕಾರಣವಾಗುತ್ತಿದ್ದವು.


ತೆಳುವಾದ ರಕ್ತದ ಕಲೆಗಳು ಗುಹೆಯ ಒಳಗಿನವರೆಗೂ ಕಂಡುಬರುತ್ತಿದ್ದು... ಗಾಯಂಗೊಂಡು ಚಿರತೆ ಒಳಗೆ ಹೋಗಿದ್ದನ್ನು ಸಾಬೀತುಪಡಿಸುತ್ತಿದ್ದವು. ಗುಹೆಯ... ಮುಂಭಾಗ ಇಪ್ಪತ್ತು ಅಡಿ ಅಗಲ ಮತ್ತು ಎತ್ತರವಿದ್ದು ಅದರಿಂದ ಒಳಹರಿಯುವ... ಬೆಳಕು ಸ್ವಲ್ಪ ದೂರ ಮಾತ್ರ ಹೋಗುತ್ತಿತ್ತು, ಭಾರೀ ಗಾತ್ರದ ಒಂಬತ್ತು... ಜೇನುಗೂಡುಗಳು ಎದುರಿಗೆ ಕಂಡವು. ಒಳಗಡೆಯ ನೆಲದ ಮೇಲೆ ಕಲ್ಲು... ಹಾಸು ಒದ್ದೆಯಾಗಿಲ್ಲದಿರುವುದು ಚಿರತೆ ಒಳಗೆ ಅಡಗಿಕೊಂಡಿರುವುದಕ್ಕೆ ಹೆಚ್ಚಿನ... ಸಾಕ್ಷಿಯಾಗಿತ್ತು.

ನಾನು ನನ್ನ ಮೂವರು ಸಂಗಾತಿಗಳಿಗೆ ಗುಹೆಯ ಮುಖದ ಪಕ್ಕದ... ಎತ್ತರದ ಬಂಡೆಯನ್ನೇರಿ ನಿಲ್ಲಲು ಸೂಚಿಸಿದೆ. ಹಾಗೊಮ್ಮೆ ಚಿರತೆ ನನ್ನನ್ನು... ಹಾಯ್ದು ಹೊರಬಂದರೆ ಓಡಬಹುದಾದ ದಾರಿಯಿಂದ ಅವರು ನಿಂತ ಸ್ಥಳ... ದೂರದಲ್ಲಿತ್ತು, ಕುಷ್ ಮತ್ತು ನಾನು ಗುಹೆಯ ಒಳಹೊಕ್ಕೆವು. ಆ ಕ್ಷಣದಿಂದಲೇ... ಕುಷ್‌ಗೆ ಮುಂದಿನ ಅಪಾಯದ ಮುನ್ಸೂಚನೆ ಸಿಕ್ಕಿ ಅದು ತನ್ನ ಹಿಂದಿನ... ಉತ್ಸಾಹವನ್ನು ಕಳೆದುಕೊಂಡಿತು. ಹಾಗಾಗಿ ಅದು ನನ್ನ ಕಾಲಬಳಿಯೇ ಸುತ್ತುತ್ತಾ... ನನಗಿಂತ ಹಿಂದೆ ಉಳಿಯತೊಡಗಿತು!

ನಾನು ಗುಹೆಯಲ್ಲಿ ಸುಮಾರು ಮೂವತ್ತು ಅಡಿ ಹೋಗುವಷ್ಟರಲ್ಲಿ... ಸಂಪೂರ್ಣ ಕತ್ತಲು ಆವರಿಸಿತು. ಚಿರತೆ ಇಂತಹ ಗುಹೆಯಲ್ಲಿ... ಅಡಗಿಕೊಳ್ಳಬಹುದು ಎನ್ನುವುದನ್ನು ಊಹಿಸದಿದ್ದ ನಾನು ಟಾರ್ಚ್ ತಂದಿರಲಿಲ್ಲ... ಈಗ ನನಗೆ ಎರಡು ದಾರಿಗಳಿದ್ದವು. ಮೊದಲನೆಯದು ಹೇಗಾದರೂ ಚಿರತೆಯನ್ನು... ಎಚ್ಚರಿಸಿ ಗುಹೆಯಿಂದ ಹೊರಬರುವಂತೆ ಮಾಡುವುದು. ಎರಡನೆಯದು... ನನ್ನ ಸಂಗಾತಿಗಳನ್ನು ಗುಹೆಯ ಬಾಗಿಲಿನಲ್ಲಿ ಕಾವಲಿಗೆ ನಿಲ್ಲಿಸಿ ನಾನು ಶಿವನಪಳ್ಳಿ... ಹಿಂತಿರುಗಿ ಟಾರ್ಚ್‌ನ್ನು ತರುವುದು. ಎರಡನೆಯ ಆಯ್ಕೆ ಹೆಚ್ಚು ಸುರಕ್ಷಿ... ಮತ್ತು ಖಚಿತವಾದದ್ದಾಗಿದ್ದರೂ ನಾನು ಸೋಮಾರಿತನ ಮಾಡಿದೆ. ಹಾಗಾ... ಮೊದಲನೆ ಆಯ್ಕೆಯನ್ನೇ ಪ್ರಯೋಗಿಸಲು ನಿರ್ಧರಿಸಿದೆ.

ಚಿರತೆಯನ್ನು ಹೊರಗೆ ಕರೆಯಲು ನಾನು ಪದೇಪದೇ ದೊಡ್ಡದಾ... ಕೂಗಿದೆ. ಕುಷ್ ಕೂಡ ಜೋರಾಗಿ ಬೊಗಳಿತು. ಆದರೆ ಆಳವಾದ ಗುಹೆಯ... ಒಳಭಾಗದಲ್ಲಿ ರುದ್ರಮೌನ ಆವರಿಸಿತ್ತು, ಹಾಗಿದ್ದರೆ ಚಿರತೆ ಈಗಾಗಲೇ... ಮೃತಪಟ್ಟಿದೆಯೋ ಅಥವಾ ನಾವು ಬರುವ ಮೊದಲೇ ಇಲ್ಲಿಂ... ಹೊರಹೋಗಿದೆಯೇ? ಈ ಎರಡು ಸಾಧ್ಯತೆಗಳಿಗೂ ಯಾವುದೆ... ಪುರಾವೆಗಳಿರಲಿಲ್ಲ.

ಸುತ್ತಾಲು ಕಣ್ಣಾಡಿಸಿ ಒಂದು ದೊಡ್ಡ ಕಲ್ಲನ್ನು ಹುಡುಕಿದೆ. ಬಲಗೈಯಿಂ...




...ಮೂಕನ್ನು ಸಿದ್ಧವಾಗಿಟ್ಟುಕೊಂಡು ಎಡಗೈಯಿಂದ ಕಲ್ಲನ್ನು ಸಾಧ್ಯವಿರುವಷ್ಟು ...ದ ಎಸೆದೆ. ಕತ್ತಲಲ್ಲಿ ಮಾಯವಾದ ಕಲ್ಲು ನೆಲಕ್ಕೆ ಬಿದ್ದು ಪುಟಿಯುತ್ತಾ ಹೋದ ಶಬ್ದ ಗುಹೆಯಲ್ಲಿ ಪ್ರತಿಧ್ವನಿಸಿತು. ಮರುಕ್ಷಣದಲ್ಲಿಯೇ ...ಪರಿಚಿತವಾದ ಕೆಮ್ಮಿನಂತಹ ಗರ್ಜನೆಯೊಂದಿಗೆ ಚಿರತೆ ಹೊರಕ್ಕೆ ...ತು. ಅದು ಕಪ್ಪು ಚಿರತೆಯಾದ್ದರಿಂದ ಬಹಳ ಹತ್ತಿರ ಬರುವವರೆಗೂ ಕಾಣಲೇ ಇಲ್ಲ. ಚಿರತೆ ನನ್ನಿಂದ ಎಂಟು ಹತ್ತು ಅಡಿ ದೂರದಲ್ಲಿದ್ದಾಗ ಬಂದೂಕನ್ನು ಚಲಾಯಿಸಿದೆ. ಅದು ನನ್ನ ಕಡೆ ಮುನ್ನುಗ್ಗುತ್ತಿದ್ದುದರಿಂದ ...ೕ ಗುಂಡು ಸಾಕಾಗಲಾರದೆಂದು ಮತ್ತೊಂದನ್ನು ಹಾರಿಸಿದೆ. ಈ ...ಡುಗಳು ಸದ್ದು ಇಡೀ ಗುಹೆಯಲ್ಲಿ ಮತ್ತೆಮತ್ತೆ ಪ್ರತಿಧ್ವನಿಸಿತು.

...ಮುಂದಿನ ಕ್ಷಣದಲ್ಲಿಯೇ ನರಕವೇ ನಮ್ಮ ಮೇಲೆ ಉರುಳಿ ಬಿದ್ದಿತು. ...ನೊಣಗಳ ಜೇಂಕಾರದ ಸದ್ದು ಒಮ್ಮೆಲೇ ಕರ್ಕಶವಾಗಿ ಗುಹೆಯ ...ಲ್ಲಿ ಅವುಗಳ ಹಾರಾಟದಿಂದ ಮುಚ್ಚಿಹೋಯಿತು. ಅವೆಲ್ಲವೂ ...ಶಾಂತಭಂಗ ಮಾಡಿದ ನಮ್ಮ ಮೇಲೆ ಪೂರ್ಣ ಶಕ್ತಿಯಿಂದ ...ಬಂದವು.

...ನಾನು ಜೇನುಗಳ ಕೋಪವನ್ನು ಆಹ್ವಾನಿಸಿಕೊಂಡಿದ್ದೆ. ಚಿರತೆಯ ಎಲ್ಲಾ ...ಚನೆಯನ್ನೂ ಮರೆತು ನನ್ನ ಕಾಕಿ ಮೇಲಂಗಿಯನ್ನು ಮುಖಕ್ಕೆ ಮುಚ್ಚಿಕೊಂಡು ...ಯ ಬಾಗಿಲಿನ ಕಡೆ ಓಡತೊಡಗಿದೆ. ಆದರೂ ಜೇನುನೊಣಗಳು ...ಪಾತವಾದಂತೆ ನನ್ನ ಮೇಲೆ ಬೀಳುತ್ತಿದ್ದವು. ಕೈಗಳು, ಕುತ್ತಿಗೆ, ತಲೆ, ...ು, ಹೀಗೆ ಎಲ್ಲಾ ಕಡೆ ತಮ್ಮ ಮುಳ್ಳುಗಳನ್ನು ನೆಟ್ಟವು. ಕೆಲವು ಜೇನುಗಳು ...ಯ ಕಾಲರಿನಿಂದ ಒಳಹೊಕ್ಕು ಬೆನ್ನನ್ನೂ ಕಡಿದವು. ಈ ಕಡಿತ ಭಯಂಕರ ...ವನ್ನುಂಟುಮಾಡುತ್ತಿತ್ತು.

...ನಾನು ಗುಹೆಯಿಂದ ಹೊರಬಂದು ಶಕ್ತಿಮೀರಿ ಓಡತೊಡಗಿದೆ. ಆದರೆ ...ಗಳು ನನಗಿಂತ ವೇಗವಾಗಿ ಬಂದು ಆಕ್ರಮಣ ಮುಂದುವರೆಸಿದವು. ...ನನಗೆ ಕಚ್ಚಿದ ಪ್ರತಿಯೊಂದು ಜೇನುಹುಳವೂ ತಮ್ಮ ಪ್ರಾಣದ ಬೆಲೆ ...ತ್ತಿದ್ದವು. ಹಾಗಾಗಿ ಇವುಗಳನ್ನು ನಾನು ವೈರಿಗಳ ಮೇಲೆ ತಮ್ಮ ವಿಮಾನವನ್ನು ...ಳಿಸುವ ಜಪಾನಿ ಪೈಲಟ್‌ಗಳ ಆತ್ಮಹತ್ಯಾದಳಕ್ಕೆ ಹೋಲಿಸುತ್ತೇನೆ. ತನ್ನ ...ವಿನ ಮೇಲೆ ಆಕ್ರಮಣ ಮಾಡಿ ವಿಷಪೂರಿತ ಮುಳ್ಳನ್ನು ಚುಚ್ಚಿದ ಈ ...ನೊಣಗಳು ಮುಳ್ಳಿನಿಂದ ತಮ್ಮನ್ನು ಬಿಡಿಸಿಕೊಳ್ಳುವಾಗ ದೇಹಕ್ಕೆ ಹಾನಿಯನ್ನು ...ಟುಮಾಡಿಕೊಳ್ಳುತ್ತದೆ. ಹಾಗೆ ಆದ ಹಾನಿಯಿಂದ ಚೇತರಿಸಿಕೊಳ್ಳಲಾರದೆ ...ಳ ಬೇಗ ಅವು ಸತ್ತುಹೋಗುತ್ತವೆ.



ಬಚಾವಾದ ಬಗೆ!

ಜೇನಿನ ಆಕ್ರಮಣವನ್ನು ತಪ್ಪಿಸಿಕೊಳ್ಳಲು ನಾನು ಎದುರಿಗೆ ಕಂಡ ಒತ್ತಾಗಿ ಬೆಳೆದಿದ್ದ ಲಂಟಾನಾ ಪೊದೆಯಡಿ ನುಸುಳಿದೆ. ಈ ಲಂಟಾನಾವನ್ನು ನಾನು ಕಾಡಿನ ಸಸ್ಯಗಳಿಗೆ ಮತ್ತು ಮನುಷ್ಯರಿಗೆ ಅಪಾಯಕಾರಿಯೆಂದು ಯಾವಾಗಲೂ ಶಪಿಸುತ್ತಿದ್ದೆ. ಆದರೆ ಆ ಕ್ಷಣದಲ್ಲಿ ನನ್ನ ಹಳೆಯ ಶಾಪವನ್ನೆಲ್ಲಾ ಹಿಂಪಡೆದು ನನ್ನ ಜೀವವುಳಿಸಿದಕ್ಕಾಗಿ ಅದಕ್ಕೆ ಕೃತಜ್ಞತೆ ಸೂಚಿಸಿದೆ! ಏಕೆಂದರೆ ಲಂಟಾನ ಪೊದೆ ಜೇನುಗಳ ಹಾರಾಟಕ್ಕೆ ಅಡ್ಡ ಬಂದಿತ್ತು, ಪೊದೆಗಳ ಕೆಳಗಿನಿಂದ ನುಸುಳಿಬಂದು ನನ್ನ ಕಚ್ಚುವಷ್ಟು ಅವುಗಳಿಗೆ ಬುದ್ಧಿಯಿರಲಿಲ್ಲ! ಹಾಗಾಗಿ ಲಂಟಾನಾ ಪೊದೆಗಳು ಖಾತ್ರಿಯಾದ ಸಾವಿನಿಂದ ನನ್ನನ್ನು ಉಳಿಸಿದ್ದವು.

ಗುಹೆಯಲ್ಲಿದ್ದ ಎಲ್ಲಾ ಒಂಬತ್ತು ಗೂಡುಗಳಲ್ಲಿನ ಜೇನುಗಳೂ ಈಗ ಕೆರಳಿದ್ದವು. ಅವುಗಳ ಕೋಪದ ಕೂಗಾಟದ ಸದ್ದು ನನ್ನ ಕಿವಿಗೆ ಬಡಿಯುತ್ತಿತ್ತು. ಈಗಾಗಲೇ ನನ್ನಲ್ಲಿ ನೆಟ್ಟಿದ್ದ ಮುಳ್ಳುಗಳ ನೋವನ್ನು ಸಹಿಸಿಕೊಂಡು ನಾನು ನಿಶ್ಚಲನಾಗಿ ಮಲಗಿಕೊಂಡಿದ್ದೆ. ಕಡಿತದ ನೋವಿಲ್ಲದಿದ್ದರೆ ನಾನು ಲಂಟಾನ ಪೊದೆಯ ಕೆಳಗೇ ನಿದ್ದೆಮಾಡಿಬಿಡುತ್ತಿದ್ದೆ! ಸುಮಾರು ಎರಡು ಗಂಟೆಗಳ ನಂತರ ಜೇನುಗಳು ಶಾಂತವಾದಂತೆ ಕಂಡಿತು. ಜೇನುಮುಳ್ಳುಗಳಿರುವ ಜಾಗದಲ್ಲಿ ನೋವಲ್ಲದೆ ಈಗ ಬಾವು ಬರತೊಡಗಿತ್ತು.

ಮಧ್ಯಾಹ್ನ ಸುಮಾರು ಮೂರು ಗಂಟೆಯ ಹೊತ್ತಿಗೆ ನಾನು ಲಂಟಾನ ಪೊದೆಯಿಂದ ಹೊರಬಂದು ಸಮೀಪದ ಕುಂದುಕೊಟ್ಟೈ ಹಳ್ಳಿಗೆ ತಲುಪಿದೆ. ಅಲ್ಲಿ ನನ್ನ ಮೂರೂ ಸಂಗಾತಿಗಳು ಸಿಕ್ಕರು. ಅವರುಗಳೆಲ್ಲಾ ಎತ್ತರದ ಜಾಗದಲ್ಲಿ ನಿಂತಿದ್ದರಿಂದ ಜೇನಿನ ಕೋಪದಿಂದ ಬಚಾವಾಗಿದ್ದರು. ಆದರೆ ಕುಷ್ ಮಾತ್ರ ನನ್ನಂತೆ ಸಾಕಷ್ಟು ಗಾಯಗೊಂಡಿತ್ತು. ನಾವೆಲ್ಲಾ ನನ್ನ ಕಾರಿನ ಬಳಿ ಹೋಗಿ ಅಲ್ಲಿಂದ ದೆಂಕನಿಕೊಟ್ಟೈ ಹಳ್ಳಿಗೆ ಹೋದೆವು. ಅಲ್ಲಿನ ಆಸ್ಪತ್ರೆಯಲ್ಲಿದ್ದ ವೈದ್ಯರು ನಮ್ಮ ದೇಹದಲ್ಲಿ ಜೇನುಗಳ ನೆಟ್ಟಿದ್ದ ಮುಳ್ಳುಗಳನ್ನೆಲ್ಲಾ ತೆಗೆದು ಔಷಧಿ ಹಾಕಿದರು. ನನ್ನ ದೇಹದಲ್ಲಿ ನಲವತ್ತೊಂದು ಮತ್ತು ಕುಷ್‌ನ ದೇಹದಲ್ಲಿ ಹತ್ತೊಂಬತ್ತು ಮುಳ್ಳುಗಳನ್ನು ಆ ಪುಟಾಣಿ ಪಿಶಾಚಿಗಳು ಚುಚ್ಚಿದ್ದವು!

ರಾತ್ರಿಯನ್ನು ದೆಂಕನಿಕೊಟ್ಟೈ[illegible] ಕಳೆದೆವು. [illegible] ಹೊಡೆದಿದ್ದರಿಂದ [illegible], ಕುಷ್ ಕೂಡ ನರಳಾಡುತ್ತಿತ್ತು. ನನ್ನ [illegible] ಕೂಡ ಜೇನು ಕಚ್ಚಿದ್ದರಿಂದ ಅದನ್ನು ತೆರೆಯುವುದೂ ಕಷ್ಟವಾಗಿತ್ತು.

ಮರುದಿನ ಬೆಳಗ್ಗೆ ಮತ್ತೆ ಚಿರತೆಯ ಶವವಿದ್ದ ಗುಹೆಯ ಬಳಿ ಬಂದೆವು. ಜೇನುಗಳು ಈಗ ಶಾಂತಿಯಿಂದ ಮತ್ತೆ ತಮ್ಮ ದಿನಚರಿಯಲ್ಲಿ ತೊಡಗಿಕೊಂಡಿದ್ದವು. ನಿನ್ನೆ ಹೊಡೆದಿದ್ದ ಎರಡು ಗುಂಡುಗಳಿಂದ ಚಿರತೆ ಸತ್ತಿರಲೇಬೇಕು ಅನ್ನಿಸಿತು. ಹಾಗೊಮ್ಮೆ ನನ್ನ ಗುಂಡಿನಿಂದ ಅದು ಸಾಯದಿದ್ದರೂ ಜೇನುಗಳು ಆ ಕೆಲಸವನ್ನು ಮಾಡಿರುತ್ತಿದ್ದವು!

ನಾನೆಣಿಸಿದಂತೆ ಗುಹೆಯ ಸ್ವಲ್ಪ ಒಳಗಡೆ ಚಿರತೆ ಸತ್ತುಬಿದ್ದಿತ್ತು, ಅದನ್ನು ಕಂಡು ಬೊಗಳಲು ಸಿದ್ಧವಾಗಿದ್ದ ಕುಷ್‌ನ ಬಾಯನ್ನು ನಾನು ಒತ್ತಿ ಹಿಡಿದೆ. ಇಲ್ಲದಿದ್ದರೆ ಕುಷ್‌ನ ಗಲಾಟೆಯಿಂದ ಜೇನುಗಳು ಮತ್ತೆ ಕೆರಳುವ ಸಾಧ್ಯತೆಗಳಿದ್ದವು. ನಾವೆಲ್ಲಾ ಸೇರಿ ಚಿರತೆಯನ್ನು ಗುಹೆಯಿಂದ ಹೊರಗೆ ಎಳೆದುತಂದೆವು. ಮರದ ರೆಂಬೆಯೊಂದನ್ನು ಕಡಿದು ಅದಕ್ಕೆ ಚಿರತೆಯ ಕಾಲುಗಳನ್ನು ಕಟ್ಟಿ ಹೊತ್ತು ತಂದು ಕಾರಿಗೆ ತುಂಬಿದೆವು. ಮತ್ತೆ ದೆಂಕನಿಕೊಟ್ಟೈ ವಸತಿ ಗೃಹಕ್ಕೆ ಬಂದು ಅದರ ಚರ್ಮವನ್ನು ಬಿಡಿಸಿದೆವು. ನಮಗೆ ಲೆಕ್ಕಕ್ಕೆ ಸಿಕ್ಕಂತೆ ಚಿರತೆಗೆ 273 ಜೇನುಗಳು ಕಚ್ಚಿದ್ದವು. ನಮ್ಮ ಕಣ್ಣಿಗೆ ಬೀಳದ ಇನ್ನೂ ಹಲವಾರು ಮುಳ್ಳುಗಳು ಚಿರತೆಯ ದೇಹದಲ್ಲಿ ಇದ್ದಿರಲೇಬೇಕು.

ನಾನು ಕುಷ್‌ನನ್ನು ಏಳು ರೂಪಾಯಿ ಕೊಟ್ಟು ಖರೀದಿಸಿ ಬೆಂಗಳೂರಿಗೆ ಹಿಂತಿರುಗಿದೆ. ಜೊತೆಗೆ ನಾನು ಬೇಟೆಯಾಡಿದ ಏಕೈಕ ಕಪ್ಪುಚಿರತೆಯ ಚರ್ಮವನ್ನೂ ತಂದಿದ್ದೆ.

ಇನ್ನೊಂದು ವಿಚಾರವನ್ನು ಹೇಳಲು ಮರೆತಿದ್ದೆ. ನಾನು ಕಣ್ಣುಗಳ ಮಧ್ಯೆ ಗುರಿ ಇಟ್ಟಿದ್ದರೂ ಚಿರತೆ ನನ್ನೆಡೆಗೆ ಜಿಗಿಯಲು ಸಿದ್ಧನಾಗಿ ಸ್ವಲ್ಪ ಬಾಗಿದ್ದರಿಂದ ಗುಂಡು ಗುರಿ ತಪ್ಪಿತ್ತು. ಹಣೆ ಮತ್ತು ಕಿವಿಯನ್ನು



ಸವರಿ ಚಿಕ್ಕ ಗಾಯವನ್ನು ಮಾಡಿದ್ದ ಗುಂಡು ಅದರ ಹೊಟ್ಟೆಗೆ ಬಲವಾಗಿ ಬಡಿದಿತ್ತು. ಹಾಗಾಗಿ ಅದರ ದೇಹದಲ್ಲಿ ಎರಡು ಗಾಯಗಳಿದ್ದಂತಹ ಸೂಚನೆಗಳು ರಕ್ತದ ಜಾಡಿನಲ್ಲಿ ಕಾಣಿಸಿತ್ತು. ನಾನು ಗುಹೆಯಲ್ಲಿ ಹೊಡೆದ ಎರಡು ಗುಂಡುಗಳಲ್ಲಿ ಒಂದು ಚಿರತೆಯ ಎದೆಗೆ ಹೊಕ್ಕಿದ್ದರೆ, ಇನ್ನೊಂದು ಅದರ ತೆರೆದ ಬಾಯಿಯ ಮೂಲಕ ಹಾದು ಕುತ್ತಿಗೆಯ ಹಿಂಭಾಗದಿಂದ ಹೊರಬಂದಿತ್ತು. ●

ದೊರೆಗೆ

...ದೊರೆಯೇ, ಭರತ
...ಭುವಿಯ ಭ್ರಮೆಯೇ
...ನಾಗಬಾರದು ನೋಡು
...ಟ್ಟಿದಷ್ಟು ಭರವಸೆ
...ನ್ನ ಮೇಲಿಟ್ಟು
...ಲ್ಲಿಸಿದವರ ಕಣ್ಣಲ್ಲಿ
...ಣ್ಣಿಟ್ಟು ಹಾಡದಿರು
...ೋದಾಘಾತದ ಹಾಡು

...ಸು-ಸಿನ್ನ ಬಳಗ
...ಸತ್ತದ ತಲೆ ಮೇಲೆ
...ಹೊಡೆದಂತೆ ಸುಳ್ಳು
...ಹೇಳಿ ಮಾಡಬಲ್ಲಿರಿ
...ರಕ್ತ-ಮಾಂಸಕ್ಕೆ ಮಾರ್ಕೆಟ್ಟು
...ಇದೇ ತಾನೆ ನಿನ್ನ
...ಬಾಪಿಸ ಗುಟ್ಟು

...ಕ್ತಿಯ ಭಯ ಬಿತ್ತಿ
...ತ್ತಿಸುವ ಮರೀಚಿಕೆ
...ನೀನು

ಜಾಲತಾಣದಲ್ಲೇ
ಜಾಣರ ಜಾರಿಸಿದ
ಜಾದೂಗಾರ ಮಾರಾಯ


ಹೆತ್ತವಳ ಎದುರೇ
ಪಟ್ಟಾಭಿಷೇಕ ಮಾಡಿಸಿಕೊಂಡ
ಮೊದಲ ಪ್ರಭು ನೀನು
ಪತಿಯ ಪೀಠಾರೋಹಣ
ನೋಡಲು ಹಂಬಲಿಸಿದ
ಹೆಂಡತಿಗೆ ವನವಾಸಕಟ್ಟಿ
ಸಂಭ್ರಮಿಸಿದ ಪ್ರಥಮ
ರಾಮನೂ ನೀನೇ!

ಆಗಿದ್ದಾಯ್ತು ದೊರೆಯೆ
ಇನ್ನಾದರೂ ನಿನಗೆ
ಭಾರತ ಮಾತೆಯ
ಸಂವಿಧಾನ ಮಾನವ
ಎಚ್ಚರವಿರಲಿ
ಏನಕೇನ ಪ್ರಕಾರೇಣ
ಗದ್ದುಗೆ ಏರಿದರೂ
ಆದಳಿತಕ್ಕಿರಲಿ ಅಂತಃಕರಣ

ನಿನ್ನ ಹಾರಾಟಕ್ಕೆ
ಹೇಸಿಕೊಂಡ ಸಗ್ಗಂಥ
ಶೂದ್ರಸಿಗೂ ಅವ್ಯಕ್ತ ಪುಳಕ

ಜನಿವಾರ ಇಲ್ಲದವ
ಮಹಾರಾಜನಾದನೆಂಬ ಮುದ

ನಿನ್ನ ಬಗ್ಗೆ ನನ್ನಲ್ಲಿರುವ
ಅನುಮಾನ ಹುಸಿಯಾಗಲಿ



ವಿಪ್ರ ಪರಿವಾರದ ಶೂದ್ರ
ಮುಖವಾಡ ನೀನಾಗದಿರಲಿ
ಬರುವಾಗ ಎಣ್ಣೆ
ಮುರಿಯದಿರಲಿ ಗಾಣ!

ನಿನ್ನ ಹಾವ-ಭಾವ-ಭೋಂಗು
ಕಂಡಾಗ ನನಗೊಂದು
ಪಕ್ಕಾ ಆಗಿದೆ
ಒಂದೋ ನೀನು
ಚೆಡ್ಡಿಗಳ ಹರಿದು;
ಲಾಠಿಗಳ ಮುರಿದು
ಶೋಷಿತರ ನಾಡು ಕಟ್ಟುವೆ

ಸ್ವಾಭಿಮಾನ ಶೂನ್ಯನಾದರೆ
ಖಂಡಿತ ಭಾರತಕ್ಕೆ
ಗಂಡಾಂತರಿಯಾಗುವೆ
ದೊರೆಯೇ, ಆಸ್ಥಾನ ಪುರೋಹಿತರು
ಕುರ್ಚಿ ರುಚಿ ಹತ್ತಿಸಿ
ಯುದ್ಧೋನ್ಮಾದ ಕೆರಳಿಸಿ
ನಿನ್ನಿಂದ ದೇಶ
ಮಾಡಲಿದ್ದಾರೆ ಸ್ಮಶಾನ!!

[illegible] ದೊರೆಯೇ
ಹಾಗಾಗದಿರಲಿ

- [illegible]

ಎತ್ತ ಸಾಗುತ್ತಿದೆ ಭಾರತದ ಪ್ರಜಾಪ್ರಭುತ್ವ?

ಸಾಂವಿಧಾನಿಕ ಧರ್ಮ ಒಂದು ಸ್ವಾಭಾವಿಕ ಭಾವನೆ ಅಲ್ಲ. ಅದನ್ನು ಅಭ್ಯಾಸ ಮಾಡಿಸಬೇಕಾಗುತ್ತದೆ. ನಮ್ಮ ಜನರಿಗೆ ಸಾಂವಿಧಾನಿಕ ಧರ್ಮದ ಅಭ್ಯಾಸ ಇನ್ನೂ ಆಗಿಲ್ಲ ಎಂಬುದನ್ನು ನಾವು ಮನಗಾಣಬೇಕು. ಭಾರತದಲ್ಲಿ ಪ್ರಜಾಪ್ರಭುತ್ವ ಎನ್ನುವುದು ಮೂಲತಃ ಅಪ್ರಜಾತಂತ್ರಿಕವಾದ ಮಣ್ಣಿನ ಮೇಲಿರುವ ಗೊಬ್ಬರದ ಪದರದಂತೆ.

- ಡಾ|| ಬಿ.ಆರ್. ಅಂಬೇಡ್ಕರ್

ಭಾರತದ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿರುವವರಿಗೆ ಡಾ.ಅಂಬೇಡ್ಕರ್‌ರ ಮಾತುಗಳು ಇಂದಿಗೂ ಪ್ರಸ್ತುತವೆಂದು ಅನಿಸದೆ ಇರಲಾರದು. ಏಕೆಂದರೆ 64 ವರ್ಷಗಳ ಬಳಿಕವೂ ಬಹುಪಾಲು ಗೊಬ್ಬರ ಮೇಲೆಯೆ ಇದೆ. ಬಹುಪಾಲು ಮಣ್ಣು ಇನ್ನೂ ಅಪ್ರಜಾತಾಂತ್ರಿಕವಾಗಿ ಉಳಿದಿದೆ. ಸಾಂವಿಧಾನಿಕ ಧರ್ಮವಿನ್ನೂ ಸಾರ್ವತ್ರಿಕವಾಗಿ ಬೇರುಬಿಟ್ಟಿಲ್ಲ. ಚುನಾವಣೆಗಳೇನೋ ಕಾಲಕಾಲಕ್ಕೆ ನಡೆಯುತ್ತಾ ಇದ್ದರೂ ಪ್ರಜಾಪ್ರಭುತ್ವ ಕೇವಲ ಚುನಾವಣೆಗಳಿಗಷ್ಟೆ ಸೀಮಿತವೆಂದಾಗಿದೆ. ಚುನಾವಣೆಗಳು ಪ್ರಹಸನದಂತಾಗುತ್ತಿವೆ. ಇದೆಲ್ಲವೂ ಅಂತಿಮವಾಗಿ ದೇಶವನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯಬಹುದೆಂದು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಒಂದು ಸಣ್ಣ ಪ್ರಯತ್ನ ಇಲ್ಲಿದೆ.

ಭಾರತದ ಪ್ರಸಕ್ತ ಆಡಳಿತ ವ್ಯವಸ್ಥೆ

ಮೊದಲು ಭಾರತದ ಪ್ರಸಕ್ತ ಆಡಳಿತ ವ್ಯವಸ್ಥೆಯ ಬಗ್ಗೆ ಒಂದೆರಡು ಮಾತು. ಜನತೆಯ ಹೋರಾಟ ಮತ್ತು ಬಲಿದಾನದ ಫಲವಾಗಿ 1947ನೆ ಇಸವಿಯಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತೆನ್ನುವುದನ್ನು ನಾವೆಲ್ಲರೂ ಬಲ್ಲೆವು. ಆದರೆ ಪ್ರಾಯಶಃ ಬಹುಪಾಲು ಜನರಿಗೆ ತಿಳಿಯದಿರದ ವಿಚಾರವೆಂದರೆ ಸ್ವಾತಂತ್ರ್ಯ ಹೋರಾಟದಲ್ಲಿ ಜೆ.ಡಿ. ಬಿರ್ಲಾರಂತಹ ಗಣ್ಯ ಉದ್ಯಮಪತಿಗಳದೂ ಬಹುದೊಡ್ಡ ಪಾತ್ರವಿತ್ತು. ಹಾಗಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದಾಗ ವಾಸ್ತವದಲ್ಲಿ ಆದುದೇನೆಂದರೆ ಆಡಳಿತದ ಚುಕ್ಕಾಣಿ ವಿದೇಶಿ ಗಣ್ಯವರ್ಗದಿಂದ ಸ್ವದೇಶಿ ಗಣ್ಯವರ್ಗಕ್ಕೆ ಹಸ್ತಾಂತರಿಸಲ್ಪಟ್ಟಿತು. ತರುವಾಯ ನಡೆದ ಸಂವಿಧಾನ ರಚನೆಯ ಸಂದರ್ಭದಲ್ಲಿ ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಇದೊಂದು ಅತ್ತ ಪೂರ್ಣ ಬಲಪಂಥೀಯವೂ ಅಲ್ಲದ, ಇತ್ತ ಪೂರ್ಣ ಎಡಪಂಥೀಯವೂ ಅಲ್ಲದ ಮಧ್ಯಮ ಮಾರ್ಗ. ಇಲ್ಲಿ ಶಾಸಕಾಂಗಕ್ಕೆ ಚುನಾಯಿತರಾಗುವ ಜನಪ್ರತಿನಿಧಿಗಳಿಂದ ಕಾನೂನುಕಟ್ಟಳೆ ಹಾಗೂ ರಾಜ್ಯನೀತಿಗಳು ರೂಪಿಸಲ್ಪಡುತ್ತವೆ. ಆರ್ಥಿಕ ಕ್ಷೇತ್ರದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ವಲಯಗಳೆರಡಕ್ಕೂ ಅವಕಾಶವಿದೆ. ಖಾಸಗಿ ವಲಯಗಳು ಸರ್ವತಂತ್ರ ಸ್ವತಂತ್ರವಾಗಿರದೆ ಒಂದು ಮಟ್ಟಿನ ಸಾರ್ವಜನಿಕ ನಿಯಂತ್ರಣಕ್ಕೆ ಒಳಪಡುತ್ತವೆ. ಹಲವಾರು ಲೋಪದೋಷಗಳು, ಸಮಸ್ಯೆಗಳ ನಡುವೆಯೂ ಈ ರೀತಿಯ ಆಡಳಿತ ವ್ಯವಸ್ಥೆ 90ರ ದಶಕದ ಆರಂಭದವರೆಗೆ ಮುಂದುವರಿಯಿತು. 90ರ ದಶಕದಿಂದ ದೇಶದಲ್ಲಿ ಜಾಗತೀಕರಣ ಖಾಸಗೀಕರಣ ಉದಾರೀಕರಣದ ಶಕೆ ಆರಂಭವಾಯಿತು. ಆ ನಂತರದಲ್ಲಿ ನಮ್ಮ ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲವು ಮಹತ್ತರ ಬದಲಾವಣೆಗಳು ಪ್ರಾರಂಭವಾಗಿವೆ. ಸಾರ್ವಜನಿಕ ಕ್ಷೇತ್ರ ಅವನತಿಯತ್ತ ಸಾಗುತ್ತಿದೆ. ಖಾಸಗಿ ಕ್ಷೇತ್ರದ ಪ್ರಾಬಲ್ಯ ವರ್ಧಿಸುತ್ತಿದೆ. ಶಾಸಕಾಂಗದ ಕಾರ್ಯವ್ಯಾಪ್ತಿ ಕಡಿಮೆಯಾಗುತ್ತಿದೆ. ಯಾಕೆ ಹೀಗಾಗುತ್ತಿದೆ? ಇದು ಹೀಗೇ ಮುಂದುವರಿದರೆ ಭವಿಷ್ಯದಲ್ಲಿ ಏನಾಗಬಹುದು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮುನ್ನ ಅಮೆರಿಕನ್ ಮಾದರಿಯ ಬಂಡವಾಳಶಾಹಿ ಪ್ರಜಾಪ್ರಭುತ್ವ ವ್ಯವಸ್ಥೆ ಕುರಿತು ಕೊಂಚ ತಿಳಿಯೋಣ.


ಅಮೆರಿಕನ್ ಮಾದರಿಯ ಬಂಡವಾಳಶಾಹಿ ಪ್ರಜಾಪ್ರಭುತ್ವ

ಬಂಡವಾಳಶಾಹಿ ಪ್ರಜಾಪ್ರಭುತ್ವದೊಳಗೂ ರಾಜ್ಯನೀತಿ ಇತ್ಯಾದಿಗಳನ್ನು ರೂಪಿಸಲು ಚುನಾಯಿತ ಜನಪ್ರತಿನಿಧಿಗಳಿರುತ್ತಾರೆ. ಆದರೆ ಆರ್ಥಿಕ ಕ್ಷೇತ್ರದ ಅಡಿಯಲ್ಲಿರುವ ವಾಣಿಜ್ಯ, ಔದ್ಯಮಿಕ, ಆರ್ಥಿಕ ರಂಗಗಳು ಹೆಚ್ಚುಕಮ್ಮಿ ಪೂರ್ತಿ ಖಾಸಗಿ ವಲಯದಲ್ಲಿದ್ದು ನೇರವಾಗಿ ಪ್ರಜೆಗಳ ನಿಯಂತ್ರಣಕ್ಕೆ ಒಳಪಡುವುದಿಲ್ಲ. ಅಲ್ಪಸ್ವಲ್ಪ ಇದ್ದರೂ ಅದು ಪರೋಕ್ಷ ನಿಯಂತ್ರಣ. ಈ ಖಾಸಗಿ ರಂಗಗಳೆಲ್ಲ ಅಧಿಕಾರ ಕೇಂದ್ರಗಳಂತೆ ಕಾರ್ಯಾಚರಿಸುತ್ತವೆ. ಕಾಲಕಳೆದಂತೆ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳೆರಡರಲ್ಲೂ ಅಧಿಕಾರದ ಕೇಂದ್ರೀಕರಣ ನಡೆಯುತ್ತದೆ. ರಾಜಕೀಯ ಕ್ಷೇತ್ರದಲ್ಲಿ ಸಣ್ಣಪುಟ್ಟ ರಾಜಕೀಯ ಪಕ್ಷಗಳು ಅವಸಾನ ಹೊಂದುತ್ತವೆ. ಕೆಲವೇ ಕೆಲವು ದೊಡ್ಡ ಪಕ್ಷಗಳು ಉಳಿಯುತ್ತವೆ. ಆರ್ಥಿಕ ಕ್ಷೇತ್ರದಲ್ಲಿ ದೊಡ್ಡ ಕಾರ್ಪೊರೇಟುಗಳು ಸಣ್ಣಪುಟ್ಟ ಉದ್ಯಮಗಳನ್ನು ನುಂಗುವ ವಿದ್ಯಮಾನ ನಡೆಯುತ್ತದೆ. ಹೆಚ್ಚಿನ ಸಂಪತ್ತು ಕೆಲವೇ ಕಾರ್ಪೊರೇಟುಗಳ ಕೈಲಿ ಕೇಂದ್ರೀಕೃತಗೊಳ್ಳುತ್ತದೆ. ಹೀಗೆ ಖಾಸಗಿ ಆರ್ಥಿಕ ಕ್ಷೇತ್ರದಲ್ಲಿಯೂ ಕೇಂದ್ರೀಕರಣ ನಡೆದು ಕೆಲವೇ ಕೆಲವು ಪ್ರಬಲ ಅಧಿಕಾರ ಕೇಂದ್ರಗಳು ಹೊರಹೊಮ್ಮುತ್ತವೆ.

ಮೂಲತಃ ಬಂಡವಾಳಶಾಹಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವದ ಕಾರ್ಯವ್ಯಾಪ್ತಿ ತುಂಬಾ ಸೀಮಿತವಾಗಿರುತ್ತದೆ. ಅಲ್ಲೂ ಖಾಸಗಿ ಅಧಿಕಾರ ಕೇಂದ್ರಗಳ ಹಸ್ತಕ್ಷೇಪ ಸಾಮಾನ್ಯ. ಈ ಅಧಿಕಾರ ಕೇಂದ್ರಗಳು ಕಾರ್ಯಾಂಗ, ಮಾಧ್ಯಮ ಮತ್ತು ರಾಜಕೀಯ ಸಂಘಸಂಸ್ಥೆಗಳ ಮೇಲೆ ನಿಯಂತ್ರಣ ಸಾಧಿಸುವ ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆ ಮೇಲೆ ಭಾರಿ ಪ್ರಭಾವ ಬೀರುತ್ತವೆ. ಕಾರ್ಯಾಂಗದಲ್ಲಿ ಕಾರ್ಪೊರೇಟ್‌ಗಳ ನೇರ ಅಥವಾ ಪರೋಕ್ಷ ಪ್ರತಿನಿಧಿಗಳಿರುತ್ತಾರೆ. ಕಾರ್ಪೊರೇಟುಗಳ ಮೇಲ್ವರ್ಗದ ಮಂದಿ ಆರ್ಥಿಕ, ರಾಜಕೀಯ, ಮಾಧ್ಯಮ ಕ್ಷೇತ್ರಗಳಲ್ಲಿ ಕೂಡ ಹೆಚ್ಚೆಚ್ಚು ಅಧಿಕಾರ ಪಡೆದುಕೊಳ್ಳುತ್ತಾರೆ. ಮಾಧ್ಯಮದ ವಿಚಾರಕ್ಕೆ ಕೊನೆಯಲ್ಲಿ ಬರೋಣ. ಇತ್ತ ಶಾಸಕಾಂಗದ ಪಾತ್ರ ಕಿರಿದಾಗುತ್ತಿದ್ದಂತೆ ಕಾರ್ಯಾಂಗದ ಪಾತ್ರ ಹಿರಿದಾಗಿ ಹೆಚ್ಚಿನ ಕೆಲಸಕಾರ್ಯಗಳೆಲ್ಲವೂ ಕಾರ್ಯಾಂಗದ ಮೂಲಕ ನಡೆಯುತ್ತವೆ. ನಿರ್ಧಾರಗಳನ್ನೆಲ್ಲ ಇಲ್ಲೇ ತೆಗೆದುಕೊಳ್ಳಲಾಗುತ್ತದೆ. ಈ ರೀತಿ ಕಾರ್ಪೊರೇಟುಗಳ ಹಿತಾಸಕ್ತಿಗಳೇ "ರಾಷ್ಟ್ರೀಯ ಹಿತಾಸಕ್ತಿ"ಗಳಾಗುತ್ತವೆ. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಕಾರ್ಯಾಂಗಕ್ಕೆ ಯಾವುದೇ ಚುನಾವಣೆಗಳಿಲ್ಲ (ಭಾರತದಲ್ಲೂ ಇದೇ ವ್ಯವಸ್ಥೆ ಇದೆ). ಆದುದರಿಂದ ಕಾರ್ಪೊರೇಟ್ ಪ್ರತಿನಿಧಿಗಳನ್ನು ಒಳಗೊಂಡಂತೆ ಕಾರ್ಯಾಂಗದಲ್ಲಿರುವವರೆಲ್ಲರೂ ನಿವೃತ್ತರಾಗುವ ತನಕವೂ ಅಲ್ಲೇ ಮುಂದುವರಿಯುತ್ತಾರೆ.

ಬಂಡವಾಳಶಾಹಿ ಪ್ರಜಾಪ್ರಭುತ್ವ ಜನರಲ್ಲಿ ಒಂದು ಬಗೆಯ ವಿಧೇಯ ಮನೋಭಾವವನ್ನು ಬೆಳೆಸುತ್ತದೆ. ತಾವು ಅಧಿಕಾರವನ್ನು ಒಪ್ಪಿಕೊಂಡು ಅದಕ್ಕೆ ವಿಧೇಯರಾಗಿರಬೇಕು, ಮೇಲಿನಿಂದ ಇಚ್ಛಾನುಸಾರಿಯಾಗಿ ನೀಡಲಾಗುವ ಹುಕುಂಗಳನ್ನು ಪಾಲಿಸಬೇಕು ಎನ್ನುವ ಮನೋಸ್ಥಿತಿಯನ್ನು ನಿರ್ಮಾಣಮಾಡುತ್ತದೆ. ಇನ್ನು ಚುನಾವಣೆಗಳೆಂದರೆ ಎರಡು ಕಾರ್ಪೊರೇಟ್ ಗುಂಪುಗಳ ನಡುವೆ ಅಧಿಕಾರಕ್ಕಾಗಿ ಪೈಪೋಟಿ ಎಂದಾಗುತ್ತದೆ. ಜನರು ಚುನಾವಣೆಗಳಲ್ಲಿ ಆರಿಸುವುದು ನೈಜ ಜನಪ್ರತಿನಿಧಿಗಳನ್ನಲ್ಲ, ಕಾರ್ಪೊರೇಟ್ ಪ್ರತಿನಿಧಿಗಳನ್ನು ಎಂದಾದಾಗ ಚುನಾವಣಾ ರಾಜಕಾರಣ ಅಪ್ರಸ್ತುತವೆಂದಾಗುತ್ತದೆ. ನೋಮ್ ಚಾಮ್‌ಸ್ಕಿ ಪ್ರಕಾರ ಇದರರ್ಥ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ಸ್ವಭಾವತಃ ಒಂದಕ್ಕೊಂದು ವಿರುದ್ಧವಾಗಿವೆ. ಆದುದರಿಂದ ಬಂಡವಾಳಶಾಹಿ ಪ್ರಜಾಪ್ರಭುತ್ವ ಎನ್ನುವುದೇ ಒಂದು ಆಭಾಸ. ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ಒಟ್ಟೊಟ್ಟಿಗೆ ಇರಲಾಗದಂತಹ ಈ ವ್ಯವಸ್ಥೆಯೊಳಗೆ ನಿರಂಕುಶ ಪ್ರಭುತ್ವ ಕಾಲಿರಿಸುವ ಅಪಾಯ ಸದಾ ಇದ್ದೇ ಇದೆ.

ನಾವೀಗ ಭಾರತ ಆರಿಸಿಕೊಂಡಿರುವ ಆಡಳಿತ ವ್ಯವಸ್ಥೆಗೆ ಮರಳೋಣ. ಭಾರತ ಒಂದು ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾತಾಂತ್ರಿಕ



ಗಣರಾಜ್ಯವಾಗಿ ಮುನ್ನಡೆಯಬೇಕೆಂಬುದು ನಮ್ಮ ಸಂವಿಧಾನ ಶಿಲ್ಪಿಗಳ ಆಶಯವಾಗಿತ್ತು. ಆರ್ಥಿಕ ಕ್ಷೇತ್ರದಲ್ಲಿ ಸಾರ್ವಜನಿಕ ಮತ್ತು ಖಾಸಗಿ ವಲಯಗಳೆರಡಕ್ಕೂ ಅವಕಾಶವಿರುವಂತಹ ಈ ಬೆರಕೆ ವ್ಯವಸ್ಥೆಯನ್ನು ಸ್ವಾತಂತ್ರ್ಯಾನಂತರದ ಕೆಲವು ವರ್ಷಗಳ ಕಾಲ ಮುಂದುವರಿಸಿಕೊಂಡು ಬರಲಾಯಿತು. ಆದರೆ ಬರಬರುತ್ತಾ ರಾಯರ ಕುದುರೆ ಕತ್ತೆಯಾಗುತ್ತಿದೆ. 90ರ ದಶಕದಿಂದ ಆರಂಭಗೊಂಡ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಪ್ರಕ್ರಿಯೆ (ಒಟ್ಟಾರೆಯಾಗಿ ನವಉದಾರವಾದಿ ಸಿದ್ಧಾಂತ) ಭಾರತದ ಆಡಳಿತ ವ್ಯವಸ್ಥೆಯನ್ನು ಅಮೆರಿಕನ್ ಮಾದರಿಯ ಬಂಡವಾಳಶಾಹಿ ಪ್ರಜಾಪ್ರಭುತ್ವದ ದಿಕ್ಕಿಗೆ ಹೊರಳಿಸಿದೆ. ಪರಿಣಾಮವಾಗಿ ಮೂಲ ಸಾಂವಿಧಾನಿಕ ಆಶಯಗಳು ದಿನೇದಿನೇ ಕ್ಷೀಣವಾಗುತ್ತಾ ಸಾಗುತ್ತಿವೆ. ನವಉದಾರೀಕರಣದ ಯುಗದಲ್ಲಿ ಸಾರ್ವಜನಿಕ ವಲಯಕ್ಕೆ ಮಾರಣಾಂತಿಕ ಏಟು ಬಿದ್ದಿದೆ. ಅದೇ ವೇಳೆ ಖಾಸಗಿ ಕಾರ್ಪೊರೇಟ್‌ಗಳು ಹುಲುಸಾಗಿ ಬೆಳೆಯುತ್ತಿವೆ. ಅವುಗಳ ತೀರದ ದಾಹ ದೇಶದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ರಂಗಗಳ ಮೇಲೆ ನೇರ ಹಾಗೂ ಪರೋಕ್ಷ ಪ್ರಭಾವ ಬೀರುತ್ತಿದೆ. ದೇಶದ ಆಗುಹೋಗುಗಳ ನಿರ್ಧಾರ ಮತ್ತು ನಿಯಂತ್ರಣ ಪರೋಕ್ಷವಾಗಿ ಖಾಸಗಿ ಬಂಡವಾಳಶಾಹಿ ಶಕ್ತಿಗಳ ಕೈಲಿ ಎಂದಾಗುತ್ತಿದೆ. ಅಮೆರಿಕನ್ ಮಾದರಿಯ ಖಾಸಗಿ ಅಧಿಕಾರ ಕೇಂದ್ರಗಳು ತಲೆಯೆತ್ತುತ್ತಿವೆ.

ನಮ್ಮ ಸಂಸತ್ತು ಮತ್ತು ಶಾಸನಸಭೆಗಳ ಸ್ವರೂಪ ಮತ್ತು ಸ್ವಭಾವಗಳಲ್ಲಿಯೂ ಮಹತ್ತರ ಬದಲಾವಣೆಗಳಾಗುತ್ತಿರುವುದನ್ನು ಗಮನಿಸಬಹುದು. ಚುನಾವಣೆಯಿಂದ ಚುನಾವಣೆಗೆ ಸಂಸತ್ತು, ಸದನಗಳಲ್ಲಿ ಕೋಟ್ಯಾಧಿಪತಿ, ಬಿಲಿಯಾಧಿಪತಿಗಳ ಸಂಖ್ಯೆ ಹೆಚ್ಚುತ್ತಾ ಹೋಗುತ್ತಿದೆ. ಕ್ರಿಮಿನಲ್ ಆರೋಪ ಹೊತ್ತವರ ಸಂಖ್ಯೆ ಕೂಡ ಹೆಚ್ಚುತ್ತಿರುವುದಂತೂ ತುಂಬಾ ಕಳವಳಕಾರಿ. ಕಲಾಪಗಳ ಅವಧಿ ಮೊಟಕಾಗುತ್ತಿದೆ. ಕಲಾಪಗಳು ಕೂಡ ಗಂಭೀರ ಅರ್ಥಪೂರ್ಣ ಚರ್ಚೆಗಳಿಲ್ಲದೆ ಕೇವಲ ಧರಣಿ, ವಾಕೌಟ್, ಸದ್ದು ಗದ್ದಲಗಳಲ್ಲಿ ಮುಗಿದುಹೋಗುತ್ತಿವೆ. ಒಟ್ಟಾರೆಯಾಗಿ ಭಾರತದ ಪ್ರಜಾಪ್ರಭುತ್ವದ ಕಾರ್ಯವ್ಯಾಪ್ತಿ ಸೀಮಿತಗೊಳ್ಳುತ್ತಿದೆ.

ಇದರರ್ಥ ದೇಶದ ಆಡಳಿತ ವ್ಯವಸ್ಥೆ ಬಂಡವಾಳಶಾಹಿ ಪ್ರಜಾಪ್ರಭುತ್ವದ ದಿಕ್ಕಿನಲ್ಲಿ ದೌಡಾಯಿಸುತ್ತಿದೆ. ಮುಂದಿನ ದಿನಗಳಲ್ಲಂತೂ ಆ ಪ್ರಕ್ರಿಯೆಯ ವೇಗ ದುಪ್ಪಟ್ಟಾಗಲಿರುವುದು ಖಚಿತ. ಇದರ ಮುನ್ಸೂಚನೆಗಳನ್ನು ಇತ್ತೀಚಿನ ಚುನಾವಣೆಗಳಲ್ಲಿ ತೀವ್ರ ಬಲಪಂಥೀಯ, ಉಗ್ರ ರಾಷ್ಟ್ರೀಯವಾದಿ ಹಾಗೂ ಬಂಡವಾಳಪರ ರಾಜಕಾರಣ ಸಾಧಿಸಿರುವ ಅಭೂತಪೂರ್ವ ಗೆಲುವಿನಲ್ಲಿ ಕಾಣಬಹುದು. ನಮಗೆಲ್ಲರಿಗೂ ತಿಳಿದಿರುವಂತೆ ಈ ಗೆಲುವಿಗೆ ಪ್ರಧಾನ ಕಾರಣವೆ ಬಂಡವಾಳಶಾಹಿ ಶಕ್ತಿಗಳ ಮೇರೆಮೀರಿದ ಉತ್ಸಾಹ. ಇಡೀ ಚುನಾವಣೆಯ ಫಲಿತಾಂಶವನ್ನು ನಿರ್ಧರಿಸುವುದರ ಹಿಂದೆ ನಿರ್ದಿಷ್ಟ ಗುಂಪಿನ ಕಾರ್ಪೊರೇಟ್ ಶಕ್ತಿಗಳು ಹಾಗೂ ಕಾರ್ಪೊರೇಟ್ ಮಾಧ್ಯಮದ ಭಾರಿ ಕೈವಾಡವಿತ್ತೆನ್ನುವುದು ತೆರೆದ ರಹಸ್ಯ. ಈಗಾಗಲೆ ನಾವು ನೋಡಿರುವಂತೆ ಪ್ರಜಾಪ್ರಭುತ್ವ ಮತ್ತು ಬಂಡವಾಳಶಾಹಿ ಒಟ್ಟೊಟ್ಟಿಗೆ ಇರಲಾರವು. ಆದುದರಿಂದಲೆ ಬಂಡವಾಳಶಾಹಿ ಮತ್ತು ಉಗ್ರ ರಾಷ್ಟ್ರೀಯವಾದಿ ರಾಜಕೀಯ ವ್ಯವಸ್ಥೆಗಳ ಈ ವಿಧದ ಒಟ್ಟುಗೂಡುವಿಕೆ ಭಾರತದ ಪ್ರಜಾಪ್ರಭುತ್ವವನ್ನು ಮತ್ತಷ್ಟು ದುರ್ಬಲಗೊಳಿಸಿ ನಿರಂಕುಶ ಪ್ರಭುತ್ವದ ಪ್ರವೇಶಕ್ಕೆ ಸುಗಮಹಾದಿಯನ್ನು ಕಲ್ಪಿಸಿಕೊಡಬಲ್ಲುದು.

ಮಾಧ್ಯಮದ ಪಾತ್ರ

ಈ ಹಿಂದೆ ಹೇಳಿರುವಂತೆ ಬಂಡವಾಳಶಾಹಿ ಪ್ರಜಾಪ್ರಭುತ್ವದಲ್ಲಿ ಖಾಸಗಿ ಅಧಿಕಾರ ಕೇಂದ್ರಗಳು ಕಾರ್ಯಾಂಗ ಮತ್ತು ರಾಜಕೀಯ ಸಂಘಸಂಸ್ಥೆಗಳಲ್ಲದೆ ಮಾಧ್ಯಮರಂಗದ ಮೇಲೂ ನಿಯಂತ್ರಣ ಸಾಧಿಸುತ್ತವೆ ಮತ್ತು ತನ್ಮೂಲಕ ಪ್ರಜಾಪ್ರಭುತ್ವ ಪ್ರಕ್ರಿಯೆಯ ಮೇಲೆ ಭಾರಿ ಪ್ರಭಾವ ಬೀರುತ್ತವೆ. ಮಾಧ್ಯಮವನ್ನು ಹೇಗೆ ಬಳಸಿಕೊಳ್ಳಲಾಗುತ್ತದೆ ಎಂಬುದಕ್ಕೆ 2014ರ ಚುನಾವಣೆಗಳಷ್ಟು ಉತ್ತಮ ನಿದರ್ಶನ ಇನ್ನೊಂದಿರದು.

2014ರ ಚುನಾವಣೆಗಳ ಕಾಲಘಟ್ಟವನ್ನು ಸ್ವತಂತ್ರ ಭಾರತದ ಇತಿಹಾಸದಲ್ಲಿ ಒಂದು ಸಂಧಿಕಾಲ ಎಂದು ಕರೆಯಬಹುದು. ಚುನಾವಣೆಗಳಲ್ಲಿ ತೀವ್ರ ಬಲಪಂಥೀಯ, ಉಗ್ರ ರಾಷ್ಟ್ರೀಯವಾದಿ ರಾಜಕಾರಣ ಸಾಧಿಸಿದ ಭಾರಿ ಗೆಲುವಿನ ಪ್ರಧಾನ ರೂವಾರಿಗಳೆ ಕಾರ್ಪೊರೇಟು ಶಕ್ತಿಗಳು ಮತ್ತು ಕಾರ್ಪೊರೇಟ್ ಒಡೆತನದ ಮಾಧ್ಯಮ ಎನ್ನುವುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ. ಭಾರತೀಯ ಮಾಧ್ಯಮರಂಗದಲ್ಲಿ ಸ್ವಾತಂತ್ರ್ಯ ಮತ್ತು ನಿಷ್ಪಕ್ಷಪಾತತೆಯ ಶೀಘ್ರ ಅವಸಾನಕ್ಕೆ ಕಾರ್ಪೊರೇಟ್‌ಗಳ ಪ್ರವೇಶವೆ ಬಹುಮುಖ್ಯ ಕಾರಣವೆನ್ನಬಹುದು. ಮಾಧ್ಯಮದ ಮೇಲೆ ಕಾರ್ಪೊರೇಟ್‌ಗಳ ಹಿಡಿತ ಎಷ್ಟರಮಟ್ಟಿಗೆ ಆಗಿದೆ ಅಂದರೆ ಒಂದು ಚುನಾವಣೆಯ ಫಲಿತಾಂಶವನ್ನು ನಿರ್ಧರಿಸುವ ಮಟ್ಟಿಗೆ, ಜನಮಾನಸದಲ್ಲಿ ಒಂದು ನಿರ್ದಿಷ್ಟ ವಿಚಾರ/ವಸ್ತು/ವ್ಯಕ್ತಿಯ ಬಗ್ಗೆ ಸಾಮೂಹಿಕ ಸಮ್ಮತಿಯನ್ನು ಉತ್ಪಾದಿಸುವ ಮಟ್ಟಿಗೆ. ಜಾಹೀರಾತುಗಳು ಹೇಗೆ ಕಳಪೆ ಸರಕನ್ನು ಅತ್ಯುತ್ತಮವೆಂದು ಬಿಂಬಿಸಿ ಇಲ್ಲದ ಭ್ರಮೆ ಮೂಡಿಸುತ್ತವೆಯೊ ಹಾಗೆ ರಾಜಕಾರಣಿಗಳನ್ನು, ರಾಜಕೀಯ ಪಕ್ಷಗಳನ್ನು ಮಾರಾಟ ಮಾಡುವ ಮಟ್ಟಿಗೆ. ಅದರಲ್ಲೂ ವಿಶೇಷವಾಗಿ ದೃಶ್ಯ ಮಾಧ್ಯಮಕ್ಕೆ ಜನರಲ್ಲಿ ಒಂದು ವಿಧದ ಸಮೂಹಸನ್ನಿಯನ್ನು ಉಂಟುಮಾಡುವ ಶಕ್ತಿ ಪ್ರಾಪ್ತವಾಗಿದೆ.

2014ರ ಚುನಾವಣೆಗಳು ಒಂದು ಅಂಶವನ್ನಂತೂ ಬಹಳ ಸ್ಪಷ್ಟವಾಗಿ ನಮ್ಮೆಲ್ಲರ ಮುಂದೆ ಇಟ್ಟಿವೆ. ಇಂದು ಭಾರತೀಯ ಮಾಧ್ಯಮದ ಬಹುದೊಡ್ಡ ವರ್ಗ ಸಾಮಾನ್ಯ ಜನರ ಪರವಾಗಿರದೆ ಉಳ್ಳವರ ಪರವಾಗಿ ನಿಂತಿದೆ. ಅವುಗಳಿಗೆ ಪತ್ರಿಕಾಧರ್ಮಕ್ಕಿಂತಲೂ ಕಾಂಚಾಣಧರ್ಮವೆ ಮುಖ್ಯವಾಗಿಬಿಟ್ಟಿದೆ. ವೃತ್ತಿಪರ ವರದಿಗಾರಿಕೆ, ತನಿಖಾತ್ಮಕ ವರದಿಗಾರಿಕೆ, ವಸ್ತುನಿಷ್ಠ ವಿಶ್ಲೇಷಣೆ, ಪಕ್ಷಪಾತರಹಿತ ಸಂದರ್ಶನ, ಸಂವಾದಗಳು ಕಣ್ಮರೆಯಾಗುತ್ತಿವೆ. ಆಳುವ ಪ್ರಭುತ್ವ ಬೆನ್ನು ಬಾಗಿಸು ಎಂದಾಗ ಕಾಲಿಗೆ ಬಿದ್ದು ತೆವಳುವವರ ಸಂಖ್ಯೆಗೇನೂ ಕೊರತೆಯಿಲ್ಲದಾಗಿದೆ.

ಸ್ವತಂತ್ರ ಮಾಧ್ಯಮ ಮರೀಚಿಕೆಯೇ?

19ನೆ ಶತಮಾನದಲ್ಲಿ ನ್ಯೂಯಾರ್ಕ್‌ನ ಸರ್ವಶ್ರೇಷ್ಠ ಪತ್ರಕರ್ತನಾಗಿದ್ದ ಜಾನ್ ಸ್ವಿಂಟನ್ ಸ್ವತಂತ್ರ ಮಾಧ್ಯಮದ ಬಗ್ಗೆ (ಬಹುಶಃ 1880ರಲ್ಲಿ) ಕೆಲವು ವಿಚಾರಗಳನ್ನು ಹೇಳಿದ್ದಾನೆ. ಜಾನ್ ಸ್ವಿಂಟನ್‌ನ ಅಭಿಪ್ರಾಯಗಳಲ್ಲಿ ಸತ್ಯಾಂಶವಿಲ್ಲ ಎನ್ನಲಾಗುವುದಿಲ್ಲ.

"ಇತಿಹಾಸದ ಪ್ರಸಕ್ತ ಕಾಲಘಟ್ಟದಲ್ಲಿ ಸ್ವತಂತ್ರ ಮಾಧ್ಯಮ ಎನ್ನುವುದು ಇಲ್ಲವೇ ಇಲ್ಲ. ಇದು ನಿಮಗೂ ಗೊತ್ತು, ನನಗೂ ಗೊತ್ತು. ಪ್ರಾಮಾಣಿಕವಾಗಿ ಅನಿಸಿದ್ದನ್ನು ಬರೆಯುವ ಧೈರ್ಯ ನಿಮ್ಮಲ್ಲಿ ಯಾರಿಗೂ ಇಲ್ಲ. ಒಂದು ವೇಳೆ ಬರೆದರೂ ಅದು ಪ್ರಕಟವಾಗುವುದಿಲ್ಲವೆಂದು ನಿಮಗೆ ಮೊದಲೇ ಗೊತ್ತಿರುತ್ತದೆ. ನಾನು ಕೆಲಸ ಮಾಡುತ್ತಿರುವ ಪತ್ರಿಕೆಯವರು ನನಗೆ ಸಂಬಳ ಕೊಡುತ್ತಿರುವುದು ನನ್ನ ಪ್ರಾಮಾಣಿಕ ಅಭಿಪ್ರಾಯಗಳನ್ನು ಬರೆಯದೆ ಇರುವುದಕ್ಕೆ. ನಿಮಗೆಲ್ಲರಿಗೂ ಇದೇ ರೀತಿಯ ಕೆಲಸಗಳಿಗೆ ಇದೇ ರೀತಿ ಸಂಬಳ ನೀಡಲಾಗುತ್ತಿದೆ. ಪ್ರಾಮಾಣಿಕ ಅಭಿಪ್ರಾಯಗಳನ್ನು ಬರೆಯುವ ಮೂರ್ಖತನ ತೋರಿಸುವವರು ಬೇರೊಂದು ನೌಕರಿಗಾಗಿ ಬೀದಿಬೀದಿ ಅಲೆಯಬೇಕಾಗುತ್ತದೆ."

"ನನ್ನ ಪ್ರಾಮಾಣಿಕ ಅಭಿಪ್ರಾಯಗಳನ್ನೆಲ್ಲಾದರೂ ನನ್ನ ಪತ್ರಿಕೆಯಲ್ಲಿ ಪ್ರಕಟಿಸಿಬಿಟ್ಟರೆ ಮುಂದಿನ 24 ಗಂಟೆಗಳೊಳಗಾಗಿ ನೌಕರಿ ಕಳೆದುಕೊಳ್ಳಲಿದ್ದೇನೆ. ಪತ್ರಕರ್ತನ ಕೆಲಸವೆ ಸತ್ಯದ ನಾಶ, ಸುಳ್ಳಿನ ವಿಜೃಂಭಣೆ, ವಿರೂಪಗೊಳಿಸುವಿಕೆ, ಮಾನ ಕಳೆಯುವಿಕೆ, ಧನಪಿಶಾಚಿಯ ಪದತಲದಲ್ಲಿ ಹಲ್ಲುಗಿಂಜುತ್ತ ಬಿದ್ದಿರುವುದು ತುತ್ತು ಅನ್ನಕ್ಕೋಸ್ಕರ ದೇಶವನ್ನೆ ಮಾರುವುದು. ಇದು ನಿಮಗೂ ಗೊತ್ತು ನನಗೂ ಗೊತ್ತು..... ಸ್ವತಂತ್ರ ಮಾಧ್ಯಮಕ್ಕೆ ಶುಭಕೋರುವಿಕೆ ಎನ್ನುವುದು ಎಂಥಾ ಮೂರ್ಖತನ. ನಾವು ಪರದೆಯ ಹಿಂದಿರುವ ಶ್ರೀಮಂತರ ಹತ್ಯಾರುಗಳು, ತೊತ್ತುಗಳು. ಅವರ ಸೂತ್ರಕ್ಕೆ ತಕ್ಕಂತೆ ಕುಣಿಯುವ ಗೊಂಬೆಗಳು ನಾವು. ನಮ್ಮ ಸಾಮರ್ಥ್ಯ, ಸಾಧ್ಯತೆ, ಬದುಕು ಎಲ್ಲವೂ ಇತರರ ಸೊತ್ತು. ತು[illegible] ಲಾಭಕ್ಕಾಗಿ ಬೌದ್ಧಿಕ ಶಕ್ತಿಯನ್ನು ಮಾರಿಕೊಳ್ಳುವವರು ನಾವು."

ಸ್ವಿಂಟನ್‌ನ ಖಂಡತುಂಡ ವಾಕ್ಯಗಳಲ್ಲಿ ಹೆಚ್ಚಿನವು ಇವತ್ತಿನ ಭಾರತದ ಮಟ್ಟಿಗೂ ನಿಜವೆನಿಸುವುದಿಲ್ಲವೇ? ಒಟ್ಟಾರೆಯಾಗಿ ಭಾರತದ ಪ್ರಜಾಪ್ರಭುತ್ವದ ನಾಲ್ಕನೆ ಆಧಾರಸ್ತಂಭ ಕುಸಿಯುತ್ತಿದೆ. ಪ್ರಜಾಪ್ರಭುತ್ವದ ಪರಿಧಿ ಸಂಕುಚಿತಗೊಳ್ಳುತ್ತಿದೆ. ರಾಜಕೀಯ ವ್ಯವಸ್ಥೆ ಹೆಚ್ಚೆಚ್ಚು ಕಾರ್ಪೊರೇಟ್ ಶಕ್ತಿಗಳ ನಿಯಂತ್ರಣಕ್ಕೆ ಒಳಪಡುತ್ತಿದೆ. ಅಂದರೆ ಆಡಳಿತ ವ್ಯವಸ್ಥೆ ಸ್ಪಷ್ಟವಾಗಿ ಬಂಡವಾಳಶಾಹಿ ಪ್ರಜಾಪ್ರಭುತ್ವದೆಡೆ ದೌಡಾಯಿಸುತ್ತಿದೆ. ಆದರೆ ಭಾರತದ ನೆಲದಲ್ಲಿ ಸಾಂವಿಧಾನಿಕ ಧರ್ಮ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು ಇನ್ನೂ ಸರಿಯಾಗಿ ಬೇರೂರದಿರುವ ಸನ್ನಿವೇಶವಿರುವುದರಿಂದಲೆ ಮುಂದೊಂದು ದಿನ ದೇಶದ ಆಗಸದಲ್ಲಿ ಸರ್ವಾಧಿಕಾರದ ಕಾರ್ಮೋಡ ಕವಿಯುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ.

● ಸುರೇಶ್ ಭಟ್ ಬಾಕ್ರಬೈಲ್


ಆಧಾರ: ನೋಮ್ ಚಾಮ್‌ಸ್ಕಿ ಅವರ *Government in The Future* ಮತ್ತು ರಿಚರ್ಡ್ ಬೋಯರ್ ಹಾಗೂ ಹರ್ಬರ್ಟ್ ಮೊರೈಸ್ ಅವರ *Labor's Untold Story*



ಯೋಗೇಶ್ ಮಾಸ್ಟರ್

ಸಂಗಾಣದ ಹೂರಣ

ಕುಂಡಲಿನಿ ಶಕ್ತಿಯ ಪರಿಕಲ್ಪನೆ ಮತ್ತು ಗೀಳು



ನಾನು ಸಣ್ಣವನಿದ್ದಾಗ ಸ್ವಾಮಿ ವಿವೇಕಾನಂದರ ಬಗ್ಗೆ ...ಂದು ಮಾತು ಪ್ರಚಲಿತದಲ್ಲಿತ್ತು, ಸ್ವಾಮಿ ವಿವೇಕಾನಂದರು ...ದ್ಧರಾಗದೆಯೇ ಸಾಯುವ ಕಾರಣವನ್ನು ಕುರಿತು ...ಳುತಲಿದ್ದುದ್ದೇನೆಂದರೆ, ಅಖಂಡ ಬ್ರಹ್ಮಚರ್ಯ ಪಾಲನೆ ...ಮಾಡುತ್ತಿದ್ದ ಅವರ ಸ್ಖಲನವಾಗದ ವೀರ್ಯವೆಲ್ಲಾ ಒಟ್ಟಾಗಿ ...ತ್ತಿಗೇರಿ ಅಥವಾ ಆಧ್ಯಾತ್ಮಿಕವಾಗಿ ಹೇಳುವುದಾದರೆ ...ಹಸ್ರಾರಕ್ಕೆ ಹೋಗಿ ಪ್ರಾಣ ತ್ಯಜಿಸಿದರು ಎಂದು. ಧ್ಯಾನದ ...ಮೂಲಕ (ಇಚ್ಛಾಮರಣೆಯಂತೆ) ಭೌತಿಕ ದೇಹವನ್ನು ...ಜಿಸಿದರು ಎಂದೂ ಒತ್ತಿ ಹೇಳಲಾಗುತ್ತಿತ್ತು. ಅದಕ್ಕೆ ...ಷ್ಟು ಆ ಮಾತುಗಳ ಪ್ರತಿಪಾದಕರಿಗೆ ಕೇಳುತ್ತಿದ್ದೆ "ಸ್ಖಲಿಸದೇ ...ರುವ ವೀರ್ಯವು ನೆತ್ತಿಗೇರಿ ಸಾಯುವಂತಿದ್ದರೆ, ...ಲಿಸಿಬಿಡುವುದೇ ಒಳಿತಲ್ಲವೇ? ಈವರೆಗೂ ...ಮಾಡಿರುವಂತಹ ಅಧ್ಯಾತ್ಮ ಸಾಧನೆಯನ್ನೂ, ಜನ ...ಪ್ರಗತಿಯನ್ನೂ ಇನ್ನೂ ಹೆಚ್ಚಿನ ಕಾಲ ಮಾಡಬೇಕಾಗಿತ್ತಲ್ಲವೇ? ...ಸರವಾಯಿತೆಂದೋ ಅಥವಾ ಸಾಕಾಗಿಹೋಯಿತೆಂದೋ ...ಮನು ಯಾಕಾಗಿ ಹೋಗುವ ಇಚ್ಛೆಯನ್ನು ಹೊಂದಬೇಕು? ...ರಣ ಬರುವ ಕಾಲಕ್ಕೆ ಅದನ್ನು ಸ್ವೀಕರಿಸದೇ, ಮುನ್ನಾಗಿ ...ೇ ಅದನ್ನು ಅಪ್ಪುವುದು ಪ್ರಕೃತಿಗೆ ವಿರುದ್ಧವಲ್ಲವೇ?" ...ದು. ಆಗ ಅವರುಗಳು, ಅವರ ಪ್ರಾರಬ್ಧವೆಂದೋ, ...ವರು ವಿಧಿಸಿದ್ದ ಕರ್ತವ್ಯವು ಅಷ್ಟೇ ಎಂದೋ, ಸಂಸಾರ ...ಮತ್ತು ಪ್ರಪಂಚದ ಮೇಲೆ ವ್ಯಾಮೋಹವಿಟ್ಟುಕೊಳ್ಳದ ...ಯೋಗಿಯ ಬದುಕೇ ಹಾಗೆಂದೋ; ಏನೋ ಹೇಳುತ್ತಿದ್ದರು. ...ದರೆ, ನಾನು ಇತ್ತೀಚೆಗೆ ಭೇಟಿಯಾದ ಹಲವಾರು ...ಯುವಕರೂ ಕೂಡ ವಿವೇಕಾನಂದರ ಬಗ್ಗೆ ಅಸ್ಖಲಿತ ...ಬ್ರಹ್ಮಚಾರಿಯ ಅವಘಡ ಅಥವಾ ಅನುಭೂತಿಯ ...ಕಲ್ಪನೆಯನ್ನೇ ಹೊಂದಿದ್ದರು.

ಅಸ್ಖಲಿತ ವೀರ್ಯದ ಶಕ್ತಿ ಸಂವರ್ಧನೆಯ ಬಗ್ಗೆ ಈ ...



...ತಿಯಲ್ಲಿ ಪರಿಚಯಿಸುವ ಮತ್ತು ಅದನ್ನು ನಂಬಿಕೊಳ್ಳುವ ...ಬ್ಬರ ಮನಸ್ಥಿತಿಗಳ ಮೇಲೆ ಗಮನ ಹರಿಸಿದರೆ, ...ಹ್ಮಚರ್ಯವನ್ನು ಪಾಲಿಸುವವನು ಅತ್ಯಂತ ಉತ್ಕೃಷ್ಟ ...ದ ಸಾಧನೆಯನ್ನು ಮಾಡುವವನೆಂದೂ, ಅದು ಸಾಧಾರಣ ...ಕ್ತಿಗಳಿಗೆ ಸಾಧ್ಯವಿಲ್ಲವೆಂದೂ, ಅಂತಹ ಸಾಧನೆಯನ್ನು ...ಮಾಡುವವನು ಎಲ್ಲರಿಗಿಂತ ಹೊರತಾಗಿರು ವವನೂ ಮತ್ತು ...ಪಾಯದ ದಾರಿಯಲ್ಲಿ ನಡೆಯುವ ಆದರೆ ...ಸಾಮಾನ್ಯವಾಗಿರುವುದನ್ನು ಸಾಧಿಸುವವನು ಎಂತಲೂ ...ಚಾರ ಮಾಡುವಂತಹ ಒಂದು ತಂತ್ರವಾಗಿಯೇ ...ಣುವುದು.

ಅಸ್ಖಲಿತ ಬ್ರಹ್ಮಚರ್ಯೆಯ ಫಲವಾಗಿ ಮೂಲಾಧಾರ ...ದದಲ್ಲಿರುವ ಕುಂಡಲಿನೀ ಶಕ್ತಿಯು ಜಾಗೃತವಾಗಿ ಅದು ...ಮೇಲಕ್ಕೆ ಏರುತ್ತಾ ಏರುತ್ತಾ ಸ್ವಾದಿಷ್ಠಾನ, ಮಣಿಪೂರ, ...ನಾಹತ, ವಿಶುದ್ಧ, ಆಜ್ಞಾ ಮತ್ತು ಸಹಸ್ರಾರದ ...ಪದ್ಮದವರೆಗೂ ಸಾಗುತ್ತಿದ್ದಂತೆ ವಿಶೇಷ ಶಕ್ತಿಗಳು ಲಭಿಸುತ್ತಾ ...ಹೋಗಿ, ಕೊನೆಗೆ ಸಂಪೂರ್ಣ ಮುಕ್ತವಾಗುವ, ...ಜಯೋಗದ ಅಂತಿಮ ಗುರಿಯಾದ ಸಹಸ್ರಾರವನ್ನು ...ಪಿ ಸ್ವಯಂ ಭಗವಂತನೇ ತಾನಾಗುವ ಸ್ಥಿತಿ ಎಂದು ...ವಾರು ನಂಬಿರುವ ಕಾರಣದಿಂದ ಕುಂಡಲಿನಿ ಯೋಗದ ...ರಗಳು ತುಂಬಿ ತುಳುಕುತ್ತಿರುತ್ತವೆ.

...ಕುಂಡಲಿನೀ ಶಕ್ತಿ, ಮೂಲಾಧಾರಾದಿ ಚಕ್ರಗಳು, ಧ್ಯಾನ, ...ರಣ ಇತ್ಯಾದಿಗಳೆಲ್ಲಾ ಮನಶಾಸ್ತ್ರೀಯವಾಗಿಯೂ ಕೂಡ ...ಶ್ಲೇಷಣೆ ಹಾಗೂ ಅಧ್ಯಯನಗಳಿಗೆ ಒಳಪಟ್ಟಿವೆ. ಅವುಗಳ ...ಸತ್ಯತೆಗಳನ್ನು ಹುಡುಕುತ್ತಾ ವಿಮರ್ಶೆ ಅಥವಾ ಟೀಕೆ ...ಡುವ ಬದಲು ಶತಮಾನಗಳ ಈ ಪರಿಕಲ್ಪನೆಗಳು ...ನ್ನು ಹೇಳುತ್ತಿವೆ ಮತ್ತು ಅವುಗಳು ಬೇರೆ ಬೇರೆ ...ಗಳಲ್ಲಿ ಮತ್ತು ದೇಶಗಳಲ್ಲಿ ವಿವಿಧ ಸಂಸ್ಕೃತಿಗಳಿಂದ ...ಗೆ ಪ್ರಯೋಗಿಸಲ್ಪಡುತ್ತಾ ಬಂದವು ಎಂದು ...ಮಕೊಳ್ಳುವುದು ಅತ್ಯಂತ ರೋಚಕ ಮತ್ತು ಅಧ್ಯಯನ ...ಗ್ಯ.

ನೈಸರ್ಗಿಕ ಶಕ್ತಿ

...ರಮಣ ಮಹರ್ಷಿಯವರು ಕುಂಡಲಿನಿಯನ್ನು ಅದು ...ಲ್ಲರೂಪ ನೈಸರ್ಗಿಕ ಶಕ್ತಿ ಎಂದು ಸರಳವಾಗಿ ಹೇಳಿ ...ಮುಗಿಸಿಬಿಡುತ್ತಾರೆ. ಯಾವುದೇ ಯೋಗಿಗಳು ಎಂತಹುದೇ ವ್ಯಾಖ್ಯಾನಗಳನ್ನು ನೀಡಿದರೂ ಕುಂಡಲಿನಿ ಎಂಬುದು ಒಂದು ಶಕ್ತಿ ಎಂಬುದನ್ನು ಮೀರಿ ಬೇರೇನೋ ಹೇಳುವುದಿಲ್ಲ.

ಈ ಕುಂಡಲಿನಿ ಶಕ್ತಿಯು ವಿಶೇಷ ಸಾಧಕರಿಂದ ಹೊರತಾಗಿ ಇತರರಿಗೂ ಸಾಧನೆಯ ಬದಲಾಗಿ ಗೀಳನ್ನಾಗಿ ಜನಕ್ಕೆ ಹತ್ತಿಸಿದಂತಹ ಶ್ರೇಯಸ್ಸು ಮಾತ್ರ ಬಿಡದಿಯ ನಿತ್ಯಾನಂದ, ಆರ್ಟ್ ಆಫ್ ಲೀವಿಂಗ್‌ನ ಶ್ರೀ ಶ್ರೀ ರವಿಶಂಕರ್‌ರಂತಹ ಹಲವು ವಾಣಿಜ್ಯಾಸಕ್ತಿಯ ಅನೇಕ ಗುರೂಜಿಗಳಿಗೆ ಸೇರುತ್ತದೆ.

ಕುಂಡಲಿನಿ ಯೋಗವೋ ಅಥವಾ ಸುದರ್ಶನ ಕ್ರಿಯಾ ಯೋಗವೋ ಅಂತೂ ಎಂತದ್ದೊ ನಮ್ಮಲ್ಲಿ ವಿಶೇಷ ಶಕ್ತಿಯನ್ನು ಉಂಟುಮಾಡಿ ಅದರಿಂದ ನಾವು ಏನೇನನ್ನೋ ಸಾಧಿಸಿಬಿಡುತ್ತೇವೆ ಅಥವಾ ಯಾರಿಗೂ ಸಿಗದ ನೆಮ್ಮದಿ ಮತ್ತು ಶಾಂತಿಯು ಲಭಿಸಿಬಿಡುತ್ತದೆ ಎಂದು ಸಾಮಾನ್ಯ ಜನರು ಅದರಲ್ಲೂ ಅಪ್ಪರ್ ಮಿಡ್ಲ್ ಕ್ಲಾಸ್ ಜನ ಹಾಗೂ ಹೈ ಫೈ ಜನಗಳು ಮೂರ್ಖರಾಗಿದ್ದು ಮತ್ತು ಆಗುತ್ತಿರುವುದು ಮಾತ್ರ ಇನ್ನೂ ನಡೆದುಕೊಂಡೇ ಬರುತ್ತಿದೆ.

ಇಂಥಾ ಶಕ್ತಿಯ ಗೀಳಿಗೆ ಮತ್ತು ಉನ್ಮತ್ತತೆಗೆ ಒಳಗಾದವರಲ್ಲಿ ದಕ್ಷಿಣ ಭಾರತದ ಜನಪ್ರಿಯ ಸಂಗೀತ ನಿರ್ದೇಶಕ ಇಳಯರಾಜಾ ಕೂಡ ಒಬ್ಬರು. ಶಕ್ತಿ ಸಾಧನೆಗೆ ತೊಡಗಿಕೊಂಡು, ಬರಿಯ ನೆಲದ ಮೇಲೆ ಕಾಲಿಟ್ಟರೆ ಶಕ್ತಿಯನ್ನು ಭೂಮಿಯು ಹೀರಿಕೊಂಡು ಬಿಡುತ್ತದೆ, ಬೇರೆಯವರಿಗೆ ಷೇಕ್ ಹ್ಯಾಂಡ್ ಮಾಡಿದರೆ ಶಕ್ತಿಯು ಅವರಿಗೆ ಹೊರಟುಹೋಗುತ್ತದೆ ಎಂದು ಜನಕ್ಕೆ ವಿಮುಖವಾಗಿ, ಸಹಜ ಮನಸ್ಥಿತಿಯನ್ನೇ ಕಳೆದುಕೊಂಡಿದ್ದರು ಎಂಬ ಮಾತು ಒಂದಷ್ಟು ಕಾಲ ಕೇಳಿಬರುತ್ತಿತ್ತು. ಈಗ ಅದರಿಂದ ಹೊರಬಂದಿದ್ದಾರೆ ಎಂಬ ಸಮಾಧಾನಕರ ಸುದ್ದಿಯೂ ಬಂದಿದೆ. ಅದೇನೇ ಇರಲಿ, ಶಕ್ತಿಯ ಗೀಳು ಹತ್ತಿದ ಮನುಷ್ಯ ಹಾಗೆ ಮಾಡಿದರೆ ಶಕ್ತಿ ಸಂವರ್ಧನವಾಗುವುದು, ಹೀಗೆ ಮಾಡಿದರೆ ಶಕ್ತಿಯ ಪತನವಾಗುವುದು ಎಂಬ ತೊಳಲಾಟದಲ್ಲಿಯೇ ಮನಸ್ಸಿನ ಸಹಜ ಆರೋಗ್ಯವನ್ನು ಕಳೆದುಕೊಂಡು ಒಂದು ರೀತಿಯ ಮಾನಸಿಕ ಅಸ್ವಸ್ಥನಂತೆ ಕಾಣುತ್ತಾರೆ. ಎಲ್ಲಾ ಕಡೆ ಉಣ್ಣಲಾರರು, ಇಷ್ಟ ಬಂದ ಕಡೆ ಇರಲಾರರು, ಏನೇನೋ ಡೂಸ್ ಅಂಡ್ ಡೋಂಟ್ಸ್.

ಅಸ್ಖಲಿತ ಬ್ರಹ್ಮಚರ್ಯ

ವೀರ್ಯ ಸ್ಖಲನವಾಗುವ ಅಥವಾ ಆಗಿಸಿಕೊಳ್ಳುವ ಹುಡುಗರಿಗಂತೂ ಎಷ್ಟೆಷ್ಟೋ ದುಃಸ್ವಪ್ನಗಳು. ಅಧ್ಯಾತ್ಮ ಸಾಧನೆಯಲ್ಲಿ ಆಸಕ್ತಿ ಇರುವ ಕೆಲವು ಯುವಕರು ಯಾವಾಗಲೂ ಖಿನ್ನತೆಯಲ್ಲಿದ್ದು ನನ್ನ ಬಳಿಗೆ ಸಮಾಲೋಚನೆಗೆಂದು ಬಂದಿದ್ದರು. ಅವರ ಆತಂಕ ಮತ್ತು ಖಿನ್ನ ಮನಸ್ಥಿತಿಗೆ ಕಾರಣವೇನೆಂದರೆ, "ನಾವು ಬ್ರಹ್ಮಚರ್ಯ ಸಾಧನೆ ಮಾಡುತ್ತಿದ್ದೇವೆ. ನಾವು ಆಧ್ಯಾತ್ಮಿಕವಾಗಿ ಉತ್ತುಂಗಕ್ಕೇರಿ ಅದರಿಂದ ನಮ್ಮ ಸಮಾಜದ, ಸಾಧ್ಯವಾದರೆ ಈ ಲೋಕದ ದುಃಖ ಸಂಕಟವನ್ನು ನಿವಾರಣೆಯನ್ನು ಮಾಡುವ ಉದ್ದೇಶವನ್ನೂ, ಆತ್ಮಸಾಕ್ಷಾತ್ಕಾರವನ್ನೂ ಹೊಂದುವ ಉದ್ದೇಶದಲ್ಲಿದ್ದೇವೆ. ಆದರೆ, ವೀರ್ಯವು ಅಸ್ಖಲಿತವಾಗಿದ್ದು ಓಜಸ್ಸಾಗಿ ರೂಪಾಂತರ ಹೊಂದುವ ಮುನ್ನವೇ ಅದು ನಿದ್ರೆಯಲ್ಲೋ ಅಥವಾ ಸ್ವಪ್ನ ಮಿಥುನದಲ್ಲೋ ಸ್ಖಲನವಾಗಿಬಿಡುತ್ತದೆ. ಅದಕ್ಕಾಗಿ ಏನೇನೆಲ್ಲಾ ದೇಹದಂಡನೆ ಮಾಡುತ್ತೇವೆ. ಪ್ರಾಣಾಯಾಮ ಮತ್ತು ಇತರ ಪ್ರಾರ್ಥನಾದಿ ಸಾಧನೆಗಳನ್ನು ಮಾಡುತ್ತೇವೆ. ಆದರೆ ಏನೂ ಪ್ರಯೋಜನ ಕಾಣುತ್ತಿಲ್ಲ. ಇದಕ್ಕೆ ಕಾರಣವೇನು? ನಮ್ಮ ಓಜಸ್ಸನ್ನು ವೃದ್ಧಿಸಿಕೊಳ್ಳುವುದು ಹೇಗೆ. ಕುಂಡಲಿನೀ ಶಕ್ತಿಯನ್ನು ಎಚ್ಚರಿಸಿಕೊಳ್ಳುವುದು ಹೇಗೆ?" ಎಂಬುದು.

ಬೆವರು, ಮಲ, ಮೂತ್ರಾದಿಗಳಂತೆಯೇ ವೀರ್ಯವೂ ಕೂಡ ಒಂದು ತ್ಯಾಜ್ಯವಾಗಿದ್ದು, ನಿನಗೆ ಬೇಕಿರಲಿ, ಬೇಡದಿರಲಿ, ಅದು ದೇಹದಿಂದ ವಿಸರ್ಜನೆ ಹೊಂದುತ್ತದೆ ಎಂದು ನಾನು ನೀಡುವ ಸಮಾಧಾನವು ಅವರಿಗೆ ಪಥ್ಯವಾಗಲಿಲ್ಲ. ಬದಲಾಗಿ "ಅದು ಸಾಮಾನ್ಯರ ವಿಷಯದಲ್ಲಿ ಹಾಗಾಗುತ್ತದೆ. ಪ್ರಕೃತಿಯ ಚಕ್ರದಲ್ಲಿ ಸಿಕ್ಕಿರುವವರ ವಿಚಾರವದು. ಆದರೆ ನಾವು ಅಧ್ಯಾತ್ಮ ಸಾಧಕರು. ನಮಗೂ ಅದು ಹಾಗೆ ಆಗಬಾರದು. ವೀರ್ಯವು ಉದ್ದೇಶರಹಿತ ವಿಸರ್ಜನೆಯೋ, ಉದ್ದೇಶಪೂರ್ವಕ ಸ್ಖಲನವೋ ಆಗದೇ ಅದು ಓಜಸ್ಸಾಗಿ, ಶಕ್ತಿಯಾಗಿ ಮಾರ್ಪಾಟಾಗುವ ಸಲುವಾಗಿಯೇ ಇಷ್ಟೆಲ್ಲಾ ಮಾಡುತ್ತಿರುವುದು. ಒಂದು ವೇಳೆ ನಮಗೆ ಈ ಸಾಧನೆ ಅಸಾಧ್ಯವೇ ಆಗಿದ್ದ ಪಕ್ಷದಲ್ಲಿ ಇದು ನಮ್ಮ ಪ್ರಾರಬ್ಧವೇ ಆಗಿದ್ದು, ಇನ್ನೂ ಮುಂದುವರಿದು, ಈ ಜನ್ಮದಲ್ಲಿ ಅಲ್ಲದಿದ್ದರೆ, ಮುಂದಿನ ಜನ್ಮದಲ್ಲಾದರೂ ಸಾಧಿಸಿಕೊಳ್ಳುತ್ತೇವೆ" ಎಂಬ ಅರ್ಥದ ಮಾತುಗಳನ್ನಾಡಿದರು.

ಅವರನ್ನು ಅವರ ಖಿನ್ನತೆಯಿಂದ ಹೊರಗೆ ತರಲು ನನಗೆ ಸಾಧ್ಯವಾಗಲಿಲ್ಲ ಅಥವಾ ನನಗೆ ಅವರು ಸಾಕಷ್ಟು ಅವಕಾಶಗಳನ್ನು ನೀಡಲಿಲ್ಲ. ಒಟ್ಟಿನಲ್ಲಿ ಅವರ ಮಾತಿನ ತಾತ್ಪರ್ಯವೇನೆಂದರೆ, "ಶಕ್ತಿ ಸಾಧನೆ ಸಾಮಾನ್ಯರಿಗಲ್ಲ. ಕೇವಲ ಚೋಸನ್ ಅಂಡ್ ಬ್ಲೆಸ್ಡ್‌ವನ್‌ಗಳಿಗೆ ಮಾತ್ರ. ಇದರ ಸಾಧನೆಯು ನಮ್ಮ ಪ್ರಾರಬ್ಧದ ಮೇಲೆ, ಮಾಡಿರುವ ಕರ್ಮಾನುಸಾರದ ಫಲಗಳ ಮೇಲೆ ಅವಲಂಬಿತವಾಗಿರುತ್ತದೆ. ವೀರ್ಯ ಸ್ಖಲನವು ಒಂದು ವೈಫಲ್ಯವೇ ಹೊರತು ಸಹಜ ಪ್ರಕ್ರಿಯೆ ಅಲ್ಲ. ಸಹಜವಾದ ಪ್ರಾಕೃತಿಕವಾದ ಘಟನೆಗಳು ಸಾಮಾನ್ಯರಿಗೆ ಮಾತ್ರ ಘಟಿಸುತ್ತವೆ" ಇತ್ಯಾದಿ.

ಪ್ರಕೃತಿಯ ರಹಸ್ಯ ಮತ್ತು ಶಕ್ತಿಯ ಪರಿಕಲ್ಪನೆ

ಪ್ರಕೃತಿಯಲ್ಲಿ ಭೇದಿಸಲಾಗದ ರಹಸ್ಯಗಳ ಹಿಂದೆ ಬಿದ್ದ ಮನುಷ್ಯ ಅವುಗಳನ್ನು ಘಟಿಸುವಂತೆ ಮಾಡುವ ಅಗೋಚರ ಶಕ್ತಿಯ ಬಗ್ಗೆ ಕೌತುಕಗೊಂಡಿದ್ದ. ಮಾನವ ವಿಕಾಸದ ಇತಿಹಾಸದಲ್ಲಿ ಯಾವ್ಯಾವ ವಿಷಯಗಳು ರಹಸ್ಯಗಳಾಗಿ ಕಂಡವೋ ಅವು ನಾನಾ ಪರಿಕಲ್ಪನೆಗಳಾಗಿ ಪ್ರಯೋಗಗಳಿಗೆ ಒಳಪಡುತ್ತಲೇ ಬಂದಿವೆ. ಅವುಗಳಲ್ಲಿ ಎಷ್ಟೋ ವಿಷಯಗಳು ಪ್ರಾಯೋಗಿಕವಾಗಿ ಸಫಲವಾಗಿವೆ, ಮತ್ತೆಷ್ಟೋ ವಿಷಯಗಳು ರಹಸ್ಯಗಳಾಗಿಯೇ ಉಳಿದು ಮೌಢ್ಯಕ್ಕೆ ಕಾರಣವಾಗಿವೆ. ಮತ್ತೂ ಕೆಲವು ವಿಷಯಗಳು ವೈಜ್ಞಾನಿಕ ಕಕ್ಷೆಯೊಳಗೆ ಬಂದು ಅರೆಬರೆ ಬಿಡಿಸಿಕೊಂಡರೆ, ಮತ್ತೂ ಕೆಲವು ಸಾಂಸ್ಕೃತಿಕ ಪರಂಪರೆಯ ಪಟ್ಟಿಗೆ ಬರಿದೆ ಪರಿಕಲ್ಪನೆಗಳಾಗಿ ಸಂದಿ ಹೋಗಿವೆ. ಇಂಥಾ ಪಟ್ಟಿಗೆ ಸೇರುವ ಅದೆಷ್ಟೋ ವಿಷಯಗಳಲ್ಲಿ ದೇವರು, ಕುಂಡಲಿನಿ, ಮಾಟ, ಮಂತ್ರ, ತಂತ್ರ, ಮೋಕ್ಷ, ಸ್ವರ್ಗ, ನರಕ, ಕೈವಲ್ಯ, ಜ್ಯೋತಿಷ್ಯ ಇತ್ಯಾದಿಗಳು ಸೇರಿಹೋಗಿವೆ. ಈ ಎಲ್ಲದರ ಮೂಲ ಪ್ರಕೃತಿಯಲ್ಲಿನ ಅಭೇದ್ಯ ರಹಸ್ಯಗಳ ಬಗೆಗಿನ ಕುತೂಹಲ ಮತ್ತು ಆಸಕ್ತಿಗಳೇ ಆಗಿವೆ. ಅವುಗಳೆಲ್ಲಾ ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ನಾನಾರೀತಿಯಲ್ಲಿ ರೂಪಾಂತರಗಳನ್ನು ಹೊಂದುತ್ತಾ ಬಂದವು. ಅವುಗಳು ಇಂದಿಗೂ ಆಸಕ್ತಿಯ ವಸ್ತುವಾಗಿ ಸಹಜ ಕುತೂಹಲದಿಂದ ಅಭ್ಯಾಸ ಮಾಡುವವರಲ್ಲಿ ಒಂದು ಬಗೆಯ ಸಕಾರಾತ್ಮಕವಾದ ಸಾಧನೆಗಳಾಗಿ ಕಂಡುಬಂದರೆ, ಶಕ್ತಿಯ, ಆ ಶಕ್ತಿಯಿಂದ ಉಂಟಾಗುವ ಅತೀಂದ್ರಿಯ ಅನುಭವ ಅಥವಾ ಅಧಿಕಾರಕ್ಕಾಗಿ ಹಾತೊರೆಯುವ ಜೀವಿಗಳಲ್ಲಿ ಗೀಳಾಗಿ ಪರಿಣಮಿಸಿದೆ. ಈ ಎರಡೂ ಬಗೆಯ ಜನರನ್ನು ನಾನು ಅದೆಷ್ಟೆಷ್ಟೋ ಧ್ಯಾನ ಶಿಬಿರಗಳಲ್ಲಿ ಕಂಡಿದ್ದೇನೆ. ಬರಿಯ ಸಹಜವಾದ ಕುತೂಹಲದಿಂದ ವಿಷಯವನ್ನು ಗೌರವಿಸುತ್ತಾ ಜಿಜ್ಞಾಸುವಾಗಿ ಪ್ರಯೋಗಶೀಲನಾಗಿರುವ ಸಾಧಕನು ಯಾವ ಉನ್ಮತ್ತತೆಗಳೂ ಇಲ್ಲದೇ ಮುಕ್ತವಾಗಿರುವಂತಹ ಲಕ್ಷಣಗಳನ್ನು ತೋರಿದರೆ, ಇದನ್ನು ಕಟ್ಟರ್ ಆಗಿ ಸಾಧಿಸಿ ಏನನ್ನೋ ಮಾಡಿ ಅಧಿಕಾರ ಸಾಧಿಸಲು, ಅಥವಾ ಇತರ ಯಾವುದೋ ಪಂಥವನ್ನು ಸುಳ್ಳು ಎಂದು ನಿರೂಪಿಸಲು ಹಪಹಪಿಸುವ ಮನೋರೋಗಿಗಳನ್ನು ಕಂಡಿದ್ದೇನೆ. ಅವರು ತೀವ್ರಗಾಮಿಗಳಾಗಿಯೂ ಕಾಣಬಹುದು. ಮಂದಗಾಮಿಗಳಾಗಿಯೂ ಇರುತ್ತಾರೆ. ಆದರೆ, ತಮ್ಮ ಸಾಧನೆಗಳ ಬಗ್ಗೆ ಕಠೋರ ನಿಲುವನ್ನೂ, ಅದಕ್ಕೆ ಅಡ್ಡಿ ಪಡಿಸುವವು ಎಂದು ಭಾವಿಸುವ ಯಾವುದೇ ವಿಚಾರಗಳನ್ನೂ ನಿರ್ದಾಕ್ಷಿಣ್ಯವಾಗಿ ತುಂಡರಿಸುವ ಮನಸ್ಥಿತಿಯನ್ನು ಹೊಂದಿರುತ್ತಾರೆ. ಅವರಿಗೆ ಎಲ್ಲೂ ಶಾಂತಿಯಿರುವುದಿಲ್ಲ, ಎಲ್ಲೂ ಆನಂದ ದೊರಕುವುದಿಲ್ಲ.


ಅಭೇದ್ಯ ರಹಸ್ಯದಲ್ಲಿ ಅಡಕವಾಗಿರುವ ಶಕ್ತಿಯ ಪರಿಕಲ್ಪನೆಯೇ ತಂತ್ರ, ಮಂತ್ರ, ಯಂತ್ರ, ಯಾಗ, ಮಾಂತ್ರಿಕತೆ ಇತ್ಯಾದಿ ಆಚರಣೆಗಳಿಗೆ ಕಾರಣವಾಗಿರುವುದು ಮಾತ್ರವಲ್ಲದೇ ವೈದಿಕರ ಪುರಾಣದಂತಹ ರೂಪಕಗಳಿಗೂ ಕಾರಣವಾದವು, ಜನಪದರ ಪರಿಕಲ್ಪನೆಗಳಲ್ಲೂ ರೂಪುಗೊಂಡವು. ಕೆಲವೊಮ್ಮೆ ಅವುಗಳದೆಷ್ಟು ವಿಸ್ತಾರಕ್ಕೆ ಒಳಗಾದವುಗಳೆಂದರೆ, ಅವುಗಳ ಮೂಲವನ್ನೇ ಮರೆಯುವಷ್ಟು. ಯೋಗಿಗಳು ಮತ್ತು ಸನ್ಯಾಸಿಗಳು ಸಂಸಾರಕ್ಕೆ ಮತ್ತು ಪ್ರಪಂಚಕ್ಕೆ ವಿಮುಖರಾಗಿ ಆತ್ಮಸಾಕ್ಷಾತ್ಕಾರಕ್ಕೆ ಅಥವಾ ಪರಮಾತ್ಮದಲ್ಲಿ ಐಕ್ಯತೆಯನ್ನು ಕಾಣುವ ಮಾರ್ಗವನ್ನು ಕಂಡುಕೊಳ್ಳಬೇಕೆಂದು ಪ್ರಾರಂಭದಲ್ಲಿ ಹೊರಟದ್ದು, ಸಹಜೀವಿಗಳನ್ನು ಅಲಕ್ಷಿಸುವುದಾಗಲಿ, ಸಮಾಜಕ್ಕೆ ಸ್ಪಂದಿಸದಿರುವುದಾಗಲಿ ಅಮಾನವೀಯವೆಂದು ವಿಸ್ತೃತಗೊಂಡು, ಸಾಂಘಿಕ ಜೀವನ ನಡೆಸತೊಡಗಿದರು. ಪ್ರಕೃತಿಯಲ್ಲಿನ ಅಥವಾ ಅಸ್ತಿತ್ವದಲ್ಲಿನ ಶುದ್ಧ ಚೈತನ್ಯದ ಜೊತೆಗೆ ತಮ್ಮ ಚೈತನ್ಯವನ್ನು ಮಿಳಿತಗೊಳಿಸಿಕೊಂಡು ಅದರಿಂದ ಉಂಟಾಗುವ ಸಾಮರ್ಥ್ಯದಿಂದ ಸಹಜೀವಿಗಳಿಗೆ ಸಹಕರಿಸುವ ಉದ್ದೇಶದಿಂದ ಜನ ನಡುವೆ ಬಾಳತೊಡಗಿದರು. ಆದರೆ, ಅದು ಇಂದು ಯಾವ ಮಟ್ಟಕ್ಕೆ ಬಂದಿದೆಯೆಂದರೆ, ಯಾವುದೋ ಒಂದು ಧರ್ಮದ ಲಾಂಛನವನ್ನು ತಲೆಯ ಮೇಲಿಟ್ಟುಕೊಂಡು, ಕಾವಿಯಂತಹ ಯೂನಿಫಾರ್ಮ್‌ಅನ್ನು ಹೊದ್ದು ಇತರ ಧರ್ಮೀಯರನ್ನು ಶತ್ರುವಾಗಿ ಕಾಣುತ್ತಾ ಇತರ ಪಂಥದವರೊಡನೆ ಪಂಥಗಳನ್ನು ಹೂಡುತ್ತಾ, ಸ್ಪರ್ಧಿಗಳಂತೆ ಆಗ್ರಹಪೂರ್ವಕವಾಗಿಯೂ, ಅಮಾನವೀಯವಾಗಿಯೂ ವರ್ತಿಸುತ್ತಿರುತ್ತಾರೆ.

ನಿಜವಾದ ಅರ್ಥದಲ್ಲಿ ಯಾವುದೇ ಧರ್ಮವು ಅಥವಾ ಪಂಥವು ಮಾರ್ಗ ಅಥವಾ ದಾರಿಯೇ ಆಗಿದ್ದು ಶುದ್ಧ ಚೈತನ್ಯದ ಸಂಪರ್ಕಕ್ಕೆ ಬರುವಂತಹ ಗುರಿಯನ್ನು ತಲುಪಿದೊಡನೆ ಧರ್ಮ, ಪಂಥಗಳಿಗೆ ಅತೀತರಾಗಬೇಕಾಗುವ ಒಂದು ಸಾಮಾನ್ಯ ಮತ್ತು ಸಾರ್ಥಕ ಲಕ್ಷಣಗಳು ತೋರಬೇಕು. ಅವನೆಂತಹ ಯೋಗಿಯೇ ಆಗಿದ್ದು ಅವನ ಧರ್ಮದ ಲಾಂಛನವನ್ನು ಹೊತ್ತಿದ್ದೇ ಆದ ಪಕ್ಷದಲ್ಲಿ ಅವನ ಸಾಧನೆಯು ಹುಸಿಯಾಗಿರಬೇಕು ಅಥವಾ ತೋರಿಕೆಯದ್ದಾಗಿರಬೇಕು.

ಇರಲಿ, ಸರ್ಪದಂತೆ ಮಂಡಲವನ್ನು ಹಾಕಿಕೊಂಡು ಬೆನ್ನಿನ ಮೂಳೆಯ ತಳದಲ್ಲಿ ಇರುವುದು ಎಂದು ಪರಿಭಾವಿಸಿರುವ ಕುಂಡಲಿನಿ ಶಕ್ತಿಯು ಯಾವ ಯಾವ ರೀತಿಗಳಲ್ಲಿ ವಿಶ್ಲೇಷಣೆಗೆ ಒಳಗಾಗುವುದು ಎಂದು ಮುಂದಿನ ಸಂಚಿಕೆಗಳಲ್ಲಿ ನೋಡೋಣ. ●

ಮೋದಿಯ ಭಂಟ ಅಧಿಕಾರಿಗಳಿಗೆ ಮುಂಬಡ್ತಿ

ಬೂಸಿ ಬಸ್ಯ... ಮೋದಿ! 27



ನರೇಂದ್ರ ಮೋದಿ ದೇಶದ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕೆಲವೇ ದಿನಗಳೊಳಗಾಗಿ ಎರಡು ಮಹತ್ವದ ಬೆಳವಣಿಗೆಗಳು ಸಂಭವಿಸಿವೆ. ಮೋದಿ ಆಡಳಿತದ ಅವಧಿಯಲ್ಲಿ ಗುಜರಾತ್‌ನಲ್ಲಿ ನಡೆದಂತಹ ಎರಡು ದೊಡ್ಡ ಕ್ರಿಮಿನಲ್ ಪ್ರಕರಣಗಳನ್ನು ಬಯಲಿಗೆಳೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಐಪಿಎಸ್ ಅಧಿಕಾರಿ ಜಿ.ಎಲ್. ಸಿಂಘಾಲ್‌ನ ಅಮಾನತು ಆದೇಶವನ್ನು ವಾಪಸ್ ಪಡೆಯಲಾಗಿದೆ. ಮಾತ್ರವಲ್ಲ ಆತನಿಗೆ ಗುಜರಾತ್ ರಾಜ್ಯ ರಿಸರ್ವ್ ಪೊಲೀಸ್ ಪಡೆಯ ಗ್ರೂಪ್ ಕಮಾಂಡೆಂಟ್ ಆಗಿ ಮುಂಬಡ್ತಿಯನ್ನೂ ದಯಪಾಲಿಸಲಾಗಿದೆ. ಅಜಿತ್ ದೊವಾಲ್ ಎಂಬ ಮೋದಿ ನಿಷ್ಠ ಮಾಜಿ ಗುಪ್ತಚರ ಅಧಿಕಾರಿಯನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರನಾಗಿ ನೇಮಿಸಲಾಗಿದೆ.


ಈ ಎರಡು ಪ್ರಕರಣಗಳು ಯಾವುವೆಂದರೆ ಒಂದು ಇಶ್ರತ್ ಜಹಾನ್ ನಕಲಿ ಎನ್ಕೌಂಟರ್ ಮತ್ತೊಂದು ಸ್ನೂಪ್‌ಗೇಟ್ ಅಥವಾ ಯುವತಿಯ ಗೂಢಚರ್ಯೆ ಪ್ರಕರಣ. ಇಶ್ರತ್ ಜಹಾನ್ ಪ್ರಕರಣದಲ್ಲಿ ಆರೋಪಿ ಸ್ಥಾನದಲ್ಲಿ ನಿಂತಿರುವ ಐದು ಉನ್ನತ ಪೊಲೀಸ್ ಅಧಿಕಾರಿಗಳ ಪೈಕಿ ಒಬ್ಬನಾದ ಸಿಂಘಾಲ್ ಸಿಬಿಐ ವಿಚಾರಣೆ ವೇಳೆ ಬಾಯ್ಬಿಟ್ಟು ತಪ್ಪೊಪ್ಪಿಕೊಂಡಿದ್ದ. ಗುಜರಾತಿನ ಗುಪ್ತದಳದ ಮುಖ್ಯಸ್ಥ ರಾಜೇಂದರ್ ಕುಮಾರ್‌ನಿಂದ ಬಂದೂಕು, ಕಾಡತೂಸು ಇತ್ಯಾದಿಗಳನ್ನು ಸಂಗ್ರಹಿಸಿ ನಿಜಾಮ್ ಎಂಬಾತನ ಕೈಗಿತ್ತು ತರುಣ್ ಬಾರೋತ್‌ಗೆ ತಲುಪಿಸುವ ಏರ್ಪಾಡು ಮಾಡಿದವನು ತಾನೆಂದು ಈತ ತಿಳಿಸಿದ್ದ. ಇಶ್ರತ್, ಜಾವೆದ್, ಜಿಸನ್ ಜೋಹರ್ ಮತ್ತು ಅಮ್ಜದಾಲಿಯರನ್ನು ಕೊಂದುಹಾಕಿದ ಬಳಿಕ ಈ ಶಸ್ತ್ರಾಸ್ತ್ರಗಳನ್ನು ಅವರ ಮೃತಶರೀರಗಳ ಪಕ್ಕದಲ್ಲಿ ಇರಿಸಲಾಗಿತ್ತೆಂದೂ ಹೇಳಿದ್ದ.

ಸಿಬಿಐ ವಿಚಾರಣೆಯ ವೇಳೆ ಸಿಂಘಾಲ್ 'ನಾನು ವಂಜಾರನ ಮನೆಗೆ ಹೋದಾಗ ಅಲ್ಲಿ ರಾಜೇಂದರ್ ಕುಮಾರ್ ಮತ್ತು ಪಿ ಪಿ ಪಾಂಡೆ ಇದ್ದರು. ಆ ಮೂವರು ಅಧಿಕಾರಿಗಳು ಈ ನಾಲ್ವರು ಯುವಜನರನ್ನು ಎನ್ಕೌಂಟರ್ ಮಾಡಿ ಮುಗಿಸುವ ಸ್ಕೆಚ್ ತಯಾರಿಸುತ್ತಿದ್ದರು. ವಂಜಾರ ತಾನು ಬಿಳಿ ದಾಡಿ ಮತ್ತು ಕರಿದಾಡಿ - ಮೋದಿ ಮತ್ತು ಶಾ - ಜೊತೆ ಮಾತನಾಡಿ ಇದರ ಬಗ್ಗೆ ಸೂಕ್ತ ಸೂಚನೆಗಳನ್ನು ಪಡೆದುಕೊಳ್ಳುವೆನೆಂದು ನಮಗೆ ಹೇಳಿದ. ತರುವಾಯ ಅವರಿಬ್ಬರ ಆದೇಶದಂತೆ ತಾನೇ ಒಂದು ದೂರನ್ನು ಬರೆದೆನೆಂದು ಅದನ್ನು ತನಗೆ ತೋರಿಸಿದ. ಅದರಲ್ಲಿ 'ಈ ನಾಲ್ವರು ಭಯೋತ್ಪಾದಕರು ಮುಖ್ಯಮಂತ್ರಿಯನ್ನು ಕೊಲೆ ಮಾಡುವ ಉದ್ದೇಶದಿಂದ ಬಂದಿದ್ದರು. ಅವರ ಜೊತೆ ನಡೆದ ಎನ್ಕೌಂಟರ್‌ನಲ್ಲಿ ಅವರೆಲ್ಲ ಹತರಾದರು....' ಎಂದೆಲ್ಲ ಬರೆದಿತ್ತು, ಇದಕ್ಕೆ ನಾನು ಸಮ್ಮತಿ ಸೂಚಿಸಿರಲಿಲ್ಲ' ಎಂದಿದ್ದ.



ದೇಶಾದ್ಯಂತ ವಿವಾದದ ಬಿರುಗಾಳಿಯನ್ನೆ ಎಬ್ಬಿಸಿದಂತಹ ಸ್ನೂಪ್‌ಗೇಟ್ ಹಗರಣದಲ್ಲಿ ಆ ಯುವತಿ ಮತ್ತು ಐಎಎಸ್ ಅಧಿಕಾರಿ ಪ್ರದೀಪ್ ಶರ್ಮರ ಚಲನವಲನಗಳ ಮೇಲೆ ನಿಗಾ ಇರಿಸಲೆಂದು ಗುಪ್ತಚರರನ್ನು ನಿಯೋಜಿಸಿದವನು ಇದೇ ಸಿಂಘಾಲ್. ಇದಕ್ಕೆ ಸಂಬಂಧಿಸಿದ ಫೋನ್ ದಾಖಲೆಗಳಿರುವ ಪೆನ್ ಡ್ರೈವ್ ಕೂಡ ತನ್ನ ಬಳಿ ಇದೆಯೆಂದು ಸಿಬಿಐಗೆ ತಿಳಿಸಿದ್ದ.


ಇನ್ನು ನೂತನ ಭದ್ರತಾ ಸಲಹೆಗಾರ ಅಜಿತ್ ದೊವಾಲ್ ಕಳೆದ ಕೆಲವಾರು ವರ್ಷಗಳಿಂದಲೂ ಮೋದಿಯ ನಿಕಟವರ್ತಿಯಾಗಿ ಕಾರ್ಯಾಚರಿಸುತ್ತಿರುವ ವ್ಯಕ್ತಿ. ಈತನ ಪ್ರಕಾರ ಇಶ್ರತ್ ಜಹಾನ್ ಅಮಾಯಕಳಲ್ಲ; ಆಕೆ ನಿಜಕ್ಕೂ ಓರ್ವ ಭಯೋತ್ಪಾದಕಿ. ಈ ಪ್ರಕರಣದಲ್ಲಿ ರಾಜೇಂದರ್ ಕುಮಾರ್‌ನನ್ನು ಸಿಲುಕಿಸಿಹಾಕಲಾಗಿದೆಯೆಂದು ಸಿಬಿಐ ತನಿಖೆಯಲ್ಲಿ ಹುಳುಕು ಹುಡುಕಿದವನೂ ಈತನೇ.



ಸಿಂಘಾಲ್‌ನ ಅಮಾನತ್ತನ್ನು ಹಿಂತೆಗೆದುಕೊಳ್ಳುವುದಷ್ಟೆ ಅಲ್ಲ, ಅದರೊಂದಿಗೆ ಮುಂಬಡ್ತಿಯ ಬೋನಸ್‌ಅನ್ನೂ ನೀಡಲಾಗಿದೆ ಮತ್ತು ಅಜಿತ್ ದೊವಾಲ್ ರಾಷ್ಟ್ರೀಯ ಭದ್ರತಾ ಸಲಹೆಗಾರನಾಗಿದ್ದಾನೆ ಎಂದರೆ ಇದರ ಗೂಢಾರ್ಥವೇನಿರಬಹುದೆಂದು ಊಹಿಸಲು ಜಾಸ್ತಿ ತಲೆ ಖರ್ಚು ಮಾಡಬೇಕಾಗಿಲ್ಲ. ಈ ಬೆಳವಣಿಗೆಗಳನ್ನೆಲ್ಲ ನೋಡುವಾಗ ಬಿಜೆಪಿ ಆಡಳಿತದಲ್ಲಿ ವಿಶೇಷವಾಗಿ ಅಲ್ಪಸಂಖ್ಯಾತರಿಗೆ ನ್ಯಾಯ ಮರೀಚಿಕೆಯಾಗಲಿದೆಯೆಂಬ ಶಂಕೆಗಳು ಮೂಡಿದರೆ ಅದು ಸಹಜವಲ್ಲವೇ?

(http://www.truthofgujarat.com ; ಔಟ್‌ಲುಕ್ 9.6.2014)

ರಿಯಲ್ ರಾಜಕಾರಣಿ ಅಂದರೆ ಅದು ಸದಾನಂದ ಗೌಡರು



ಕಳೆದ ವಾರದ 'ಲಂಕೇಶ್'ನಲ್ಲಿ ರಾ.ಸೋಮನಾಥ್ ಸದಾನಂದ ಗೌಡರ ಬಗ್ಗೆ ಸರಿಯಾಗೇ ವಿಶ್ಲೇಷಿಸಿದ್ದಾರೆ. ಕಲ್ಲಡ್ಕ ಪ್ರಭಾಕರ ಭಟ್ಟರ ಮಾನಸಪುತ್ರ ಸದಾನಂದ ಗೌಡರು ಮೋದಿ ಸರಕಾರದಲ್ಲಿ ರೈಲ್ವೆ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಹೇಳುತ್ತಿರುವುದೇನೆಂದರೆ 'ನಾನು ಹನ್ನೊಂದು ತಿಂಗಳ ಕಾಲ ಯಾವುದೇ ಹಗರಣಗಳಿಲ್ಲದೇ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ್ದಕ್ಕೆ ಸಿಕ್ಕ ಪ್ರತಿಫಲ ಇದು' ಎಂದು.

ಅವರು ಈ ರೀತಿಯಾಗಿ ತನ್ನನ್ನು ಬಿಂಬಿಸಿಕೊಳ್ಳುತ್ತಿರುವುದು ಇದೇ ಮೊದಲೇನಲ್ಲ, ಚುನಾವಣೆ ಸಮಯದಲ್ಲೇ ಹಾಗು ಟಿಕೆಟ್ ಸಿಗುವ ಕಾಲದಲ್ಲಿ ಇದೇ ರೀತಿ ತಾನೇ ಪರಿಶುದ್ಧ ಎನ್ನುವ ಮಾತನ್ನು ಆಗಾಗ ಮಾಧ್ಯಮದೆದುರು ಹೇಳಿಕೊಳ್ಳುವ ಚಾಳಿ ಹೊಂದಿದ್ದರು. ಎಲ್ಲದಕ್ಕೂ ಪ್ರತಿಕ್ರಿಯಿಸುವ ಸುದ್ದಿಶೂರ ಗೌಡರು ಹಿರೇಮಠ್ ಸಾಹೇಬರು ತನ್ನ ಬಗ್ಗೆ ಗಂಭೀರ ಭ್ರಷ್ಟಾಚಾರದ ಆರೋಪ ಮಾಡಿದಾಗ ಮಾತ್ರ ತುಟಿಬಿಚ್ಚಲೇ ಇಲ್ಲ.

ಯಡ್ಡಿ, ಅನಂತಕುಮಾರ್ ತರಹದವರ ಎದುರು ಈ ಅರೆಭಾಷೆ ಗೌಡ 'ಶುದ್ಧ' ಎಂಬಂತೆ ಭಾಸವಾಗುವುದು ಹೌದಾದರೂ ಈತನೇನು ಪರಿಶುದ್ಧನಲ್ಲ, ಇನ್ನೂ ತಮಾಷೆಯೆಂದರೆ ಹೋದಲ್ಲೆಲ್ಲ ತನ್ನ ಪರಿಶುದ್ಧತೆಯನ್ನೇ ಬಿಂಬಿಸಿಕೊಂಡು ಆ ಮೂಲಕ ತನ್ನದೇ ಪಕ್ಷದ ಯಡ್ಡಿ, ರೆಡ್ಡಿ ಅನಂತರಂಥವರ ಪರಮ ಭ್ರಷ್ಟತೆಯನ್ನು ಪರೋಕ್ಷವಾಗಿ ಜನರೆದುರು ಎತ್ತಿ ತೋರಿಸುತ್ತಿದ್ದ ಜಾಣನೀತ.

ಸೋಮನಾಥ್ ಅಂದಂತೆ ಮುಖ್ಯಮಂತ್ರಿಯಾದಾಗ ಮುಂದಿನ ಕಾರ್ಯಕ್ಕೆ ಪೂರ್ವಭಾವಿ ತಯಾರಿಯಾಗಿ ತಾನು ಕ್ಲೀನ್ ಎಂದು ಬಿಂಬಿಸಿಕೊಳ್ಳುವುದು ಹಾಗು ರಾಜ್ಯ ಒಕ್ಕಲಿಗರ ನಾಯಕನೆನ್ನಿಸಿಕೊಳ್ಳಲು ಹರಸಾಹಸ ಪಟ್ಟ ಗೌಡರು ಸ್ವತಃ ಮುಖ್ಯಮಂತ್ರಿಯಾದದ್ದು ಇಂಥದ್ದೇ ಒಂದು ತಂತ್ರದಿಂದಲೇ ತಾನೆ? ಆರಂಭದಿಂದಲೂ ಭಿನ್ನಮತದ ರೋಗದಿಂದ ನರಳುತ್ತಿದ್ದ ಬಿಜೆಪಿಯಲ್ಲಿನ ಯಾವ ಬಣದಲ್ಲೂ ಬೇಕಂತಲೇ ಗುರುತಿಸಿಕೊಳ್ಳದ ಗೌಡರು ಅತ್ತ ಯಡ್ಡಿಗೂ ಇತ್ತ ಹೈಕಮಾಂಡಿಗೂ ಒಪ್ಪುವಂತಹ ಆಸಾಮಿಯಾಗಿ ತೋರುವಂತೆ ಕಾಣಿಸಿಕೊಂಡು ರಾಜ್ಯದ ಪ್ರಭಾವಿ ನಾಯಕರುಗಳನ್ನೆಲ್ಲ ಹಿಂದಕ್ಕೆ ಹಾಕಿ ಕನಸಲ್ಲೂ ಎಣಿಸದ ಮುಖ್ಯಮಂತ್ರಿ ಕುರ್ಚಿಯನ್ನು ಸುಲಭದಲ್ಲಿ (ಇಬ್ಬರ ಜಗಳ ಮೂರನೆಯವನಿಗೆ ಆಯ ಎಂಬ ನೀತಿಯಂತೆ) ಏರಿದ್ದರು.



ರಂಜನೆ ಬೋಧನೆ ಪ್ರಚೋದನೆ
ಗೌರಿ ಲಂಕೇಶ್
ವಿಶೇಷ ಮಹಿಳೆ ಮಾಯಾ ಏಂಜೆಲೊ
ಅಹಿಂದ ವಿರುದ್ಧ ಒಲಿಂಬ್ರಾ!
ಮೈಸೂರು NTMS ಶಾಲೆ ಉಳಿಸಲು ಹೋರಾಟ
ಮಂಡ್ಯ ಕಾಂಗ್ರೆಸ್ಸಿಗೆ ಕಾಂಗ್ರೆಸ್ಸೇ ಶತ್ರು!
ಉತ್ತರ ಕನ್ನಡ ಮತಾಂಧ ಅನಂತ್ಕಾಣೆ ಹುಚ್ಚಾಟ
ದಕ್ಷಿಣ ಕನ್ನಡ ಭೂಮಿ ಅವ್ಯವಹಾರ ಧರ್ಮಕ್ಕೆ ಅಪಚಾರ
ಕೆನೆತ್ ಆಂಡರ್ಸನ್ ಹೊಸ ಕತೆ
ವಿಶ್ವನಾಥ್ ಸಂದರ್ಶನ ಕಾಂಗ್ರೆಸ್ ಬದಲಾಗಬೇಕು

ಇಂತಹ ದೂರಾಲೋಚನೆಯ ಹೆಜ್ಜೆಯನ್ನಿರಿಸಿಯೇ ಇದೀಗ ರೈಲ್ವೆ ಮಂತ್ರಿಯಾಗಿರುವ ಸದಾನಂದ ಗೌಡ ಹಿಂದೆ ಕೆಲ ಬೇಡಿಕೆಗಳನ್ನಿಟ್ಟುಕೊಂಡು ಕಾಂಗ್ರೆಸ್ ಪಕ್ಷದ ವಿರುದ್ಧ ರೈಲು ಹಳಿಯಲ್ಲಿ ಚಳವಳಿ ಮಾಡಿದಾತ. ಈಗ ಅಂತಹ ಬೇಡಿಕೆಗಳೇ ಸ್ವಯಂ ಆತನದ್ದೇ ಅಂಗಳದಲ್ಲಿ ಬಂದು ನಿಂತಿದೆ. ಯಾವುದೇ ತೊಂದರೆಯಿಲ್ಲದ ಸಂಪೂರ್ಣ ಮೆಂಜಾರಿಟಿಯು ಈತನ ಸರಕಾರೀ ಅಧಿಕಾರ ಉಪಯೋಗವಾಗುತ್ತದೋ ಇಲ್ಲಾ ಹೆಸರಿಗೆ ತಕ್ಕ "ರೈಲು" ಮಂತ್ರಿ ಎನಿಸಿಕೊಳ್ಳುವರೋ ಎಂಬುದನ್ನು ಕಾದು ನೋಡಬೇಕಷ್ಟೆ.

-ಅವಿನಾಶ್ ಎಮ್ ಎಸ್. ನೆಲ್ಲಿಕಾರ್

ಸುಮ್ನೆ ತಮಾಷೆಗೆ

ಕೋಡಿ ಮಠದ ಸ್ವಾಮಿಯ ಭವಿಷ್ಯ ತಲೆಕೆಳಗಾಗಿ ಸ್ವಾಮಿಗೆ ಇನ್ನಿಲ್ಲದ ಅವಮಾನ-



ಭವಿಷ್ಯವೇ "ಭೂತ"ವಾಗಿ ಕಾಡೋದೆಂದರೆ ಇದೇ ತಾನೆ?

ಯಡ್ಡಿ ಶಿಷ್ಯನೀಗ 'ರೈಲು' ಮಂತ್ರಿ-

ಕೊನೆಪಕ್ಷ ಯಡ್ಡಿಯನ್ನು 'ಜೈಲು' ಮಂತ್ರಿಯನ್ನಾಗಿಯಾದರೂ ಮಾಡಿ ಎಂದು ಮೋದಿಗೆ ಯಡ್ಡಿ ಶಿಷ್ಯನ ದುಂಬಾಲು


ಕಳ್ಳ ಜೋತಿಷಿ ದೇವಿಶ್ರೀ ಈಗ ಚಿತ್ರರಂಗದತ್ತ-

ಮಾಲಾಶ್ರೀ, ಉಮಾಶ್ರೀ, ಭವ್ಯಶ್ರೀ, ವಿದ್ಯಾಶ್ರೀಯಂತಹ ನಟಿಯರ ಪ್ರೇರಣೆಯಂತೆ ಈತನಿಗೆ. ಆದರೆ ದೇವಿಶ್ರೀ ಆಗಮನದ ಬಳಿಕ ಚಿತ್ರರಂಗದ "ಇತಿಶ್ರೀ" ಯಾದೀತೆಂಬ ಭಯ ಸಿನಿಮಾರಂಗದ್ದು.

ಎಡಿಜಿಪಿ ಫೋಟೊಶೂಟ್ ಪ್ರಕರಣ-

ಗನ್ ಬಿಟ್ಟು ಮೊಬೈಲ್‌ನಲ್ಲಿ ಶೂಟ್ ಮಾಡೋದೆ ಛೇ.. ಛೇ..! ಆದ್ರೂ ಇದ್ದ ಇಬ್ರಲ್ಲಿ ಕದ್ದೋರ್ ಯಾರು

-ಆರ್ ಎಸ್ ಪಿ; ಈ ಮೇಲ್ ಮೂಲ



ಟೇಸ್ಟಿ ಕಾಮೆಂಟ್ ಬಾಕ್ಸ್

ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಗಾಂಭೀರ್ಯತೆಯನ್ನು 'ಹೊಗಳಿಕೆ ತೆಗಳಿಕೆ'ಯಲ್ಲಿ ಕಾಣಬಹುದು. ಶಶಿ ಪುತ್ತೂರು, ರವಿ ಪುತ್ತೂರು, ಶ್ರೀನಿವಾಸ ಕಾರ್ಕಳ, ಪ್ರವೀಣ್ ಎಸ್ ಶೆಟ್ಟಿ... ಇವರುಗಳ ಲೇಖನಗಳೂ ಚಿಂತನೆಗೆ ಹಚ್ಚುತ್ತವೆ. ಪ್ರವೀಣ್ ಅವ ಎಲ್ಲಾ ಲೇಖನಗಳನ್ನು ನಾನು ನನ್ನ ಸ್ನೇಹಿತರೊಂದಿ ಹಂಚಿಕೊಳ್ಳುತ್ತೇನೆ. ಅವರ ಬರಹದಲ್ಲಿ ಗಂಭೀರವಾ ವಿಚಾರಗಳಲ್ಲೂ ಕಚಗುಳಿ ಇಡುವ ಸಾಲುಗಳಿರುತ್ತವೆ. ಕಳೆ ವಾರದ "ನರಭಕ್ಷಕ ಮೊಸಳೆಗಳಿಂದ ಮೋದಿ ಪಾರಾದನಂತೆ ಲೇಖನದಲ್ಲಿ "ಮೋದಿಯನ್ನು ಹೆತ್ತವರ ಬಗ್ಗೆ ಆ ಸುಬ್ರಸ್ವಾಮಿ ಅನುಮಾನ ಪಡುತ್ತಿದ್ದಾನೆಯೇ?" ಮತ್ತು "ಮೋದಿಯನ ಕಚ್ಚಿದ ಮೊಸಳೆ ತನ್ನ ಪಾಪ ತೊಳೆಯಲು ಅಮಿತ್ ಷ ಎಂಬ ಹೆಸರಲ್ಲಿ ಹುಟ್ಟಿಬಂದು ಬಿಜೆಪಿ ಸೇರಿದ್ದು?" ಸಾಲುಗಳನ್ನು ಓದಿ ಹೊಟ್ಟೆ ಹುಣ್ಣಾಗುವಷ್ಟು ನಕ್ಕಿದ್ದೇನೆ.

ಪತ್ರಿಕೆಯಲ್ಲಿ ಬಿ.ಚಂದ್ರೇಗೌಡರ 'ಕಟ್ಟೆ ಪುರಾಣ' ಶೈಲಿಯಲ್ಲಿ ಹೊಸದೊಂದು ಅಂಕಣವನ್ನು ಪ್ರವೀಣ್ ಅವ ಕೈಯಲ್ಲಿ ಬರೆಯಿಸಬಹುದು ಅನಿಸುತ್ತದೆ. ಹಾಗೆಯೆ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಿಗೆ ಒಂದು ಅಂಕ ಶುರುವಾದರೆ ಪತ್ರಿಕೆಯ ತೂಕ ಇನ್ನಷ್ಟು ಹೆಚ್ಚಬಹುದು

-ಸರೋವರ್ ಬೆಂಕೀ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು **lankesh70@rediffmail.com** ಗೆ ಮ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗ ಚಿಕ್ಕದಾಗಿ ಮತ್ತು ಚೊಕ್ಕದಾಗಿ **SMS** ಕಳುಹಿಸಬಹು

ಜಾನಿ ಡೆಪ್: ಜಗತ್ತು ಕಂಡ ಅನನ್ಯ ಪ್ರತಿಭೆ


'ಪೈರೇಟ್ಸ್ ಆಫ್ ದಿ ಕೆರೆಬಿಯನ್', 'ಎಡ್ವರ್ಡ್ ಸಿಸರ್‌ಹ್ಯಾಂಡ್ಸ್', 'ಚಾರ್ಲಿ ಅಂಡ್ ದಿ ಚಾಕೊಲೆಟ್ ಫ್ಯಾಕ್ಟರಿ', 'ವಾಟ್ಸ್ ದಿ ಈಟಿಂಗ್ ಗಿಲ್ಬರ್ಟ್ ಗ್ರೇಪ್', 'ಫೈಂಡಿಂಗ್ ನೆವರ್ ಲ್ಯಾಂಡ್', 'ಸ್ಲೀಪಿ ಹಾಲೋ', 'ಪಬ್ಲಿಕ್ ಎನಿಮೀಸ್', 'ಡೆಡ್ ಮ್ಯಾನ್', 'ದಿ ರಮ್ ಡೈರಿ', 'ಕ್ರೈ-ಬೇಬಿ', 'ಬೆನ್ನಿ ಅಂಡ್ ಜೂನ್' ಮುಂತಾದ ಚಿತ್ರಗಳಲ್ಲಿ ನಟಿಸಿರುವ ಜಾನಿ ಡೆಪ್ ಜೂನ್ 9ರಂದು ತಮ್ಮ ಐವತ್ತೊಂದನೇ ವಯಸ್ಸಿಗೆ ಕಾಲಿಡುತ್ತಿದ್ದಾರೆ. ಆ ನೆಪದಲ್ಲಿ ಹೀಗೊಂದು ಬರಹ...


ಭಾರತೀಯನಂತೆ ಕಾಣುವ ನಟ ಜಾನಿ ಡೆಪ್. ಪೂರ್ತಿ ಹೆಸರು ಕ್ರಿಸ್ಟೋಫರ್ ಡೆಪ್. ಕೆಂಟುಕಿಯ ಓವೆನ್ಸ್ ಬೋರೋದಲ್ಲಿ ಹುಟ್ಟಿದ ಈತ ತನ್ನ ಕುಟುಂಬದೊಡನೆ ಹತ್ತು ಹಲವಾರು ಊರುಗಳಲ್ಲಿ ಬಾಲ್ಯ ಕಳೆದು ಕಡೆಗೆ ಎಪ್ಪತ್ತರ ದಶಕದಲ್ಲಿ ಫ್ಲೋರಿಡಾದ ಮಿರಾಮರ್‌ನಲ್ಲಿ ನೆಲೆ ಕಂಡವನು. ಈತ ಹದಿನೈದನೇ ವಯಸ್ಸಿಗೆ ಬರುವಷ್ಟರಲ್ಲಿ ಅಪ್ಪ ಅಮ್ಮ ವಿಚ್ಛೇದನ ಪಡೆದು ಬೇರೆಬೇರೆಯಾದರು. ಬಳಿಕ ಇವನ ತಾಯಿ ರಾಬರ್ಟ್ ಪಾಮರ್ ಎಂಬಾತನನ್ನು ಎರಡನೇ ಪತಿಯನ್ನಾಗಿ ಸ್ವೀಕರಿಸಿದರು. ಮೂಲತಃ ಸಂಗೀತಾಸಕ್ತನಾದ ಜಾನಿಗೆ ಗಿಟಾರ್ ನುಡಿಸುವುದೆಂದರೆ ಇಷ್ಟದ ಹವ್ಯಾಸ. ಇಷ್ಟಕ್ಕೂ ಆ ಹವ್ಯಾಸಕ್ಕೆ ಮೂಲಪ್ರೇರಣೆ ತನ್ನ ಹನ್ನೆರಡನೇ ವಯಸ್ಸಿನಲ್ಲಿ ತಾಯಿಯಿಂದ ಉಡುಗೊರೆಯಾಗಿ ಪಡೆದಿದ್ದ ಗಿಟಾರ್. ಕೈಗೆ ಗಿಟಾರ್ ಬಂದದ್ದೇ ತಡ ಎಲ್ಲೆಂದರಲ್ಲಿ ನುಡಿಸತೊಡಗಿದ. ಎರಡು ವಾರಗಳ ಕಾಲ ಶಾಲೆಗೆ ಹೋಗದೆ ಬ್ಯಾಂಡ್‌ಗಾಗಿ ಗಿಟಾರ್ ನುಡಿಸಿದ. ನಂತರ ಶಾಲೆಗೇ ಹೋದಾಗ ಜಾನಿಗೆ ಗಿಟಾರ್, ಸಂಗೀತದ ಮೇಲಿದ್ದ ಪ್ರೀತಿಯನ್ನು ಗಮನಿಸಿದ ಪ್ರಿನ್ಸಿಪಾಲ್ 'ನೀನು ಗಿಟಾರ್ ನುಡಿಸು... ನಿನ್ನ ಕನಸು ನನಸು ಮಾಡಿಕೋ' ಎಂದು ಹೇಳಿದ್ದರು. ಕೂಡಲೇ ಜಾನಿ ಚಿಕ್ಕಚಿಕ್ಕ ಹುಡುಗರ ಗುಂಪು ಕಟ್ಟಿಕೊಂಡು ಸಣ್ಣಪುಟ್ಟ ಕಾರ್ಯಕ್ರಮ ನೀಡಿದ. ಸ್ಥಳೀಯ ಜನರಿಂದ ಒಳ್ಳೆಯ ಪ್ರೋತ್ಸಾಹ ಸಿಕ್ಕಾಗ ಆ ತಂಡಕ್ಕೆ 'ಸಿಕ್ಸ್ ಗನ್ ಮೆಥಡ್' ಎಂದು ನಾಮಕರಣ ಮಾಡಿಕೊಂಡಿತು. ಆ ತಂಡ ಒಟ್ಟಿಗೆ ಲಾಸ್ ಏಂಜಲೀಸ್‌ನಲ್ಲಿ ದೊಡ್ಡಮಟ್ಟದಲ್ಲಿ ಕಾರ್ಯಕ್ರಮ ಕೊಡಬೇಕೆನ್ನುವಷ್ಟರಲ್ಲಿ ಅದೇಕೋ ತಂಡ ಒಡೆಯಿತಾದ್ದರಿಂದ ಕಾರ್ಯಕ್ರಮ ಕೊಡಲಾಗಲಿಲ್ಲ. ಆನಂತರ ಜಾನಿ ಬೇರೆಬೇರೆ ಕಡೆ ಗಿಟಾರ್ ನುಡಿಸಿ ಜನಮನ್ನಣೆ ಪಡೆದ. ತನಗೇ ಗೊತ್ತಿಲ್ಲದೆ ತಾನೊಬ್ಬ ರಾಕ್ ಮ್ಯೂಸಿಸಿಯನ್ ಆಗಿಬಿಟ್ಟ.

1984ರಲ್ಲಿ ಜಾನಿ ಮೊದಲಬಾರಿಗೆ ಸಿನಿಮಾವೊಂದರಲ್ಲಿ ನಟಿಸಿದ. ಆ ಸಿನಿಮಾ ಹೆಸರು 'ಎ ನೈಟ್‌ಮೇರ್ ಆನ್ ಎಲ್ಮ್ ಸ್ಟ್ರೀಟ್'. ಅಲ್ಲಿಂದಾಚೆಗೆ ಐವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ ಜಾನಿ ಡೆಪ್ ಪ್ರತಿಭಾವಂತ ನಟನೆಂದು ಸಾಧಿಸಿ ತೋರಿಸಿದ. ರಪ್ಪನೆ ಹಿಡಿದುಹಾಕುವ ಕಣ್ಣು, ಎತ್ತರದ ನಿಲುವು, ಆಕರ್ಷಕ ಮೈಕಟ್ಟು ಮತ್ತು ಅದ್ಭುತ ಪ್ರತಿಭೆಯ ಜಾನಿ ರಸೆಲ್ ಕ್ರೋವ್‌ಗಿಂತ, ಟಾಮ್ ಹ್ಯಾಂಕ್ಸ್‌ಗಿಂತ, ಡಸ್ಟಿನ್ ಹಾಫ್‌ಮನ್‌ಗಿಂತ, ಜಾಕ್ ನಿಕೊಲ್‌ಸನ್‌ಗಿಂತ, ಸಿಡ್ನಿ ಪ್ವಾಯ್ಟಿಯೆಗಿಂತ ಬೇರೆ ಥರದ ನಟನೆಂದು ತೋರಿಸಿಕೊಂಡ. ಈತನ 'ಪೈರೇಟ್ಸ್ ಆಫ್ ದಿ ಕೆರೆಬಿಯನ್', 'ಎಡ್ವರ್ಡ್ ಸಿಸರ್‌ಹ್ಯಾಂಡ್ಸ್', 'ಚಾರ್ಲಿ ಅಂಡ್ ದಿ ಚಾಕೊಲೆಟ್ ಫ್ಯಾಕ್ಟರಿ', 'ವಾಟ್ಸ್ ದಿ ಈಟಿಂಗ್ ಗಿಲ್ಬರ್ಟ್ ಗ್ರೇಪ್', 'ಫೈಂಡಿಂಗ್ ನೆವರ್ ಲ್ಯಾಂಡ್', 'ಸ್ಲೀಪಿ ಹಾಲೋ', 'ಪಬ್ಲಿಕ್ ಎನಿಮೀಸ್', 'ಡೆಡ್ ಮ್ಯಾನ್', 'ದಿ ರಮ್ ಡೈರಿ', 'ಕ್ರೈ-ಬೇಬಿ', 'ಬೆನ್ನಿ ಅಂಡ್ ಜೂನ್' ಚಿತ್ರಗಳು ಈತನೊಬ್ಬ ವರ್ಸಟೈಲ್ ಆಕ್ಟರ್ ಅನ್ನುವುದನ್ನು ತೋರಿಸುತ್ತವೆ. ಇವತ್ತು ಜಾನಿ ಡೆಪ್ ಜಗತ್ತಿನ ಅತ್ಯುತ್ತಮ ನಟರಲ್ಲೊಬ್ಬ; ಯುವಜನಾಂಗವನ್ನು ಆಕರ್ಷಿಸುವ ನಟರ ಪಟ್ಟಿ ಮೊದಲಸಾಲಿನವನು. ಗಿಟಾರಿಸ್ಟ್ ಆಗಬೇಕೆಂದು ಲಾಸ್ ಏಂಜಲೀಸ್‌ಗೆ ಬಂದ ಜಾನಿ ಡೆಪ್ ಹೀಗೊಬ್ಬ ಸ್ಟಾರ್ ನಟ ಆಗಿದ್ದು ನಿಜಕ್ಕೂ ಸೋಜಿಗದ ಸಂಗತಿ.

ಹಿರಿತೆರೆಯಂತೆ ಕಿರುತೆರೆಯಲ್ಲೂ ಅಪಾರ ಜನಪ್ರೀತಿ ಗಳಿಸಿದ್ದ ಜಾನ್ ಡೆಪ್ ಮೊದಲಿಗೆ ನಟಿಸಿದ್ದು ಫಾಕ್ಸ್ ನೆಟ್‌ವರ್ಕ್‌ನ '21 ಜಂಪ್ ಸ್ಟ್ರೀಟ್' ಧಾರಾವಾಹಿಯಲ್ಲಿ, ಪ್ಯಾಟ್ರಿಕ್ ಹಾಸ್‌ಬರ್ಗ್ ಹಾಗೂ ಸ್ಟೀಫನ್ ಜೆ ಕೆನೆಲ್ ಕೂಡಿ ಮಾಡಿದ್ದ ಈ ಧಾರಾವಾಹಿ ನೂರಾಮೂರು ಎಪಿಸೋಡ್ ಪ್ರಸಾರವಾಗುವುದರ ಜೊತೆಗೆ ಅವತ್ತಿನ ಕಾಲಮಾನಕ್ಕೆ ಯುವಜನತೆಯನ್ನು ಸಂಪೂರ್ಣ ಆಕರ್ಷಿಸುವಲ್ಲಿ ಯಶಸ್ವಿಯಾಗಿತ್ತು. ಜಾನಿ ಡೆಪ್ ಈ ಧಾರಾವಾಹಿಯಲ್ಲಿ ನಟಿಸಲು ಮತ್ತೂ ಒಂದು ಕಾರಣವೆಂದರೆ ಫ್ರೆಡರಿಕ್ ಫಾರೆಸ್ಟ್. ಜಾನಿ ತನಗಿಂತಲೂ ಇಪ್ಪತ್ತೇಳು ವರ್ಷ ಹಿರಿಯನಾದ ಈ ನಟನಿಂದ ಸ್ಫೂರ್ತಿ ಪಡೆದಿದ್ದ. ಜೊತೆಗೆ ಈ ಧಾರಾವಾಹಿಗೆ ಮುಂದೊಮ್ಮೆ ಜಾನಿಯ ಖಾಸಾ ದೋಸ್ತ್ ಸಾಲ್ ಜೆನ್ಕೋ ಕೂಡ ಸೇರ್ಪಡೆಯಾಗುತ್ತಾನೆ. ಆಗಲೇ ಹೇಳಿದಂತೆ ಈ ಧಾರಾವಾಹಿ ಅವತ್ತಿನ ಯೂತ್ ಅನ್ನು ಅಟ್ರಾಕ್ಟ್ ಮಾಡುತ್ತ, ಜಾನಿ ಡೆಪ್ ಯುವಕರ ಐಕಾನ್ ಆಗುತ್ತಾನೆ. ಯಾವಾಗ ಯುವಜನ ಈತನ ಅಭಿಮಾನಿಗಳಾದರೋ ಅಂಥಂಥವೇ ಪಾತ್ರಗಳು ಜಾನಿಯನ್ನು ಹುಡುಕಿಕೊಂಡು ಬರಲಾರಂಭಿಸಿದವು. ಜಾನಿ 'ಇನ್ನು ಸಿನಿಮಾಗಳಲ್ಲಿ ಮಾತ್ರ ನಟಿಸಬೇಕು' ಎಂಬ ತೀರ್ಮಾನಕ್ಕೆ ಬರಲು ಇದೇ ವಿದ್ಯಮಾನ ಕಾರಣವಾಗಿದ್ದು. ಅದು ಆತ ಕೈಗೊಂಡ ಉತ್ತಮ ನಿರ್ಣಯವೂ ಹೌದು. ಆಮೇಲಷ್ಟೇ ಆತ ಅತ್ಯುತ್ತಮ ಚಿತ್ರಗಳಲ್ಲಿ ನಟಿಸಲು ಸಾಧ್ಯವಾಯಿತು. ಚಾಲೆಂಜಿಂಗ್ ಪಾತ್ರಗಳನ್ನು ನಿರ್ವಹಿಸಿ ತಾನೊಬ್ಬ ಸಮರ್ಥ ನಟನೆಂದು ಜಗತ್ತಿನೆದುರು ಸಾಬೀತುಮಾಡಲಾಗಿದ್ದು.

ಯಾವಾಗ 1994ರಲ್ಲಿ ಟಿಮ್ ಬರ್ಟನ್ ನಿರ್ದೇಶನದ 'ಎಡ್ ವುಡ್' ಎಂಬ ಚಿತ್ರದಲ್ಲಿ ಜಾನಿ ಡೆಪ್ ನಟಿಸಿದನೋ ಆತನಿಗೊಂದು ಹೊಸ ಇಮೇಜು ಸೃಷ್ಟಿಯಾಯಿತು. ಎಡ್ವರ್ಡ್ ಡಿ. ವುಡ್ ಎಂಬ ಚಿತ್ರನಿರ್ದೇಶಕನ ಜೀವನಚರಿತ್ರೆಯನ್ನೇ 'ಎಡ್ ವುಡ್' ಎಂಬ ಹೆಸರಿನಲ್ಲಿ ಸಿನಿಮಾ ಮಾಡಲಾಗಿತ್ತು. ಆ ಎಡ್ವರ್ಡ್ ಡಿ. ವುಡ್ ಎಂಬ ನಿರ್ದೇಶಕನ





ಪಾತ್ರವನ್ನೇ ಜಾನಿ ಡೆಪ್ ನಿರ್ವಹಿಸಿದ್ದು. ಪಕ್ಕಾ ಕಾಮಿಡಿ ಚಿತ್ರವಾಗಿದ್ದ 'ಎಡ್ ವುಡ್'ಗೆ ಪ್ರೇಕ್ಷಕರಿಂದ ಒಳ್ಳೆಯ ಪ್ರತಿಕ್ರಿಯೆ ಸಿಗುವುದರ ಜೊತೆಗೆ ದಿ ನ್ಯೂಯಾರ್ಕ್ ಟೈಮ್ಸ್ ಸೇರಿದಂತೆ ಅನೇಕ ಪತ್ರಿಕೆಗಳಿಂದ ಭೇಷ್‌ಗಿರಿ ದೊರೆತಿತ್ತು. ಇಂಗ್ಲಿಷ್ ಮತ್ತು ಸ್ಪ್ಯಾನಿಷ್ ಭಾಷೆಗಳಲ್ಲಿ ತಯಾರಾದ ಈ ಚಿತ್ರದ ಅಭಿನಯಕ್ಕಾಗಿ ಜಾನಿ ಡೆಪ್, ಗೋಲ್ಡನ್ ಗ್ಲೋಬ್ ಅವಾರ್ಡ್‌ಗೆ ನಾಮಿನೇಟಾಗಿದ್ದ. ಈ ಗೆಲುವಿನ ನಂತರ ಡೆಪ್ 'ಡಾನ್ ಜುವಾನ್ ದಿ ಮಾರ್ಕೊ' ಎಂಬ ಚಿತ್ರದಲ್ಲಿ ನಟಿಸಿದ. ಮರ್ಲಾನ್ ಬ್ರಾಂಡೋನ ಚಿತ್ರದೆದುರು ಬಿಡುಗಡೆಯಾದ ಈ ಚಿತ್ರ ಬಾಕ್ಸ್ ಆಫೀಸಿನಲ್ಲಿ ಸೂಪರ್ ಹಿಟ್ ಆಗಿದ್ದು ಈಗ ಇತಿಹಾಸ. ಇದರ ನಂತರವೇ ಡೆಪ್ ಅಪ್ಪಟ ಕಪ್ಪು-ಬಿಳುಪಿನ ಚಿತ್ರ 'ಡೆಡ್ ಮ್ಯಾನ್'ನಲ್ಲಿ ಅಭಿನಯಿಸಿದ್ದು. ಬಾಕ್ಸಾಫೀಸಿನಲ್ಲಿ ಮಕಾಡೆ ಮಲಗಿದ ಈ ಸಿನಿಮಾಗೆ ಪ್ರೇಕ್ಷಕರಿಂದ ಹಾಗೂ ವಿಮರ್ಶಕರಿಂದ ಮಿಶ್ರಪ್ರತಿಕ್ರಿಯೆ ಬಂದಿತ್ತು.

ಹೀಗೆ ಸೋಲು-ಗೆಲುವು ಎರಡನ್ನೂ ಸವಿಯುತ್ತ ಬಂದ ಡೆಪ್‌ಗೆ ಮತ್ತೆ ಭರ್ಜರಿ ಬ್ರೇಕ್ ಕೊಟ್ಟ ಸಿನಿಮಾ 2003ರಲ್ಲಿ ತೆರೆಗೆ ಬಂದ 'ಪೈರೇಟ್ಸ್ ಆಫ್ ದಿ ಕೆರೆಬಿಯನ್-ದಿ ಕರ್ಸ್ ಆಫ್ ದಿ ಬ್ಲ್ಯಾಕ್ ಪರ್ಲ್' ಚಿತ್ರ. ಕ್ಯಾಪ್ಟನ್ ಜ್ಯಾಕ್ ಸ್ಪ್ಯಾರೋ ಎಂಬ ವಿಚಿತ್ರ ಮನೋಧರ್ಮದ ಪಾತ್ರದಲ್ಲಿ ಕಾಣಿಸಿಕೊಂಡ ಜಾನ್ ಡೆಪ್ ನಿಜಕ್ಕೂ ತನ್ನ ನಟನೆಯ ಮೂಲಕ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ್ದ. ಈ ಚಿತ್ರದ ಅಭಿನಯಕ್ಕಾಗಿ ಡೆಪ್ ಅಕಾಡೆಮಿ ಅವಾರ್ಡ್ ಫಾರ್ ಆಕ್ಟರ್‌ಗೆ ನಾಮಿನೇಟಾಗಿದ್ದ. ಡೆಪ್ ಅಲ್ಲಿಂದಾಚೆಗೆ ಅದೇ 'ಪೈರೇಟ್ಸ್ ಆಫ್ ದಿ ಕೆರೆಬಿಯನ್' ಸೀರೀಸ್‌ನಲ್ಲಿ 'ಡೆಡ್ ಮ್ಯಾನ್ಸ್ ಚೆಸ್ಟ್', 'ಅಟ್ ವರ್ಲ್ಡ್ಸ್ ಎಂಡ್', 'ಆನ್ ಸ್ಟ್ರೇಂಜರ್ ಟೈಡ್ಸ್'ಗಳಲ್ಲಿ ನಟಿಸಿದ. ಎಲ್ಲವೂ ಬಾಕ್ಸಾಫೀಸ್‌ನಲ್ಲಿ ಹಿಟ್ ಎನಿಸಿಕೊಂಡವು.

ಅಭಿನಯದ ಜೊತೆಗೆ ಚಿತ್ರನಿರ್ಮಾಣಕ್ಕೂ ಕೈ ಹಾಕಿದ್ದ ಡೆಪ್ 'ಇನ್ಫಿನಿಟಮ್ ನಿಹಿಲ್' ಎಂಬುದೊಂದು ಸಂಸ್ಥೆಯನ್ನೂ ಆರಂಭಿಸುತ್ತಾನೆ. ಆ ಸಂಸ್ಥೆಗೆ ತಾನೇ ಸಿ.ಇ.ಓ. ಆಗಿದ್ದುಕೊಂಡು ತನ್ನ ಸಹೋದರಿ ಕ್ರಿಸ್ಟಿ ಡೆಮ್ ಬ್ರಾವ್ಸೆಯನ್ನು ಅಧ್ಯಕ್ಷೆಯನ್ನಾಗಿಸುತ್ತಾನೆ. ತನ್ನ ಸಂಸ್ಥೆಯ ಮೂಲಕ ಪ್ರಥಮವಾಗಿ 2011ರಲ್ಲಿ ಬ್ರೂಸ್ ರಾಬಿನ್‌ಸನ್ ನಿರ್ದೇಶನದಡಿಯಲ್ಲಿ 'ದಿ ರಮ್ ಡೈರಿ' ಎಂಬ ಚಿತ್ರವನ್ನು ನಿರ್ಮಿಸಿ ತಾನೇ ಅಭಿನಯಿಸುತ್ತಾನೆ. ಕಾದಂಬರಿಕಾರ ಹಂಟರ್ ಎಸ್. ಥಾಮ್ಸನ್ ಅವರ ಇದೇ 'ದಿ ರಮ್ ಡೈರಿ' ಹೆಸರಿನ ಕಾದಂಬರಿಯನ್ನು ಆಧರಿಸಿ ಈ ಸಿನಿಮಾ ತಯಾರಾಗುತ್ತದೆ. ಚಿತ್ರವು ಹಾಕಿದ್ದ ಬಂಡವಾಳದಲ್ಲಿ ಅರ್ಧದಷ್ಟನ್ನು ಮಾತ್ರ ವಾಪಸ್ ತರುವಲ್ಲಿ ಯಶಸ್ವಿಯಾಗಿ ನಿರೀಕ್ಷಿತ ಫಲಿತಾಂಶ ತಂದುಕೊಡುವಲ್ಲಿ ವಿಫಲವಾಗುತ್ತದೆ. ಆದರೂ ಧೃತಿಗೆಡದ ಡೆಪ್ ಮತ್ತೊಂದೆರಡು ಸಿನಿಮಾಗಳನ್ನು ನಿರ್ಮಿಸಿ ಕಡೆಗೆ 20012ರಲ್ಲಿ ತನ್ನ ಹಳೆಯ ಜೋಡಿಯಾದ ಟಿಮ್ ಬರ್ಟನ್ ನಿರ್ದೇಶನದಲ್ಲಿ 'ಡಾರ್ಕ್ ಶ್ಯಾಡೋಸ್' ಎಂಬ ಹಾರರ್ ಚಿತ್ರವನ್ನು ನಿರ್ಮಿಸಿ, ನಟಿಸಿ ಆವರೇಜ್ ಸಕ್ಸಸ್ ಪಡೆಯುತ್ತಾನೆ. ಅಂದಹಾಗೆ, 'ಸ್ಟಫ್' ಹಾಗೂ 'ದಿ ಬ್ರೇವ್' ಆತ ನಿರ್ದೇಶಿಸಿರುವ ಸಿನಿಮಾಗಳು.

ಕೇವಲ ಆತನ ಸಿನಿಮಾಗಳ ಪರಿಚಯ ಮಾಡಿಕೊಡುವುದಷ್ಟೇ ಆಗಿದ್ದರೆ ಈ ಲೇಖನದ ಅಗತ್ಯವಿರಲಿಲ್ಲ. ಒಬ್ಬ ಮನುಷ್ಯನಾಗಿ ಜಾನಿ ಸುಖದ ಜೊತೆಗೆ ನೋವನ್ನೂ ಉಂಡವನು. ಈತ ಪರದೆಯ ಮೇಲೆ ಕಾಣಿಸಿಕೊಳ್ಳುವಾಗ ಆಯಾ ಚಿತ್ರದ ಕಥೆಗೆ ಅನುಸಾರವಾಗಿ ನಟಿಸಿ, ಪಾತ್ರಕ್ಕೆ ಜೀವ ತುಂಬಿರುತ್ತಾನಷ್ಟೇ. ಅಲ್ಲಿ ಸಂಪೂರ್ಣವಾಗಿ ಆತನ ವ್ಯಕ್ತಿತ್ವದ ಚಿತ್ರಣ ಪ್ರೇಕ್ಷಕನಿಗೆ ದಕ್ಕುವುದಿಲ್ಲ. ಆತನ ಸಿನಿಮಾದಾಚೆಯ ವೈಯಕ್ತಿಕ ಬದುಕಿನ ಒಳಗುಟ್ಟುಗಳು ಊಹೆಗೂ ಸಿಗುವುದಿಲ್ಲ. ಅಂತಹ ಎಟುಕದ ಸತ್ಯಗಳನ್ನು ಬಿಚ್ಚಿಡುವ ಪ್ರಯತ್ನವಿದು: ಜಾನಿ 1983ರಲ್ಲಿ ಲೋರಿ ಅನ್ನಿ ಆನಿಸನ್ ಎಂಬಾಕೆಯನ್ನು ಮದುವೆಯಾಗುತ್ತಾನೆ. ಆಕೆ ಜಾನಿ ಡೆಪ್‌ನ ಬ್ಯಾಂಡ್‌ನ ಗಾಯಕನೊಬ್ಬನ ಸೋದರಿಯಾಗಿದ್ದಳು. ಈ ದಾಂಪತ್ಯ ಕೇವಲ ಎರಡೇ ವರ್ಷಗಳಲ್ಲಿ ಮುರಿದು ಬಿದ್ದು ವಿಚ್ಛೇದನದಲ್ಲಿ ಕೊನೆಯಾಗುತ್ತದೆ. ಆಮೇಲೆ ಜಾನಿ ಬದುಕಿನಲ್ಲಿ ಡೆಪ್ ಜೆನಿಫರ್‌ಗ್ರೇ, ಶರ್ಲಿನ್ ಫೆನ್, ವಿನೋನ ರೈಡರ್ ಥರದ ನಟಿಯರು ಪ್ರವೇಶಿಸುತ್ತಾರೆ. ಡೆಪ್‌ಗೆ ವಿನೋನ ರೈಡರ್ ಮೇಲೆ ನಿಜಕ್ಕೂ ಇತರರಿಗಿಂತ ತುಸು ಹೆಚ್ಚೇ ಪ್ರೀತಿ. ಅದಕ್ಕೆ ಸಾಕ್ಷಿ, ಆತ ತನ್ನ ಬಲಗೈ ಮೇಲೆ WINONA FOREVER ಎಂದು ಹಚ್ಚೆ ಹಾಕಿಸಿಕೊಂಡಿದ್ದು. 1998ರ ಸುಮಾರಿಗೆ ಅದ್ಯಾವ ಕಾರಣಕ್ಕೋ ಗೊತ್ತಿಲ್ಲ ಈ ಯಾವ ಮಾಯಾಂಗನೆಯರೂ ಜಾನಿ ಡೆಪ್‌ನ ಬದುಕಿನಲ್ಲಿ ಉಳಿಯುವುದಿಲ್ಲ. ಸಿನಿಮಾವೊಂದರ ಪಾತ್ರಗಳಂತೆ ಹೇಗೆ ಸುಳಿದು ಹಾಗೆ ಮಾರೆಯಾಗಿರುತ್ತಾರೆ.

ಆಗ ಜಾನಿಯ ಕಣ್ಣು ಬ್ರಿಟಿಷ್ ಸೂಪರ್ ಮಾಡೆಲ್ ಕೇಟ್ ಮಾಸ್ ಎಂಬ ಕಂದು ಕಂಗಳ ಚೆಲುವೆಯ ಮೇಲೆ ಬೀಳುತ್ತದೆ. ಡೆಪ್ ಅವಳ ಜೊತೆ ನಾಲ್ಕು ವರ್ಷಗಳ ಕಾಲ ಸಂಬಂಧವಿರಿಸಿಕೊಳ್ಳುತ್ತಾನೆ. ಅವಳ ನಂತರವೇ ಫ್ರೆಂಚ್ ಹಾಡುಗಾರ್ತಿ ವೆನೆಸ್ಸ ಜೊತೆಗಿನ ನಂಟು. ತಾನು ಅಭಿನಯಿಸಿದ್ದ 'ದಿ ನೈಂತ್ ಗೇಟ್' ಚಿತ್ರದ ಪ್ರದರ್ಶನದ ವೇಳೆ ಪರಿಚಯವಾದವಳು ಈಕೆ. ಡೆಪ್-ವೆನೆಸ್ಸ ನಡುವಿನ ಸಂಬಂಧ ಯಾವಾಗ ಮೀಡಿಯಾದಲ್ಲಿ ದೊಡ್ಡ ಸುದ್ದಿಯಾಯಿತೋ ಈಕೆಯೊಂದಿಗೂ ಸಂಬಂಧ ಕಡಿದುಕೊಳ್ಳುವುದಾಗಿ ಜಾನಿ ಅನೌನ್ಸ್ ಮಾಡಿದ. ಅಷ್ಟರಲ್ಲಾಗಲೇ ವೆನೆಸ್ಸಳು ಲಿಲ್ಲಿ ರೋಸ್ ಮತ್ತು ಜಾಕ್ ಎಂಬ ಜಾನಿ ಡೆಪ್‌ನ ಎರಡು ಮಕ್ಕಳಿಗೆ ಜನ್ಮ ನೀಡಿದ್ದಳು. ಹಾಗಂತ ಜಾನಿ ಮಕ್ಕಳನ್ನು ಬೀದಿಗೆ ತಳ್ಳುವ ಜಾಯಮಾನದವನಲ್ಲ, ಹೆಣ್ಣೊಬ್ಬಳನ್ನು ತನ್ನ ಸುಖಕ್ಕಾಗಿ ಬಳಸಿಕೊಂಡು ಅರ್ಧದಲ್ಲೇ ಎಸ್ಕೇಪಾಗುವ ಕೆಟಗರಿಗೆ ಸೇರಿದವನೂ ಅಲ್ಲ. ತನ್ನ ಮಕ್ಕಳನ್ನು ಜಾನಿ ಎಷ್ಟು ಪ್ರೀತಿಸುತ್ತಿದ್ದ ಎಂಬುದಕ್ಕೆ ಇಲ್ಲೊಂದು ಘಟನೆ ನೋಡಿ: ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದ ಮಗಳು ಲಿಲ್ಲಿ-ರೋಸ್ ಗುಣಮುಖಳಾಗುತ್ತಿದ್ದಂತೆಯೇ ಆಸ್ಪತ್ರೆಗೆ ತೆರಳಿ ಸುಮಾರು ನಾಲ್ಕು ಗಂಟೆಗಳ ಕಾಲ ಆಸ್ಪತ್ರೆಯಲ್ಲಿದ್ದು, ತನ್ನ ಮಗಳ ಆರೋಗ್ಯ ಸುಧಾರಿಸಲು ಕಾರಣಕರ್ತರಾದವರಿಗೆಲ್ಲ ಥ್ಯಾಂಕ್ಸ್ ಹೇಳಿ, ಆಸ್ಪತ್ರೆಗೆ ಎರಡು ಮಿಲಿಯನ್‌ನಷ್ಟು ಹಣವನ್ನು ಡೊನೇಟ್ ಮಾಡಿಬಂದಿದ್ದಾನೆ.

ತನ್ನ ಮಕ್ಕಳ ಮೂಲಕ ಬದುಕನ್ನು ತುಂಬಿಕೊಳ್ಳುವ ಮಾತಾಡುತ್ತಾನೆ. ಆದರೂ ಆತನ ಬದುಕಿನಲ್ಲಿ ಸ್ತ್ರೀಯ ಪಾತ್ರ ಕುತೂಹಲಕಾರಿ ಅಂಶವಾಗಿಯೇ ಉಳಿದಿದೆ. ವೆನೆಸ್ಸಳ ನಂತರ ಜಾನಿಗೆ ಹತ್ತಿರವಾಗಿದ್ದು ಅಂಬೆರ್ ಹರ್ಡ್ ಎಂಬ ತರುಣಿ. ಆಕೆಗೀಗ ಕೇವಲ ಇಪ್ಪತ್ತೆಂಟು ವರ್ಷ. ಟೆಕ್ಸಾಸ್ ಮೂಲದ ಈಕೆ ಮೂವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ್ದು, ಜಾನಿಗೆ ಪರಿಚಯವಾಗಿದ್ದು 'ದಿ ರಮ್ ಡೈರಿ' ಸಿನಿಮಾದಲ್ಲಿ ಆತನೊಟ್ಟಿಗೆ ನಟಿಸಿದ ಸಂದರ್ಭದಲ್ಲಿ. ಜಾನಿ ಈ ಹುಡುಗಿಯ ಬೆರಳಿಗೆ ವಜ್ರದ ಉಂಗುರ ತೊಡಿಸಿದ್ದಾನೆ. ಅಂದಹಾಗೆ ಈಕೆಯೇ ಜಾನಿಯ ಈವರೆಗಿನ ಕಡೆಯ ಪ್ರೇಯಸಿ.

ಈ ನಡುವೆ ತನ್ನ ಗಿಟಾರ್ ಪ್ರೀತಿಯನ್ನು ಹಾಗೆ ಉಳಿಸಿಕೊಂಡಿರುವ ಜಾನಿ ನಡುನಡುವೆ ಒಂದಿಷ್ಟು ಆಲ್ಬಮ್‌ಗಳನ್ನು ಮಾಡಿದ್ದಾನೆ. ಈಗ ಆತನಿಗಿರುವ ಒಂದು ಆಸೆಯೆಂದರೆ ಮೂವತ್ತು ವರ್ಷಗಳ ಹಿಂದೆ ಒಡೆದುಹೋಗಿದ್ದ 'ಸಿಕ್ಸ್ ಗನ್ ಮೆಥಡ್' ಬ್ಯಾಂಡ್‌ನ ಸದಸ್ಯರನ್ನೆಲ್ಲ ಒಗ್ಗೂಡಿಸಿ ಒಂದು ಆಲ್ಬಮ್ ಮಾಡಬೇಕೆಂಬುದು. ನಟನಾಗಿ ತಾನು ದೊಡ್ಡಮಟ್ಟದ್ದನ್ನೇ ಸಾಧಿಸಿದ್ದರೂ ಆ ಆಲ್ಬಮ್ ಮಾಡುವ ಮೂಲಕ ಮನಸ್ಸಿಗೆ ನೆಮ್ಮದಿ ತಂದುಕೊಳ್ಳುವುದು ಆತನ ಕನಸು. ಈ ಕನಸಿಗೆ ಪ್ರೇಯಸಿ ಅಂಬೆರ್ ಹರ್ಡ್ ಬೆಂಬಲ ನೀಡುವುದರ ಜೊತೆಗೆ ಆ ಕನಸಿನ ಪ್ರಾಜೆಕ್ಟ್‌ನಲ್ಲಿ ಲೀಡ್ ಗಿಟಾರಿಸ್ಟಾಗಿ ಜಾನಿಯೇ ನುಡಿಸಬೇಕೆಂಬುದೂ ಆಕೆಯ ಇರಾದೆ. ಅಂದಹಾಗೆ, 'ಮೈನರ್ ಸ್ವಿಂಗ್', 'ದೇರ್ ರೆಡ್ ಹಾಟ್', 'ಕ್ಯಾರವಾನ್', 'ಸ್ಯಾಂಡ್ಸ್ ಥೀಮ್', 'ವೇರಿಯಸ್', 'ಟ್ರೇನ್ ಕೆಪ್ಟ್-ಎ-ರೋಲಿನ್' ಹಾಗೂ 'ಸ್ಟ್ರೀಟ್ ರನ್ನರ್ಸ್' ಜಾನಿ ಡೆಪ್ ಸಂಗೀತ ನೀಡಿರುವ ಹಾಡುಗಳು.

ಸಾಕಷ್ಟು ಡ್ರಿಂಕ್ಸ್ ಮಾಡುವ, ಬಹಳಷ್ಟು ಸಿಗರೇಟು ಸೇದುವ ಡೆಪ್‌ಗೆ ಭಯಂಕರ ಸೆನ್ಸ್ ಆಫ್ ಹ್ಯೂಮರ್ (ಈಗ ಹೆಚ್ಚಾಗಿ ಸೇದುತ್ತಿಲ್ಲ ಎಂಬ ಮಾತಿದೆ). ತನ್ನ ಕೀರ್ತಿ, ಯಶಸ್ಸು, ದುಡಿಮೆ ಯಾವುದನ್ನೂ ಗಂಭೀರವಾಗಿ ಪರಿಗಣಿಸದ ಆತ ಕಳೆದ ವರ್ಷ "ಇನ್ನು ಮುಂದೆ ಸಿನಿಮಾಗಳಲ್ಲಿ ನಟಿಸೋದಿಲ್ಲ" ಅಂತ ಹೇಳಿಕೆ ಕೊಟ್ಟಿದ್ದ. ಆತನ ಇ-ಮೇಲ್‌ಗಳು ಕಾವ್ಯಾತ್ಮಕವಾಗಿರುತ್ತವೆಂದು ಹೇಳುವವರೂ ಉಂಟು. ಡೆಪ್ ಎಷ್ಟು ಲವಲವಿಕೆಯ ವ್ಯಕ್ತಿ ಎಂದರೆ ಎದುರು ಕೂತವರಿಗೆ ಪ್ರತಿ ಮಾತಿನಲ್ಲೂ ಫನ್ ನೀಡಬಲ್ಲ. ಒಬ್ಬ ಸಂದರ್ಶಕ ಕೇಳುತ್ತಾನೆ "ಯಾರಾದರೂ ತರ್ಲೆ ಸಂದರ್ಶಕ ನಿಮ್ಮನ್ನು ಮಿ.ಡೆಪ್ ಅಂತ ಮಾತಾಡಿಸಿದರೆ ಏನಂತೀರಿ?" ಅದಕ್ಕೆ ಜಾನಿಯ ಉತ್ತರ ಹೀಗಿದೆ: "ಮಿ.ಡೆಪ್ ನಮ್ಮಪ್ಪ ಎನ್ನುತ್ತೇನೆ!" ಹಾಗೇನೆ. ಮತ್ತೊಬ್ಬ ಸಂದರ್ಶಕ "ದಿನಕ್ಕೆ ಎಷ್ಟು ಸಿಗರೇಟು ಸೇದುತ್ತೀರಿ?" ಎಂದು ಕೇಳಿದಾಗ ಜಾನಿ ಡೆಪ್ ಹೀಗೆ ಉತ್ತರಿಸುತ್ತಾನೆ: "ಒಂದು ಸಾವಿರ ಸಿಗರೇಟು!" "ಒಂದು ಸಾವಿರಾನಾ?" ಎಂದು ಆ ಸಂದರ್ಶಕ ಉದ್ಗಾರ ಎಳೆದಾಗ "ದಿನಕ್ಕೆ ಹತ್ತು ಸಾವಿರ ಸಿಗರೇಟು ಸೇದುವುದರ ಬಗ್ಗೆ ಯೋಚಿಸುತ್ತಿದ್ದೇನೆ..." ಎಂದುತ್ತರಿಸಿ ಡೆಪ್ ನಗುತ್ತಾನೆ.

ಹೀಗೆ ಒಮ್ಮೆ ಪ್ರತಿಭಾವಂತನಂತೆಯೂ, ಒಮ್ಮೆ ಭಾವುಕನಂತೆಯೂ, ಒಮ್ಮೆ ದ್ವಂದ್ವಮಯ ವ್ಯಕ್ತಿಯಂತೆಯೂ, ಒಮ್ಮೆ ರಸಿಕನಂತೆಯೂ, ಒಮ್ಮೆ ಸಂತನಂತೆಯೂ, ಒಮ್ಮೆ ಪೋಲಿಯಂತೆಯೂ ಗ್ರಹಿಕೆಗೆ ಸಿಗುವ ಜಾನಿ ಡೆಪ್ ಜೈಲಿಗೆ ಹೋಗಿಬಂದವನೂ ಆಗಿದ್ದಾನೆ. ಅದೇ ರೀತಿ ಒಂದಿಷ್ಟು ಹೇಳಿಕೆಗಳ ಮೂಲಕ ವಿವಾದಗಳಿಗೂ ದಾರಿಮಾಡಿಕೊಟ್ಟಿದ್ದಾನೆ. ಇವೆಲ್ಲವುಗಳಾಚೆಗೆ 'ಟ್ರಾನ್ಸೆಂಡೆನ್ಸ್', 'ಇನ್ ಟು ದಿ ವುಡ್ಸ್', 'ಬ್ಲಾಕ್ ಮಾಸ್', 'ಅಲೈಸ್ ಆನ್ ವಂಡರ್ ಲ್ಯಾಂಡ್- 2', 'ಪೈರೇಟ್ಸ್ ಆಫ್ ದಿ ಕೆರೆಬಿಯನ್-ಡೆಡ್ ಮೆನ್ ಟೆಲ್ ನೋ ಟೇಲ್ಸ್' ಒಳಗೊಂಡಂತೆ ಒಂದಿಷ್ಟು ಸಿನಿಮಾಗಳಿಗಾಗಿ ಮುಂದಿನ ದಿನಗಳಲ್ಲಿ ನಾವು ಕಾಯುವಂತೆ ಮಾಡಿದ್ದಾನೆ.

ಜಾನಿ ಡೆಪ್ ಅನೇಕ ಸಿನಿಮಾ ಸ್ಟಾರ್‌ಗಳ ಬದುಕಿಗೆ ಹಿಡಿದ ಕನ್ನಡಿಯಂತಿದ್ದಾನೆ.

ಹೃದಯಶಿವ



Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 18-06-2014 RNI No. KARKAN2005/14648

ರವಿ ಮನೆಗೆ ಜೂಹಿ ಬಂದಾಗ



ಜೂಹಿ ಚಾವ್ಲಾ ಎಂದಾಕ್ಷಣ ತಕ್ಷಣ ನೆನಪಾಗೋದು 'ಪ್ರೇಮಲೋಕ' ಚಿತ್ರ. 'ಪ್ರೇಮಲೋಕ'ದ ರವಿಚಂದ್ರನ್-ಜೂಹಿ ಚಾವ್ಲಾ ಜೋಡಿ ಮಾಡಿದ ಮೋಡಿ ಯಾವತ್ತಿಗೂ ಮರೆಯುವಂಥದ್ದಲ್ಲ. ಇಂಥ ಜೂಹಿ ರವಿಚಂದ್ರನ್ ಮನೆಯಲ್ಲಿ ಕಾಣಿಸಿಕೊಂಡರೆ ಹೇಗೆ? ಹೌದು, ಜೂಹಿ ಚಾವ್ಲಾ ರವಿಚಂದ್ರನ್ ಮನೆಗೆ ಬಂದಿದ್ದಾರೆ. ರವಿಚಂದ್ರನ್ ಮಗ ಮನೋರಂಜನ್ ಮೊದಲ ಬಾರಿಗೆ ಹೀರೋ ಆಗುತ್ತಿರುವ 'ರಣಧೀರ' ಚಿತ್ರಕ್ಕೆ ಶುಭಾಷಯ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ "ಮನೋರಂಜನ್ ಚಿಕ್ಕ ಹುಡುಗನಾಗಿದ್ದ ಕಾಲ ದಿಂದಲೂ ಜೂಹಿ ಅವನನ್ನು ನೋಡಿದ್ದಾಳೆ. 'ರಣಧೀರ' ಚಿತ್ರದ ಮುಹೂರ್ತಕ್ಕೆ ಬರಬೇಕಿದ್ದ ಜೂಹಿ ಆಗ ಕಾರಣಾಂತರಗಳಿಂದ ಬರಲು ಸಾಧ್ಯವಾಗದಿದ್ದುದರಿಂದ ಮನೋರಂಜನ್‌ಗೆ ಶುಭಾಷಯ ಹೇಳಲು ಈಗ ಬಂದಿದ್ದಾಳೆ" ಎಂದು ರವಿಚಂದ್ರನ್ ಹರ್ಷ ವ್ಯಕ್ತಪಡಿಸುತ್ತಾರೆ.

'ರಣಧೀರ'ದಲ್ಲಿ ತಮಗೆ ಪಾತ್ರ ಇದೆಯೋ, ಇಲ್ಲವೋ ಗೊತ್ತಿಲ್ಲ, ಈವರೆಗೆ ರವಿಚಂದ್ರನ್ ಆ ಬಗ್ಗೆ ಏನೂ ಹೇಳಲಿಲ್ಲ ಎಂದು ಜೂಹಿ ಹೇಳುತ್ತಾರೆ. ರವಿಚಂದ್ರನ್ ಇನ್ನಷ್ಟೇ ಇದರ ಬಗ್ಗೆ ಯೋಚಿಸಿ ಕನ್ಫರ್ಮ್ ಮಾಡುತ್ತಾರಂತೆ. ಈ ಸಂದರ್ಭದಲ್ಲಿ ಹಳೆಯ ನೆನಪುಗಳಿಗೆ ಜಾರಿದ ಜೂಹಿ ತಮ್ಮ ಹಾಗೂ ರವಿಚಂದ್ರನ್ ನಡುವಣ ಬಾಂಧವ್ಯದ 'ಪ್ರೇಮಲೋಕ'ದ ದಿನಗಳನ್ನು ಮೆಲುಕುಹಾಕಿದರು. 'ಪ್ರೇಮಲೋಕ'ದ ಚೆಲುವೆ ವಿಶ್ ಮಾಡಿಯಾಯಿತು. ಇನ್ನು 'ರಣಧೀರ' ಏನಾಗುತ್ತಾನೆ ಎಂಬುದನ್ನು ಕಾದುನೋಡಬೇಕು.

ಬಿಗ್ ಬಾಸ್-2 ಸದ್ಯದಲ್ಲೇ



ಸುವರ್ಣ ಚಾನೆಲ್‌ಗಾಗಿ ಸುದೀಪ್ ನಡೆಸಿಕೊಡಲಿರುವ 'ಬಿಗ್ ಬಾಸ್-2' ಜೂನ್ 22ರಿಂದ ಆರಂಭವಾಗುವ ಲಕ್ಷಣಗಳು ಕಂಡುಬರುತ್ತಿವೆ. ಬೇಸಿಗೆ ಕಳೆಯಲು ಮಲೇಶಿಯಾಗೆ ಹೋಗಿದ್ದ ಸುದೀಪ್ ಇದೀಗ ಬೆಂಗಳೂರಿಗೆ ಮರಳಿದ್ದು 'ಬಿಗ್ ಬಾಸ್-2'ರಲ್ಲಿ ಪಾಲ್ಗೊಳ್ಳಲು ಉತ್ಸುಕರಾಗಿದ್ದಾರಂತೆ. ಈ ಬಾರಿಯ ಬಿಗ್ ಬಾಸ್‌ನಲ್ಲಿ ಯಾರ್‍ಯಾರಿರುತ್ತಾರೆ? ಯಾಕಿರುತ್ತಾರೆ? ಎಂಬುದರ ಬಗ್ಗೆ ಇನ್ನಷ್ಟೇ ಮಾಹಿತಿ ಹೊರಬೀಳಬೇಕಿದೆ. ಕಳೆದ ಬಾರಿ ಈ-ಟಿವಿಗಾಗಿ ನಡೆಸಿಕೊಟ್ಟ ಈ ಕಾರ್ಯಕ್ರಮ ಜನಪ್ರಿಯತೆ ಗಳಿಸುವುದರ ಜೊತೆಗೆ ಕೆಲವು ವಿವಾದಗಳನ್ನೂ ಮೈಮೇಲೆ ಎಳೆದುಕೊಂಡಿತ್ತು. ತೀರಾ ಬಾಲಿಶವಾಗಿ ಕಾಣಿಸಿಕೊಂಡ ರಿಪಿಕುಮಾರ ಸ್ವಾಮಿ, ಮಹಾಜ್ಞಾನಿಯಂತೆ ಪೋಸು ಕೊಡುತ್ತಿದ್ದ ಬ್ರಹ್ಮಾಂಡ ಗುರೂಜಿ, ಪದೇಪದೇ ಜಗಳಕ್ಕಿಳಿಯುತ್ತಿದ್ದ ನರ್ಸ್ ಜಯಲಕ್ಷ್ಮಿ- ಇಂಥವರ ನಡುವೆ ಸ್ವಲ್ಪ ಗಂಭೀರವಾಗಿದ್ದವರೆಂದರೆ ವಿಜಯ ರಾಘವೇಂದ್ರ ಹಾಗೂ ನಿಖಿತಾ. ಈ ಕಾರ್ಯಕ್ರಮ ನಿಜಕ್ಕೂ ಕ್ರೇಜ್ ಹುಟ್ಟುಹಾಕಿದ್ದುದರ ಜೊತೆಗೆ ಪ್ರಜ್ಞಾವಂತ, ಸಭ್ಯಸ್ಥ ಕುಟುಂಬದ ಜನರ ಕೆಂಗಣ್ಣಿಗೂ ಗುರಿಯಾಗದೆ ಇರಲಿಲ್ಲ. "ಇದೂ ಒಂದು ಕಾರ್ಯಕ್ರಮಾನ ಥೂ..." ಎನ್ನುವಷ್ಟರಮಟ್ಟಿಗೆ ಛೀಮಾರಿ ಹಾಕಿಸಿಕೊಂಡಿತ್ತು. ಈ ಬಾರಿಯ ಬಿಗ್ ಬಾಸ್ ಏನೇನು ಅವಾಂತರಗಳನ್ನು ಮಾಡಿಕೊಳ್ಳಲಿದೆ ಎಂಬುದನ್ನು ನೋಡಬೇಕು.

ಸಿಗರೇಟ್ ಸೇದ್ಬೇಡಿ ಪ್ರೀತಿ ಮಾಡ್ಬೇಡಿ

ಸಾಕಷ್ಟು ಸಿಗರೇಟು ಸೇದುವ ನಾಗಶೇಖರ್ 'ಸಿಗರೇಟ್' ಸಿನಿಮಾದ ನಾಯಕ ನಟ ಎಂಬುದು ನಿಮಗೆಲ್ಲ ಗೊತ್ತಿರುವಂಥದ್ದೇ. ಲಕ್ಕಿ ಶಂಕರ್ ನಿರ್ದೇಶನದ ಈ ಚಿತ್ರವು ಸಿಗರೇಟ್ ಪ್ರಿಯರಲ್ಲಿ ಸಿಗರೇಟ್ ಬಗೆಗಿನ ಆತಂಕ, ಅಪಾಯಗಳ ಅರಿವು ಮೂಡಿಸಿ ಟೊಬ್ಯಾಕೋ ಫ್ರೀ ಪರಿಸರ ನಿರ್ಮಾಣ ಮಾಡಲು ಹೊರಟಿದೆಯಂತೆ. ಈಗಾಗಲೇ ಚಿತ್ರೀಕರಣ ಮುಗಿಸಿಕೊಂಡಿರುವ 'ಸಿಗರೇಟ್' ಪೋಸ್ಟ್ ಪ್ರೊಡಕ್ಷನ್ ಕೆಲಸಗಳಲ್ಲಿ ನಿರತವಾಗಿದೆ. ನಾಗಶೇಖರ್ ಜೊತೆಗೆ ರೂಪಶ್ರೀ, ರಕ್ಷಿತಾ ಪೊನ್ನಮ್ಮ ನಾಯಕಿಯರಾಗಿ ನಟಿಸುತ್ತಿದ್ದು ಇಂದ್ರಸೇನ ಹಾಡುಗಳನ್ನು ಮಾಡಿಕೊಟ್ಟಿದ್ದಾರೆ. ರೂಪಶ್ರೀ, ತಮ್ಮ ಕಾಲೇಜು ದಿನಗಳಲ್ಲಿ 'ಸಿಗರೇಟ್ ಬಿಟ್ಟುಬಿಡಿ' ಕ್ಯಾಂಪೇನ್‌ಗಳಲ್ಲಿ ಭಾಗವಹಿಸಿ


ಚಂದನಾ ಜಯಸೂರ್ಯ





ಧೂಮಪಾನಿಗಳಲ್ಲಿ ಅರಿವು ಮೂಡಿಸುತ್ತಿದ್ದ ಕ್ಷಣಗಳನ್ನು ನೆನಪಿಸಿಕೊಂಡರು. ನಿರ್ಮಾಪಕ ಶಿವು ಕಬ್ಬಣ ಮಾತನಾಡುತ್ತ "ನಾವು ಸಿಗರೇಟ್ ಸೇವನೆಯಿಂದ ಉಂಟಾಗುವ ಸಮಸ್ಯೆಗಳ ಅರಿವು ಮೂಡಿಸಲು ಡಾಕ್ಯುಮೆಂಟ್ರಿ ಮಾಡುತ್ತಿಲ್ಲ. ಈ ಚಿತ್ರವು ಸಮಾಜಕ್ಕೆ ಸಂದೇಶ ನೀಡುವುದರ ಜೊತೆಗೆ ಪಕ್ಕಾ ಕಮರ್ಷಿಯಲ್ ಎಲಿಮೆಂಟ್ಸ್ ಇರುವಂಥ ಸಿನಿಮಾ" ಎನ್ನುತ್ತಾರೆ. ಇದೇ ಸಂದರ್ಭದಲ್ಲಿ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಂಡಿದ್ದು ಕಿದ್ವಾಯಿ ಆಸ್ಪತ್ರೆಯ ಡಾ.ಪ್ರಮೋದ್ ಬಿಡುಗಡೆ ಮಾಡಿರುತ್ತಾರೆ. ಅನೇಕ ವಿಶೇಷತೆಗಳನ್ನು ಹೊಂದಿರುವ ಈ ಚಿತ್ರದ ಮತ್ತೊಂದು ವಿಶೇಷವೆಂದರೆ ನಾಯಕಿಯರು ನಾಯಕನಿಗಿಂತ ಎತ್ತರ ಇರೋದು!

ಮಾಲಾಶ್ರೀಗೆ ವೈಬ್ರೇಶನ್



'ಗಂಗ ಯಮುನಾ' ನಂತರ ಎಸ್.ಮಹೇಂದ್ರನ್ ಮಾಲಾಶ್ರೀಗೆ ಮತ್ತೊಂದು ಸಿನಿಮಾ ಮಾಡುತ್ತಿದ್ದಾರೆ. ಆ ಚಿತ್ರದ ಹೆಸರೇ 'ಮಹಾಕಾಳಿ'. ಚಿತ್ರೀಕರಣದ ವೇಳೆ ಒಂದು ಬಗೆಯ ವೈಬ್ರೇಶನ್ ಇದ್ದಾಗಿಯೂ, ಆ ವೈಬ್ರೇಶನ್ ಹಿಂದೆ ಕಾಳಿ ಎಂಬ ಹೆಸರಿನ ಪ್ರಭಾವ ಇತ್ತೋ ಏನೋ ಎಂಬುದು ಮಾಲಾಶ್ರೀಯವರ ನಂಬಿಕೆಯಾದರೆ, ಅದೆಲ್ಲ ಏನೂ ಇಲ್ಲ ಎಂಬುದು ಕೊಳ್ಳೇಗಾಲ ಮೂಲದ ಮಹೇಂದರ್ ಮಾತು. ಚಿತ್ರೀಕರಣದ ವೇಳೆ ನಿರ್ಮಾಪಕ ರಮೇಶ್ ಕಶ್ಯಪ್ ಅವರಿಗೂ ಈ ಥರದ ಅನುಭವವಾಗಿದ್ದು ತಾವೂ ಕೂಡ ಪೂಜೆಪುನಸ್ಕಾರ ಮಾಡಿಸಿದ್ದಾಗಿ ಹೇಳಿಕೊಂಡಿದ್ದಾರೆ. ಅಜಯ್ ಕುಮಾರ್ ಸ್ಟೋರಿ ಬರೆದಿರುವ ಈ ಸಿನಿಮಾ ಬರುವ ಆಗಸ್ಟ್ ತಿಂಗಳಿನಲ್ಲಿ ಬಿಡುಗಡೆಯಾಗುವ ಲಕ್ಷಣಗಳಿವೆ. 'ಮಹಾಕಾಳಿ'ಗೆ ಜನರ ಆಶೀರ್ವಾದವಿರಲಿ ಅಲ್ಲವೇ?

ರಕ್ಷಿತ್ ಹಿರಿತೆರೆಗೆ



'ಅಮೃತ ವರ್ಷಿಣಿ' ಧಾರಾವಾಹಿ ಮೂಲಕ ಒಂದುಮಟ್ಟಿಗೆ ಹೆಸರು ಮಾಡಿರುವ ರಕ್ಷಿತ್ 'ನನ್ ಲವ್ ಟ್ರ್ಯಾಕ್' ಎಂಬ ಹೆಸರಿನ ಸಿನಿಮಾದಲ್ಲಿ ನಾಯಕನಟನ ಪಾತ್ರ ಮಾಡುತ್ತಿದ್ದಾರೆ. ತಮಿಳಿನಲ್ಲಿ ಅನೇಕ ಚಿತ್ರಗಳನ್ನು ಮಾಡಿರುವ ಕಥಿರ್ ಈ ಚಿತ್ರದ ನಿರ್ದೇಶಕ. ನಿವೃತ್ತ ಎ.ಸಿ.ಪಿ. ಅಧಿಕಾರಿ ಕೃಷ್ಣಮೂರ್ತಿ ಬಂಡವಾಳ ಹಾಕುತ್ತಿರುವ ಈ ಚಿತ್ರಕ್ಕೆ ರಕ್ಷಿತ್ ಮತ್ತು ನವೀನ್ ಜಾಯಿಂಟ್ ಪ್ರೊಡ್ಯೂಸರ್ಸ್. ಲವ್ ಕಂ ರೊಮ್ಯಾಂಟಿಕ್ ಕಥೆಯುಳ್ಳ ಈ ಚಿತ್ರಕ್ಕೆ ಹೊಸಮುಖ ನಿಧಿ ಹೀರೋಯಿನ್. ಪುನೀತ್ ರಾಜಕುಮಾರ್ ಚಿತ್ರಕ್ಕೆ ಶುಭ ಕೋರಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com